ಈ)	ನಿಡಗುಂದಿ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ನಿಡಗುಂದಿ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲು ವಹಿವಾಟು ಸಲಹೆಗಾರರಾಗಿ ಮೆ॥ಐಡೆಕ್ ಸಂಸ್ಥೆಯನ್ನು ನೇಮಕ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಸದರಿ ಸಂಸ್ಥೆಯವರು ಸ್ಥಳ ಅಧ್ಯಯನ ಕೈಗೊಂಡಿದ್ದು, ಆರ್ಥಿಕ ಕಾರ್ಯಸಾಧ್ಯತಾ ವರದಿ, ಟೆಂಡರ್ ದಸ್ತಾವೇಜು ಹಾಗೂ ಇನ್ನಿತರೆ ದಾಖಲೆಗಳನ್ನು ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ.

ವೈಎಸ್‌ಡಿ-ಇಬಿಬಿ/111/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು

ಅನುಬಂಧ-1

ಕರ್ನಾಟಕ ರಾಜ್ಯಾದ್ಯಂತ ಹೊಸದಾಗಿ ನಿರ್ಮಿಸಬೇಕಾಗಿರುವ ತಾಲ್ಲೂಕು ಕ್ರೀಡಾಂಗಣಗಳ ವಿವರ

ಕ್ರ. ಸಂ	ಜಿಲ್ಲೆ	ತಾಲ್ಲೂಕು
1.	ಬಾಗಲಕೋಟೆ	ಬಾದಾಮಿ
2.	ಬಾಗಲಕೋಟೆ	ಇಳಕಲ್
3.	ಬಾಗಲಕೋಟೆ	ಗುಳೇದಗುಡ್ಡ
4.	ಬಾಗಲಕೋಟೆ	ರಬಕವಿ-ಬನಹಟ್ಟಿ
5.	ವಿಜಯನಗರ	ಕೂಡ್ಲಿಗಿ
6.	ವಿಜಯನಗರ	ಹಗರಿಬೊಮ್ಮನಹಳ್ಳಿ
7.	ವಿಜಯನಗರ	ಕೊಟ್ಟೂರು
8.	ಬಳ್ಳಾರಿ	ಕುರುಗೋಡು
9.	ಬಳ್ಳಾರಿ	ಕಂಪ್ಲಿ
10.	ಬೆಳಗಾವಿ	ರಾಮದುರ್ಗ
11.	ಬೆಳಗಾವಿ	ಮುಡಲಗಿ
12.	ಬೆಳಗಾವಿ	ನಿಪ್ಪಾಣಿ
13.	ಬೆಳಗಾವಿ	ಕಾಗವಾಡ
14.	ಬೆಳಗಾವಿ	ಕಿತ್ತೂರು
15.	ಬೆಳಗಾವಿ	ಯರಗಟ್ಟಿ
16.	ಬೆಂಗಳೂರು ನಗರ	ಯಲಹಂಕ
17.	ಬೆಂಗಳೂರು ನಗರ	ಕೆಂಗೇರಿ
18.	ಬೆಂಗಳೂರು ನಗರ	ಕೆ.ಆರ್. ಪುರ
19.	ಬೀದರ್	ಭಾಲ್ಕಿ
20.	ಬೀದರ್	ಚಿಟ್ಗುಪ್ಪ
21.	ಬೀದರ್	ಹುಲಸೂರು
22.	ಬೀದರ್	ಕಮಲನಗರ
23.	ಚಾಮರಾಜನಗರ	ಯಳಂದೂರು
24.	ಚಿಕ್ಕಬಳ್ಳಾಪುರ	ಗುಡಿಬಂಡೆ
25.	ಚಿಕ್ಕಬಳ್ಳಾಪುರ	ಚೇಳೂರು
26.	ಚಿಕ್ಕಮಗಳೂರು	ಶೃಂಗೇರಿ
27.	ಚಿಕ್ಕಮಗಳೂರು	ಕೊಪ್ಪ
28.	ಚಿಕ್ಕಮಗಳೂರು	ತರೀಕೆರೆ
29.	ಚಿಕ್ಕಮಗಳೂರು	ಅಜ್ಜಂಪುರ
30.	ಚಿಕ್ಕಮಗಳೂರು	ಕಳಸ
31.	ಚಿತ್ರದುರ್ಗ	ಮೊಳಕಾಲ್ಮೂರು
32.	ದಕ್ಷಿಣ ಕನ್ನಡ	ಉಳ್ಳಾಲ
33.	ದಕ್ಷಿಣ ಕನ್ನಡ	ಮುಲ್ಕಿ
34.	ದಕ್ಷಿಣ ಕನ್ನಡ	ಬಂಟ್ವಾಳ
35.	ದಕ್ಷಿಣ ಕನ್ನಡ	ಕಡಬ
36.	ದಾವಣಗೆರೆ	ನ್ಯಾಮತಿ
37.	ಧಾರವಾಡ	ಕುಂದಗೋಳ
38.	ಧಾರವಾಡ	ನವಲಗುಂದ
39.	ಧಾರವಾಡ	ಹುಬ್ಬಳ್ಳಿ (ಗ್ರಾ)
40.	ಧಾರವಾಡ	ಹುಬ್ಬಳ್ಳಿ (ನ)
41.	ಗದಗ	ಗಜೇಂದ್ರಗಡ
42.	ಗದಗ	ಲಕ್ಷ್ಮೇಶ್ವರ
43.	ಹಾವೇರಿ	ರಟ್ಟೀಹಳ್ಳಿ

44.	[illegible]	[illegible]
45.	ಕಲಬುರಗಿ	[illegible]
46.	ಕಲಬುರಗಿ	ಕಾಳಗಿ
47.	ಕಲಬುರಗಿ	ಯಡ್ರಾಮಿ
48.	ಕಲಬುರಗಿ	ಅತನೂರು
49.	ಕೊಡಗು	ಕುಶಾಲನಗರ
50.	ಕೊಡಗು	ವಿರಾಜಪೇಟೆ
51.	ಕೊಡಗು	ಪೊನ್ನಂಪೇಟೆ
52.	ಕೊಡಗು	ಭಾಗಮಂಡಲ
53.	ಕೊಪ್ಪಳ	ಕನಕಗಿರಿ
54.	ಕೊಪ್ಪಳ	ಕಾರಟಗಿ
55.	ಕೊಪ್ಪಳ	ಕುಕನೂರು
56.	ಮೈಸೂರು	ಟಿ.ನರಸೀಪುರ
57.	ಮೈಸೂರು	ಸರಗೂರು
58.	ಮೈಸೂರು	ಸಾಲಿಗ್ರಾಮ
59.	ರಾಮನಗರ	ಮಾಗಡಿ
60.	ರಾಮನಗರ	ಚನ್ನಪಟ್ಟಣ
61.	ರಾಮನಗರ	ಹಾರೋಹಳ್ಳಿ
62.	ರಾಯಚೂರು	ಸಿರವಾರ
63.	ರಾಯಚೂರು	ಮಸ್ಕಿ
64.	ಉಡುಪಿ	ಬ್ರಹ್ಮಾವರ
65.	ಉಡುಪಿ	ಬೈಂದೂರು
66.	ಉಡುಪಿ	ಹೆಬ್ರಿ
67.	ಶಿವಮೊಗ್ಗ	ಭದ್ರಾವತಿ
68.	ತುಮಕೂರು	ಗುಬ್ಬಿ
69.	ಉತ್ತರ ಕನ್ನಡ	ಹೊನ್ನಾವರ
70.	ಉತ್ತರ ಕನ್ನಡ	ಕುಮಟಾ
71.	ಉತ್ತರ ಕನ್ನಡ	ದಾಂಡೇಲಿ
72.	ವಿಜಯಪುರ	ಬಸವನ ಬಾಗೇವಾಡಿ
73.	ವಿಜಯಪುರ	ತಾಳಿಕೋಟೆ
74.	ವಿಜಯಪುರ	ದೇವರ ಹಿಪ್ಪರಗಿ
75.	ವಿಜಯಪುರ	ಚಡಚಣ
76.	ವಿಜಯಪುರ	ತಿಕೋಟ
77.	ವಿಜಯಪುರ	ಬಬಲೇಶ್ವರ
78.	ವಿಜಯಪುರ	ಕೊಲ್ಹಾರ್
79.	ವಿಜಯಪುರ	ನಿಡಗುಂದಿ
80.	ವಿಜಯಪುರ	ಆಲಮೇಲ
81.	ಯಾದಗಿರಿ	ಸುರಪುರ
82.	ಯಾದಗಿರಿ	ವಡಗೇರಾ
83.	ಯಾದಗಿರಿ	ಹುಣಸಗಿ

ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ತಾಲ್ಲೂಕು ಕ್ರೀಡಾಂಗಣಗಳ ವಿವರಗಳು ಈ ಕೆಳಕಂಡಂತಿವೆ:

ಕ್ರ ಸಂ	ಜಿಲ್ಲೆ	ತಾಲ್ಲೂಕು ಕ್ರೀಡಾಂಗಣ	ವಿಸ್ತೀರ್ಣ
1.	ದಕ್ಷಿಣ ಕನ್ನಡ	ಬಂಟ್ವಾಳ	9 ಎಕರೆ
2.	ಉಡುಪಿ	ಬ್ರಹ್ಮಾವರ	5.5 ಎಕರೆ
3.	ಉಡುಪಿ	ಬೈಂದೂರು	10 ಎಕರೆ
4.	ವಿಜಯಪುರ	ಬಸವನ ಬಾಗೇವಾಡಿ	6 ಎಕರೆ
5.	ಬೆಳಗಾವಿ	ರಾಮದುರ್ಗ	10 ಎಕರೆ
6.	ವಿಜಯಪುರ	ನಿಡಗುಂದಿ	07 ಎಕರೆ
7.	ವಿಜಯಪುರ	ಬಬಲೇಶ್ವರ	06ಎಕರೆ
8.	ಬೆಳಗಾವಿ	ಕಿತ್ತೂರು	17 ಎಕರೆ
9.	ಬಾಗಲಕೋಟೆ	ರಬಕವಿ-ಬನಹಟ್ಟಿ	07 ಎಕರೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 379

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಆಲಮಟ್ಟಿ ಹತ್ತಿರ ಆರಳದಿನ್ನಿ ಗ್ರಾಮದ ಸರ್ವೆ ಸರ್ವೆ ನಂಬರ್‌ಗಳಾದ 6, 8 ಹಾಗೂ 26 ರಲ್ಲಿನ ಜಾಗಗಳನ್ನು ಬಸ್ ನಿಲ್ದಾಣ ನಿರ್ಮಿಸಲು ಲೋಕೋಪಯೋಗಿ ಇಲಾಖೆಯಿಂದ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಲಾಗಿದೆಯೇ; ಈ ಜಾಗಗಳ ಒಟ್ಟು ವಿಸ್ತೀರ್ಣವೆಷ್ಟು;	ಆಲಮಟ್ಟಿ ಹತ್ತಿರ ಅರಳದಿನ್ನಿ ಗ್ರಾಮದ ರಿ.ಸ.ನಂ. 06/2 ರಲ್ಲಿಯ 16 ಗುಂಟೆ, ರಿ.ಸ.ನಂ. 08/2 ರಲ್ಲಿಯ 01 ಎಕರೆ ಹಾಗೂ ರಿ.ಸ.ನಂ. 26/3ಎ ರಲ್ಲಿಯ 13 ಗುಂಟೆಯಂತೆ ಒಟ್ಟು 01 ಎಕರೆ 29 ಗುಂಟೆ ಜಮೀನನ್ನು ಲೋಕೋಪಯೋಗಿ ಇಲಾಖೆಯಿಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಹಸ್ತಾಂತರಿಸಿಕೊಳ್ಳಲಾಗಿರುತ್ತದೆ.
ಆ.	ಹಾಗಿದ್ದಲ್ಲಿ, ಆಲಮಟ್ಟಿ ಹತ್ತಿರ ಸದರಿ ಸರ್ವೆ ನಂಬರ್‌ಗಳಲ್ಲಿ ಹೈಟೆಕ್ ಮಾದರಿಯ ಬಸ್ ನಿಲ್ದಾಣ ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು;	ಸದರಿ ನಿವೇಶನದ ಭೂ ಮಾಪನ ಕೈಗೊಂಡು ಸ್ಥಳದಲ್ಲಿ ಚಕ್ಕಬಂದಿ ಗುರುತಿಸಿ, ಪಹಣಿಯಲ್ಲಿ ನಿಗಮದ ಹೆಸರು ದಾಖಲಿಸುವಂತೆ ಕಂದಾಯ ಇಲಾಖೆಗೆ ಕೋರಲಾಗಿದ್ದು, ಪ್ರಕ್ರಿಯೆ ಜಾರಿಯಲ್ಲಿದೆ.
ಇ.	ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ತಗಲುವ ವೆಚ್ಚವೆಷ್ಟು;	ಜಮೀನನ್ನು ನಿಗಮದ ಹೆಸರಿಗೆ ಹಸ್ತಾಂತರಗೊಂಡ ನಂತರ, ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿಗೆ ತಗಲುವ ವೆಚ್ಚವನ್ನು ಅಂದಾಜಿಸಲಾಗುವುದು.
ಈ.	ಆಲಮಟ್ಟಿ ಹತ್ತಿರ ಪ್ರವಾಸಿಗರ ಅನುಕೂಲಕ್ಕಾಗಿ ಹೈಟೆಕ್ ಮಾದರಿಯ ಬಸ್ ನಿಲ್ದಾಣವನ್ನು ನಿರ್ಮಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು? (ವಿವರ ನೀಡುವುದು)	ಜಮೀನು ನಿಗಮದ ಹೆಸರಿಗೆ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು, ನಿವೇಶನವು ಹಸ್ತಾಂತರಗೊಂಡ ನಂತರ, ನಿಗಮದ ಆರ್ಥಿಕ ಪರಿಸ್ಥಿತಿ ಹಾಗೂ ಆದ್ಯತೆಯನುಸಾರ ಆಲಮಟ್ಟಿ ಹತ್ತಿರ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು.

ಸಂಖ್ಯೆ: ಟಿಡಿ 171 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

<u>**ಕರ್ನಾಟಕ ವಿಧಾನಸಭೆ**</u>

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ನರೇಂದ್ರ ಆರ್ (ಹನೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 380
ಉತ್ತರಿಸಬೇಕಾದ ದಿನಾಂಕ : 14-09-2022
ಉತ್ತರಿಸಬೇಕಾದವರು : ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ವಿವಿಧ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಆಡಳಿತ ಮಂಡಳಿಯ ಕೋಟಾದಡಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿವೇತನ ಮಂಜೂರು ಮಾಡದೆ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
ಆ)	ಬಂದಿದಲ್ಲಿ, ಯಾವ ಕಾಲಮಿತಿಯೊಳಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು; ವಿದ್ಯಾರ್ಥಿವೇತನ ಮಂಜೂರು ಮಾಡಲು ಸರ್ಕಾರಕ್ಕಿರುವ ಅಡೆ-ತಡೆಗಳೇನು? (ವಿವರ ಒದಗಿಸುವುದು)	ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು 2020-21ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಅನ್ವಯವಾಗುವಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ಸದರಿ ಮಾರ್ಗಸೂಚಿಯ ಪ್ಯಾರಾ 5.9 ರಲ್ಲಿ ಮ್ಯಾನೇಜ್‌ಮೆಂಟ್ ಕೋಟಾದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆ ಅನ್ವಯವಾಗುವುದಿಲ್ಲವೆಂದು ಈ ಕೆಳಗಿನಂತೆ ಮಾರ್ಗಸೂಚಿಯನ್ನು ಹೊರಡಿಸಿರುತ್ತಾರೆ. ***5.9. All seats filled through arbitrary and non-transparent processes (including management quota, NRI quota, spot admission etc.) without following the merit criteria as decided by the State Government are not eligible for these scholarships. The fees claimed against management quota seats, spot admission seat in any institution/ University will not be reimbursed.*** ಸದರಿ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿದ್ದು, ಶೇಕಡ 60 ರಷ್ಟು ಮೊತ್ತವನ್ನು ಕೇಂದ್ರ ಸರ್ಕಾರವೇ ಪಾವತಿಸುತ್ತಿರುವದರಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಈ ಸಂಬಂಧ ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ. ಸದರಿ ಮಾರ್ಗಸೂಚಿಗಳಂತೆ ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೆ ಹಾಗೂ ಯಾವುದೇ ಕೌನ್ಸಿಲಿಂಗ್ ಇಲ್ಲದೇ ನೇರವಾಗಿ ವಿದ್ಯಾರ್ಥಿಯ ತನ್ನ ಇಚ್ಛೆಯ ಅನುಸಾರವಾಗಿ ಆಡಳಿತ ಮಂಡಳಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ವಿದ್ಯಾರ್ಥಿವೇತನಕ್ಕೆ ಪರಿಗಣಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ.

ಸಂಖ್ಯೆ: ಸಕಇ 497 ಪಕವಿ 2022

(ಶ್ರೀ ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	381
ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	14/09/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸರ್ಕಾರ ಪ್ರಸ್ತುತ ಒದಗಿಸಿಕೊಡುತ್ತಿರುವ ಯೋಜನಾ ಸೌಲಭ್ಯಗಳಾವುವು; ಕಳೆದ ಎರಡು ವರ್ಷಗಳಲ್ಲಿ ಎಷ್ಟು ಜನ ಕಾರ್ಮಿಕ ಫಲಾನುಭವಿಗಳಿಗೆ ಈ ಯೋಜನಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ;	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಈ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗಾಗಿ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. ವಿವಿಧ ಸೌಲಭ್ಯಗಳಡಿ ಕಳೆದ ಎರಡು ವರ್ಷದಲ್ಲಿ **18,02,312** ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗಿದೆ.
ಆ)	ಕಟ್ಟಡ ನಿರ್ಮಾಣ ಕಾರ್ಮಿಕರೆಂದು ಪರಿಗಣಿಸಲು ಸರ್ಕಾರ ವಿಧಿಸಿರುವ ಕಾನೂನು ನಿಯಮಗಳಾವುವು;	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 12 ರ ಪ್ರಾವದಾನಗಳನ್ವಯ ನೋಂದಣಿ ಪೂರ್ವದಲ್ಲಿ 12 ತಿಂಗಳ ಅವಧಿಯಲ್ಲಿ(ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಮತ್ತು 18–60 ರ ವಯೋಮಾನದ ಈ ಕೆಳಗೆ ನಮೂದಿಸಿರುವ ವಿವಿಧ ವರ್ಗದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ಗುರುತಿಸಿ, ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಲಾಗುತ್ತಿದೆ.

		1. ನಿರ್ಮಾಣ 2. ಮಾರ್ಪಾಡು 3. ರಿಪೇರಿ 4. ನಿರ್ವಹಣೆ ಅಥವಾ ಕಟ್ಟಡ ಕೆಡವುವಿಕೆಗೆ ಸಂಬಂಧಿಸಿದ ಕಾಮಗಾರಿ 5. ಕಟ್ಟಡಗಳು 6. ಬೀದಿಗಳು 7. ರಸ್ತೆಗಳು 8. ರೈಲ್ವೆಗಳು 9. ಟ್ರಾಮ್‌ವೇಗಳು 10. ಏರ್‌ಫೀಲ್ಡ್ಸ್ 11. ನೀರಾವರಿ ಚರಂಡಿ 12. ಏರಿ/ಕಟ್ಟೆಕಟ್ಟುವುದು ಮತ್ತು ನೌಕಾ ಕಾಮಗಾರಿಗಳು 13. ಪ್ರವಾಹ ನಿಯಂತ್ರಣ ಕಾಮಗಾರಿಗಳು (ಮಳೆ ನೀರು, ಚರಂಡಿ ಕಾಮಗಾರಿಗಳು ಸೇರಿ) 14. ವಿದ್ಯುತ್ ಉತ್ಪಾದನೆ 15. ಪ್ರಸರಣ ಮತ್ತು ವಿತರಣೆ 16. ಜಲ ಕಾಮಗಾರಿಗಳು (ನೀರು ವಿತರಣಾ ನಾಲೆಗಳು ಸೇರಿ) 17. ತೈಲ ಮತ್ತು ಅನಿಲ ಸ್ಥಾವರಗಳು 18. ವಿದ್ಯುತ್ ಮಾರ್ಗಗಳು 19. ವೈರ್‌ಲೆಸ್ 20. ರೇಡಿಯೋ 21. ದೂರದರ್ಶನ 22. ದೂರವಾಣಿ 23. ದೂರಸಂಪರ್ಕ ಮತ್ತು ಸಮುದ್ರ ಸಂವಹನಗಳಿಗೆ ಸಂಬಂಧಿಸಿದ ನಿರ್ಮಾಣ/ನವೀಕರಣ ಮತ್ತು ದುರಸ್ತಿ 24. ಅಣೆಕಟ್ಟುಗಳು 25. ನಾಲೆಗಳು 26. ಜಲಾಶಯಗಳು 27. ಜಲ ಮೂಲಗಳು 28. ಸುರಂಗಗಳು 29. ಸೇತುವೆಗಳು 30. ವಯಾಡಕ್ಟ್ಸ್ 31. ಆಕ್ವೆಡಕ್ಟ್ಸ್ 32. ಕೊಳವೆ ಮಾರ್ಗಗಳ ನಿರ್ಮಾಣ 33. ಸ್ಥಾವರಗಳು 34. ಕೂಲಿಂಗ್ ಟವರ್‌ಗಳು ಮತ್ತು ಪ್ರಸರಣ ಸ್ಥಾವರಗಳು. ಹೆಚ್ಚುವರಿ ನಿರ್ಮಾಣ ಕೆಲಸಗಳು: 35. ಕಲ್ಲು ಗಣಿಗಾರಿಕೆ ಕಾಯ್ದೆ 1952ರ ವ್ಯಾಪ್ತಿಗೆ ಒಳಪಡದ ರಸ್ತೆ ಮತ್ತು ಕಟ್ಟಡ ನಿರ್ಮಾಣದ ಕಲ್ಲು ಕೆಲಸ 36. ನಿರ್ಮಾಣದಲ್ಲಿ ಚಪ್ಪಡಿ/ಟೈಲ್ಸ್‌ಗಳನ್ನು ಅಳವಡಿಸುವುದು 37. ಯುಜಿಡಿ ನಿರ್ಮಾಣ ಸೇರಿದಂತೆ ಒಳಚರಂಡಿ ಮತ್ತು ಪ್ಲಂಬಿಂಗ್ ಕೆಲಸ 38. ವೈರಿಂಗ್, ವಿತರಣೆ ಪ್ಯಾನಲ್ ಫಿಕ್ಸಿಂಗ್ ಇತ್ಯಾದಿಗಳನ್ನು ಒಳಗೊಂಡ ವಿದ್ಯುತ್ ಕೆಲಸ 39. ಕೂಲಿಂಗ್ ಮತ್ತು ಹೀಟಿಂಗ್ ಸಿಸ್ಟಂಗಳ ಸ್ಥಾಪನೆ ಮತ್ತು ಅಳವಡಿಕೆ 40. ಲಿಫ್ಟ್, ಎಕ್ಸಲೇಟರ್ ಇತ್ಯಾದಿಗಳ ಸ್ಥಾಪನೆ 41. ಸೆಕ್ಯೂರಿಟಿ ಗೇಟ್‌ಗಳ ಸ್ಥಾಪನೆ 42. ಕಬ್ಬಿಣ/ಲೋಹದ ಗ್ರಿಲ್‌ಗಳು, ಕಿಟಕಿ, ಬಾಗಿಲುಗಳ ಸ್ಥಾಪನೆ 43. ನೀರಿನ ಕೊಯ್ಲು ರಚನೆಗಳ ನಿರ್ಮಾಣ 44. ಫ್ಲೋರಿಂಗ್, ಫಾಲ್ಸ್‌ಸೀಲಿಂಗ್, ವಾಲ್

ಪ್ಯಾನಲಿಂಗ್ ಮುಂತಾದವುಗಳನ್ನು ಒಳಗೊಂಡ ಒಳಾಂಗಣ ವಿನ್ಯಾಸ 45. ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಅಳವಡಿಸುವ ಗ್ಲಾಸ್ ಪ್ಯಾನಲ್‌ಗಳು, ಎಸಿಪಿ ಶೀಟ್‌ಗಳು, ಸ್ಪೈಡರ್ ಗ್ಲೇಜಿಂಗ್‌ಗಳು 46.ಪ್ರೀ-ಫ್ಯಾಬ್ರಿಕೇಟೆಡ್ ಕಾಂಕ್ರೀಟ್ ಮಾಡ್ಯೂಲ್ಸ್, ಕಾಂಕ್ರೀಟ್ ಬ್ರಿಕ್ಸ್, ಬ್ಲಾಕ್ಸ್, ಹಾಲೋಬ್ಲಾಕ್ಸ್, ಟೈಲ್ಸ್ ಮುಂತಾದವುಗಳ ಅಳವಡಿಕೆ 47.ಸಿಗ್ನೇಜ್, ರಸ್ತೆ ಪೀಠೋಪಕರಣಗಳು, ಬಸ್ ಆಶ್ರಯಗಳು/ ಸ್ಟ್ಯಾಂಡ್, ಸಿಗ್ನಲಿಂಗ್ ಸಿಸ್ಟಮ್ಸ್ ಮುಂತಾದವುಗಳ ನಿರ್ಮಾಣ 48.ರೋಟರಿಗಳ ನಿರ್ಮಾಣ ಮತ್ತು ಸ್ಥಾಪನೆ, ಕಾರಂಜಿಗಳು, ಸಾರ್ವಜನಿಕ ಉದ್ಯಾನವನ ಮತ್ತು ತೋಟಗಳಲ್ಲಿ ಈಜುಕೊಳಗಳು ಇತ್ಯಾದಿಗಳ ಅಳವಡಿಕೆ 49. ನಿರ್ಮಾಣ ಉದ್ದೇಶಗಳಿಗಾಗಿ ಭೂಮಿಯ ಕೆಲಸ, ಭೂಮಿಯ ಹರಡುವಿಕೆ, ನೆಲಸಮಗೊಳಿಸುವಿಕೆ ಮತ್ತು ಭೂಮಿಯ ಕತ್ತರಿಸುವಿಕೆ ಇತ್ಯಾದಿ ಕೆಲಸಗಳು 50. ತಾತ್ಕಾಲಿಕ ಆಶ್ರಯ ತಾಣಗಳ ನಿರ್ಮಾಣ ಮತ್ತು ಅಳವಡಿಕೆ 51. ಫಿಲಂಸೆಟ್‌ಗಳ ನಿರ್ಮಾಣ ಮತ್ತು ಅಳವಡಿಕೆ. 52ಕಲ್ಲು ಕೆಲಸ.

ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:

ಎ) ನಮೂನೆ-5ರಲ್ಲಿ ಅರ್ಜಿ.

ಬಿ) ಮಾಲೀಕರ ಪ್ರಮಾಣ ಪತ್ರ: ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾಕರ್ನಾಟಕ ಸ್ಟೇಟ್‌ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ನವರು ನಮೂನೆ-V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ-V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕಅಧಿಕಾರಿ / ಹಿರಿಯಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ-V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ-V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'.

ಸಿ) ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು.

ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್,

		ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿಆಸ್ಪತ್ರೆ/ ಇಎಸ್‌ಐಆಸ್ಪತ್ರೆ/ ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ. **ನೋಂದಣಿ ಮಾಡುವ ಕಛೇರಿಗಳು:** ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು. ಈ ಮೇಲೆ ನಿಗಧಿಪಡಿಸಿದ ದಾಖಲೆಗಳೊಂದಿಗೆ ಸೇವಾ ಸಿಂಧು ತಂತ್ರಾಂಶದಲ್ಲಿ ಸಂಬಂಧಪಟ್ಟ ಕಛೇರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
ಇ)	ರಾಜ್ಯದಲ್ಲಿರುವ ನೇಕಾರಿಕೆ, ಕುಂಬಾರಿಕೆ ಮತ್ತಿತರ ಸಾಂಪ್ರದಾಯಿಕ ಕಾರ್ಯದಲ್ಲಿ ತೊಡಗಿಸಿಕೊಂಡವರಿಗೆ ಈ ಯೋಜನೆಯಲ್ಲಿ ಪರಿಗಣಿಸಲು ಸರ್ಕಾರದ ಕ್ರಮಗಳೇನು; ಕುಲವೃತ್ತಿ ಆಧಾರಿತ ವಲಯದಲ್ಲಿ ಶ್ರಮಿಸುತ್ತಿರುವ ಕಾರ್ಮಿಕರನ್ನು ಯೋಜನಾ ಸೌಲಭ್ಯಗಳಲ್ಲಿ ಪರಿಗಣಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ರಾಜ್ಯದಲ್ಲಿರುವ ನೇಕಾರಿಕೆ, ಕುಂಬಾರಿಕೆ ಹಾಗೂ ಮತ್ತಿತರ ಸಾಂಪ್ರದಾಯಿಕ ಕಾರ್ಯದಲ್ಲಿ ತೊಡಗಿಸಿಕೊಂಡ ಕಾರ್ಮಿಕರು ಅಸಂಘಟಿತ ಕಾರ್ಮಿಕರಾಗಿರುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರವು 43 ವರ್ಗಗಳ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರೆಂದು ಗುರುತಿಸಿದ್ದು, ನೇಕಾರಿಕೆ, ಕುಂಬಾರಿಕೆ ಮುಂತಾದ ಕಾರ್ಮಿಕರು ಸೇರಿರುತ್ತಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಕುಂಬಾರರು ಸೇರಿದಂತೆ ಒಟ್ಟು 11 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ವಿತರಿಸಲಾಗುತ್ತಿದೆ. ಮುಂದುವರೆದು, ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ (NDUW-National Database for Unorganised Worker) ಕ್ರೋಢೀಕರಿಸಲು, ಸಾಮಾನ್ಯ ಸೇವಾ ಕೇಂದ್ರಗಳ (CSC) ಸಹಯೋಗದೊಂದಿಗೆ ಸುಮಾರು 379 ವರ್ಗಗಳ ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ ಮೂಲಕ ಉಚಿತವಾಗಿ ನೋಂದಾಯಿಸಲಾಗುತ್ತಿದ್ದು,

		ಸ್ಥಳದಲ್ಲಿಯೇ ಗುರುತಿನ ಚೀಟಿ ಪಡೆಯಬಹುದಾಗಿದೆ. ಈ ಯೋಜನೆಯಡಿ 18–59 ವಯೋಮಾನದ ಇ.ಎಸ್.ಐ ಹಾಗೂ ಇ.ಪಿ.ಎಫ್ ಸೌಲಭ್ಯವನ್ನು ಹೊಂದಿರದ ಹಾಗೂ ಆದಾಯ ತೆರಿಗೆ ಪಾವತಿ ಮಾಡದ ಎಲ್ಲಾ ಅಸಂಘಟಿತ ಕಾರ್ಮಿಕರು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಅಥವಾ ಸ್ವಯಂ ಆಗಿ ಇ–ಶ್ರಮ್ ಪೋರ್ಟಲ್‌ನಲ್ಲಿ (eshram.gov.in) ಉಚಿತವಾಗಿ ನೋಂದಾಯಿಸಬಹುದಾಗಿದ್ದು ಸದರಿ ನೋಂದಾಯಿತ ಅಸಂಘಟಿತ ಕಾರ್ಮಿಕರು ಒಂದು ವರ್ಷದ ಅವಧಿಗೆ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PM-SBY) ಪ್ರಯೋಜನ ಪಡೆಯಬಹುದಾಗಿದ್ದು, ಅಪಘಾತದಿಂದ ಮರಣ ಹೊಂದಿದಲ್ಲಿ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2 ಲಕ್ಷ ಹಾಗೂ ಭಾಗಶಃ ಅಂಗವೈಕಲ್ಯಕ್ಕೆ ರೂ.1 ಲಕ್ಷ ಪರಿಹಾರದ ಲಾಭವನ್ನು ಪಡೆಯಬಹುದಾಗಿದೆ ಮತ್ತು ಈ ದತ್ತಾಂಶವನ್ನು ಬಳಸಿಕೊಂಡು ಅಸಂಘಟಿತ ಕಾರ್ಮಿಕರಿಗೆ ವಿಶೇಷ ನೀತಿಗಳು ಹಾಗೂ ಯೋಜನೆಗಳನ್ನು ರೂಪಿಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿರುತ್ತದೆ. ಇದನ್ನು ಹೊರತುಪಡಿಸಿ ಪ್ರಸ್ತುತ ಅಂತಹ ಕಾರ್ಮಿಕರಿಗೆ ಬೇರೆ ಸೌಲಭ್ಯವನ್ನು ಒದಗಿಸುವ ಯಾವುದೇ ಯೋಜನೆಯನ್ನು ಮಂಡಳಿಯು ಜಾರಿಗೊಳಿಸುತ್ತಿಲ್ಲ.

ಕಾಇ 481 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-1

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 381

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಫಲಾನುಭವಿಗಳಿಗೆ ಸಿಗುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1500/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ(ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ (ಈಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ.50,000/-
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ :ರೂ.4,000/- ಹಾಗೂ ಅನುಗ್ರಹ ರಾಶಿ ರೂ.71,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	
1	ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5)	5,000
2	1 ರಿಂದ 4ನೇ ತರಗತಿ	5,000
3	5 ರಿಂದ 8ನೇ ತರಗತಿ	8,000
4	9 ಹಾಗೂ 10ನೇ ತರಗತಿ	12,000
	ಪದವಿ ಪೂರ್ವ	
5	ಪ್ರಥಮ ಪಿಯುಸಿ ಮತ್ತು ದ್ವಿತೀಯಪಿ.ಯು.ಸಿ	15,000
6	ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ	20,000
7	ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್	40,000
8	ಡಿ.ಎಡ್	25,000
	ಬಿ.ಎಡ್	35,000
9	ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ)	25,000

10	ಎಲ್ಎಲ್‌ಬಿ / ಎಲ್ಎಲ್ಎಮ್	30,000
11	ಸ್ನಾತಕೋತ್ತರ ಪದವಿ ಸೇರ್ಪಡೆಗೆ	35,000 ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು
ತಾಂತ್ರೀಕ/ ವೈದ್ಯಕೀಯಎನ್ಇಇಟಿಅಥವಾ ಕೆಸಿಇಟಿ		
12	ಬಿಇ / ಬಿ.ಟೆಕ್‌ಅಥವಾ ಸಂಬಂಧಪಟ ್ಟಯೂಜಿ ಕೋರ್ಸ್	ಸದರಿ ಕೋರ್ಸ್‌ನ 'ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು ವಾರ್ಷಿಕ ರೂ.50,000
13	ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರಕೋರ್ಸ್)	ಸದರಿ ಕೋರ್ಸ್‌ನ 'ಗರಿಷ್ಠ ಅವಧಿಗೆ ಒಳಪಟ್ಟು ವಾರ್ಷಿಕ ರೂ. 60,000
14	ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್‌ಎಸ್ / ಬಿಡಿಎಸ್ /ಬಿಹೆಚ್‌ಎಮ್‌ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್	ರೂ.60,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
	ಎಮ್‌ಡಿ	ರೂ. 75,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆ ಗರಿಷ್ಠ ಮೂರು ವರ್ಷಗಳಿಗೆ ಹಾಗೂ ಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷ ರೂ. 25,000 (ಯೂಜಿಸಿಯ ಜೂನಿಯರ್ ರಿರ್ಸಚ್ ಫೆಲೋಶಿಫ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಕೇಂದ್ರ ಮತ್ತುರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಯೂಜಿಸಿ ನಿಯಮಗಳನ್ವಯ ವೇತನ ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
16	ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್ /ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	ಪಾವತಿಸಿದ ಬೋದನಾ ಶುಲ್ಕ

12. ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆ ರೂ.300/- ರಿಂದರೂ.20,000/-ವರೆಗೆ

13. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/-

14. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ): ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ
15. ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ ರೂ.60,000/-
16. ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ಮತ್ತುಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲುತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.
17. ಬಿಎಂಟಿಸಿ ಬಸ್ ಪಾಸ್ ಸೌಲಭ್ಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ
18. ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ: ನೋಂದಾಯಿತ ಫಲಾನುಭವಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ
19. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ.
20. ಇಮ್ಯೆನಿಟಿ ಬೂಸ್ಟರ್‌ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್‌ಯೋಜನೆ
22. ಮೋಬೈಲ್ ಮೆಡಿಕಲ್‌ಕೇರ್‌ಯೂನಿಟ್
23. ಪೈಲಟ್‌ಟ್ರೈನಿಂಗ್: ಫಲಾನುಭವಿಯಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಬ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ
25. ನ್ಯೂಟ್ರೀಸನ್‌ಕಿಟ್ಸ್:

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	382
ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಆಯೋಗಗಳು ಸಲ್ಲಿಸಿರುವ ಎಷ್ಟು ವರದಿಗಳು ಸರ್ಕಾರದ ಅನುಮೋದನೆಗಾಗಿ ಬಾಕಿ ಉಳಿದಿವೆ; ಅವುಗಳ ಅನುಮೋದನೆಗಾಗಿ ಸರ್ಕಾರದ ಸಕಾಲಿಕ ಕ್ರಮಗಳೇನು; ಆಯೋಗಗಳ ವರದಿ ಅನುಮೋದನೆಗೆ ನೀತಿ ನಿಯಮಗಳಡಿಯಲ್ಲಿ ಕಾಲ ಮಿತಿಯನ್ನು ವಿಧಿಸಿದೆಯೇ; (ವಿವರ ಒದಗಿಸುವುದು)	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ವರದಿಗಳಲ್ಲಿ ಈ ಕೆಳಕಂಡ 04 ವರದಿಗಳು ಅಂಗೀಕೃತವಾಗಿವೆ. ಸದರಿ ವರದಿಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. 1. ಶ್ರೀ ಎಲ್.ಜಿ. ಹಾವನೂರು ಆಯೋಗದ ವರದಿ. 2. ಶ್ರೀ ಟಿ. ವೆಂಕಟಸ್ವಾಮಿ ಆಯೋಗದ ವರದಿ. 3. ಜಸ್ಟೀಸ್ ಓ ಚಿನ್ನಪ್ಪ ರೆಡ್ಡಿ ಆಯೋಗದ ವರದಿ. 4. ಪ್ರೊ. ರವಿವರ್ಮಾ ಕುಮಾರ್ ಆಯೋಗದ ವರದಿ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳಲ್ಲಿ ಈ ಕೆಳಕಂಡ 04 ವರದಿಗಳು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತವೆ. 1. ಶ್ರೀ ಸಿದ್ದಗಂಗಯ್ಯರವರ ಆಯೋಗದ ಮಧ್ಯಂತರ ವರದಿ-2005. 2. ಡಾ.ಸಿ.ಎಸ್. ದ್ವಾರಕನಾಥ್ ಆಯೋಗದ ವಿಶೇಷ ವರದಿ-2010. 3. ಶ್ರೀ ಎನ್. ಶಂಕ್ರಪ್ಪ ಆಯೋಗದ ಪ್ರಥಮ ವರದಿ-2012 ಮತ್ತು ದ್ವಿತೀಯ ವರದಿ-2013. 4. ಶ್ರೀ ಹೆಚ್. ಕಾಂತರಾಜ ಆಯೋಗದ ಬಹಿರಂಗ ವಿಚಾರಣೆ-2018 ವರದಿ. ಆಯೋಗದ ವರದಿಗಳನ್ನು ಅನುಮೋದಿಸಲು ಕಾಲಮಿತಿಯನ್ನು ವಿಧಿಸಿರುವುದಿಲ್ಲ.
ಆ)	ಸನ್ಮಾನ್ಯ ಸಿದ್ದಗಂಗಯ್ಯರವರ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯನ್ನು ಸರ್ಕಾರ ಪರಿಗಣಿಸಿ ಅನುಮೋದನೆ	

	ನೀಡುವ ಕುರಿತು ಸರ್ಕಾರದ ಕ್ರಮಗಳೇನು;	
ಉ)	ಈ ಮಧ್ಯಂತರ ವರದಿಯಲ್ಲಿ ಅತೀ ಕಡಿಮೆ ಸಂಖ್ಯೆಯಲ್ಲಿರುವ ಕೆಲವು ಸಮುದಾಯಗಳನ್ನು ಪ್ರವರ್ಗ-2ಎಗೆ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡಿದ್ದರೂ ಅದನ್ನು ಅನುಮೋದಿಸಲು ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು;	ಈ ವರದಿಗಳು ಪರಿಶೀಲನೆಯಲ್ಲಿರುತ್ತವೆ.
ಊ)	ಸಾಂವಿಧಾನಿಕ ಹಕ್ಕುಗಳನ್ನು ಈ ಸಮುದಾಯಗಳು ಪಡೆಯಲು ಅಸಾಧ್ಯವಾಗಿದ್ದು ತ್ವರಿತವಾಗಿ ಅನುಮೋದಿಸಿ ಅನುಕೂಲ ಮಾಡಿಕೊಡಲು ಸರ್ಕಾರದ ಕ್ರಮಗಳೇನು? (ವಿವರ ಒದಗಿಸುವುದು)	

ಸಂಖ್ಯೆ: ಹಿಂವಕ 161 ಬಿಸಿಎ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	383
ಮಾನ್ಯ ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರ ಸಮಾಜ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಿಂದ ನಿಗದಿಪಡಿಸಿ ಹಂಚಿಕೆಯಾದ ಮತ್ತು ವೆಚ್ಚವಾದ ಅನುದಾನದ ಮೊತ್ತವೆಷ್ಟು; (ವರ್ಷವಾರು ಸಮಗ್ರ ವಿವರ ನೀಡುವುದು)	ಸರ್ಕಾರವು ಸಮಾಜ ಕಲ್ಯಾಣ ಇಲಾಖೆಗೆ ಕಳೆದ 3 ವರ್ಷಗಳಿಂದ ಹಂಚಿಕೆ ಮಾಡಿ ಬಿಡುಗಡೆ ಮತ್ತು ವೆಚ್ಚವಾದ ಅನುದಾನದ ವಿವರ ಈ ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ) ವರ್ಷ / ಹಂಚಿಕೆ / ಬಿಡುಗಡೆ / ವೆಚ್ಚ 2019-20 / 4231.71 / 4188.98 / 4139.60 2020-21 / 3349.58 / 3276.08 / 3200.87 2021-22 / 4059.80 / 4057.19 / 4045.35
ಆ)	ಈ ಅವಧಿಯಲ್ಲಿ ಜಿಲ್ಲಾವಾರು, ತಾಲ್ಲೂಕುವಾರು ನಿರ್ಮಿಸಿದ ಮತ್ತು ನಿರ್ಮಾಣ ಹಂತದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳೆಷ್ಟು; ಇದುವರೆವಿಗೂ ವೆಚ್ಚವಾದ ಅನುದಾನವೆಷ್ಟು; (ವಿವರ ನೀಡುವುದು)	ಕಳೆದ ಮೂರು ವರ್ಷಗಳಿಗೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ಮಾತ್ರ 55 ಪರಿಶಿಷ್ಟ ಜಾತಿಯ ಸರ್ಕಾರಿ ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ರೂ.34010.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೈಗೊಳ್ಳಲು ಮಂಜೂರಾತಿ ನೀಡಲಾಗಿರುತ್ತದೆ. ಈ ಪೈಕಿ 54 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳ ಪ್ರಗತಿಯಲ್ಲಿದ್ದು 01 ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣ ಕಾಮಗಾರಿಗೆ ಕಾರ್ಯಾದೇಶ ನೀಡುವುದು ಬಾಕಿ ಇರುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 2019-20ನೇ ಸಾಲಿನಲ್ಲಿ 2 ವಿದ್ಯಾರ್ಥಿನಿಲಯಗಳಿಗೆ ರೂ.1343.05 ಲಕ್ಷಗಳು ಹಾಗೂ 2021-22ನೇ ಸಾಲಿನಲ್ಲಿ 2 ವಿದ್ಯಾರ್ಥಿನಿಲಯಗಳಿಗೆ ರೂ.399.98 ಲಕ್ಷಗಳು ಸೇರಿ ರೂ.1743.03 ಲಕ್ಷಗಳ ಅಂದಾಜು ಮೊತ್ತದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಹಾಗೂ ಕ್ರೈಸ್ ವತಿಯಿಂದ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

		ಮುಂದುವರೆದು, 2022-23ನೇ ಸಾಲಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 14 ಆರ್ ಡಿಎಫ್ 2022 ದಿನಾಂಕ:25-05-2022 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ 57 ಪರಿಶಿಷ್ಟ ಜಾತಿ ಮತ್ತು 11 ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಲ್ಲಿ ಕೈಗೊಳ್ಳಲು ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. 2019-20 ಮತ್ತು 2021-22ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಯ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಿರುವುದಿಲ್ಲ.
ಇ)	ಈ ಕಾಮಗಾರಿಗಳ ಗುತ್ತಿಗೆದಾರರುಗಳು ನಿಗದಿತ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆಯೇ; ಇಲ್ಲವಾದಲ್ಲಿ ಕೈಗೊಂಡ ಕ್ರಮಗಳೇನು?	ಸಮಾಜ ಕಲ್ಯಾಣ ಇಲಾಖೆಯಿಂದ ಕೋವಿಡ್-19ರ ಕಾರಣದಿಂದಾಗಿ ಮೇಲ್ಕಂಡಂತೆ ಮಂಜೂರಾತಿ ನೀಡಿರುವ ಕಾಮಗಾರಿಗಳ ಪ್ರಗತಿಯಲ್ಲಿ ಕುಂಠಿತವಾಗಿರುತ್ತವೆ. ಈ ಸಂಬಂಧವಾಗಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳೊಂದಿಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸದರಿ 55 ವಿದ್ಯಾರ್ಥಿ ನಿಲಯ/ ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಸಂಬಂಧವಾಗಿ ನೀಡಲಾಗಿರುವ ಕಾರ್ಯಾದೇಶಗಳನ್ವಯ ನಿಗಧಿತ ಕಾಲ ಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸುವಂತೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರಾತಿ ನೀಡಿರುವ 4 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣದ ಕಾಮಗಾರಿಗಳ ಪೈಕಿ 3 ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, 1 ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿಗೆ ಡಿ.ಪಿ.ಆರ್ ಸಿದ್ಧಪಡಿಸಲಾಗುತ್ತಿದೆ.

ಸಕಇ 511 ಪಕವಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 383 ಕ್ಕೆ ಅನುಬಂಧ-1

2020-21ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ 55 ಪರಿಶಿಷ್ಟ ಜಾತಿಯ ಸರ್ಕಾರಿ ವಿದ್ಯಾರ್ಥಿ ನಿಲಯ/ ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಗಳ ಪ್ರಗತಿ ವಿವರ.

ರೂ.ಲಕ್ಷಗಳಲ್ಲಿ

ಕ್ರ. ಸಂ	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ಅಂದಾಜು ಮೊತ್ತ	ಕಾಮಗಾರಿಯ ಗುತ್ತಿಗೆ ಮೊತ್ತ	ಭೌತಿಕ ಪ್ರಗತಿ ವಿವರ
1	ಚಿಕ್ಕಬಳ್ಳಾಪುರ	ಚೇಳೂರು	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ,ಚೇಳೂರು	524.00	472.83	ನೆಲ ಮಹಡಿ ಛಾವಣಿ ಪೂರ್ಣಗೊಂಡಿದ್ದು, ಮೊದಲನೇ ಮಹಡಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
2	ಬೀದರ	ಬೀದರ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಬೀದರ್ ಟೌನ್	568.00	1061.35	ನೆಲಮಹಡಿ ಛಾವಣಿ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.
3	ಬೀದರ	ಬೀದರ	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಬೀದರ್ ಟೌನ್	612.00		
4	ಚಿತ್ರದುರ್ಗ	ಚಿತ್ರದುರ್ಗ	ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಭರಮಸಾಗರ	533.00	480.69	ಮೊದಲನೇ ಮಹಡಿ ಇಟ್ಟಿಗೆ ಕಟ್ಟಡ ನೆಲ ಮಹಡಿ ಗಿಲಾವು ಕಾಮಗಾರಿ ಪ್ರಗತಿಯಲ್ಲಿದೆ.
5	ಹಾಸನ	ಬೇಲೂರು	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ,ಬೇಲೂರು ಟೌನ್	705.00	1215.67	ನೆಲಮಹಡಿ ಛಾವಣಿ ಸೆಂಟ್ರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
6	ಹಾಸನ	ಬೇಲೂರು	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ,ಬೇಲೂರು ಟೌನ್	645.00		ನೆಲಮಹಡಿ ಛಾವಣಿ ಸೆಂಟ್ರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
7	ಹಾಸನ	ಹಾಸನ	ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ,ಹಾಸನ ಟೌನ್	961.00	852.27	ನೆಲಮಹಡಿ ಛಾವಣಿ ಸೆಂಟ್ರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
8	ಚಿಕ್ಕಮಗಳೂರು	ಎನ್.ಆರ್.ಪುರ	ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ,ನರಾಪುರ	635.00	965.93	ಛಾವಣಿ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.
9	ಚಿಕ್ಕಮಗಳೂರು	ತರೀಕೆರೆ	ಸಾರ್ವಜನಿಕ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಶಿವನಿ	440.00		ಪ್ಲಿಂತ್ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ಅಂದಾಜು ಮೊತ್ತ	ಕಾಮಗಾರಿಯ ಗುತ್ತಿಗೆ ಮೊತ್ತ	ಭೌತಿಕ ಪ್ರಗತಿ ವಿವರ
10	ವಿಜಯಪುರ	ಸಿಂದಗಿ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಸಿಂದಗಿ ಟೌನ್	742.00	671.00	ನಿವೇಶನ ಬದಲಾವಣೆಯಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಬದಲಿ ನಿವೇಶ ಹಸ್ತಾಂತರ ಮಾಡಬೇಕಿದೆ.
11	ರಾಯಚೂರು	ಮಾನವಿ	ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ,ಮಾನವಿ ಟೌನ್	995.00	894.61	ನೆಲಮಹಡಿ ಛಾವಣಿ ಹಾಕಲಾಗಿದ್ದು, ಮೊದಲನೇ ಮಹಡಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
12	ಬಳ್ಳಾರಿ	ಹಡಗಲಿ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಹೂವಿನ ಹಡಗಲಿ ಟೌನ್	886.00	784.25	03ನೇ ಮಹಡಿ ಛಾವಣಿ ಹಾಕಲಾಗಿದ್ದು, 02 ನೇ ಮಹಡಿ ಇಟ್ಟಿಗೆ ಕಟ್ಟಡ ನೆಲ ಮಹಡಿ ಗಿಲಾವು ಕಾಮಗಾರಿ ಪ್ರಗತಿಯಲ್ಲಿದೆ.
13	ಬಳ್ಳಾರಿ	ಹಡಗಲಿ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಹಡಗಲಿ ಟೌನ್	867.00	801.81	ನೆಲ ಮಹಡಿ ಛಾವಣಿ ಹಾಕಲಾಗಿದ್ದು, ಮೊದಲನೇ ಮಹಡಿ ಲಿಂಟೆಲ್ ಹಂತದ ಇಟ್ಟಿಗೆ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.
14	ಬಳ್ಳಾರಿ	ಕೂಡ್ಲಗಿ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕೊಟ್ಟೂರು	870.00	786.46	ನೆಲ ಮಹಡಿ ಛಾವಣಿ ಸೆಂಟ್ರಿಂಗ್ ಕಾಮಗಾರಿ ಪ್ರಗತಿಯಲ್ಲಿದ.
15	ಬೀದರ	ಬೀದರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮನ್ನಳ್ಳಿ	490.00	430.63	ಮೊದಲನೇ ಮಹಡಿ ಛಾವಣಿ ಹಾಕಲಾಗಿದ್ದು, ನೆಲ ಮಹಡಿ ಇಟ್ಟಿಗೆ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.
16	ರಾಯಚೂರು	ರಾಯಚೂರು	ಸರ್ಕಾರಿ ವಸತಿ ಶಾಲೆ, ಉಡುಮಗಲ್	650.00	584.54	ನಿವೇಶನ ತಕರಾರಿನಿಂದ ಕೂಡಿದ್ದು, ಬದಲಿ ನಿವೇಶನವನ್ನು ನೀಡಬೇಕಾಗಿದೆ.
17	ದಾವಣಗೆರೆ	ಹರಿಹರ	ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಹರಿಹರ ಟೌನ್	518.00	441.99	03 ನೇ ಮಹಡಿ ಕಾಲಂ ಹಾಗೂ ನೆಲ ಮತ್ತು 01 ನೇ ಮಹಡಿ ಇಟ್ಟಿಗೆ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.
18	ಕೋಲಾರ	ಬಂಗಾರಪೇಟೆ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ತೊಪ್ಪನಹಳ್ಳಿ	357.00	1055.31	ನಿವೇಶನ ಒದಗಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಪತ್ರ ಬರೆಯಲಾಗಿದೆ.
19	ಕೋಲಾರ	ಮೂಲೂರು	ಸಾರ್ವಜನಿಕ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಮಾಲೂರು ಟೌನ್	433.00		
20	ಕೋಲಾರ	ಶ್ರೀನಿವಾಸಪುರ	ಸಾರ್ವಜನಿಕ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅಡ್ಡಗಲ್	381.00		ನಿವೇಶನ ಒದಗಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಪತ್ರ ಬರೆಯಲಾಗಿದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ಅಂದಾಜು ಮೊತ್ತ	ಕಾಮಗಾರಿಯ ಗುತ್ತಿಗೆ ಮೊತ್ತ	ಭೌತಿಕ ಪ್ರಗತಿ ವಿವರ
21	ರಾಮನಗರ	ಮಾಗಡಿ	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಕುದೂರು	465.00	384.32	ಕಾಮಗಾರಿ ಪ್ರಾರಂಭಸಲಾಗಿದ್ದು, ಕಂದಾಯ ಇಲಾಖೆಯವರು ನಿವೇಶನದ ಬಗ್ಗೆ ತಕರಾರು ಮಾಡಿರುತ್ತಾರೆ. ಆದ್ದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.
22	ಶಿವಮೊಗ್ಗ	ಹೊಸನಗರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ರಿಪ್ಪನ್‌ಪೇಟೆ	486.00	423.53	ಹೊರ ಬಾಗದ ಗಿಲಾವು ಕಾಮಗಾರಿ ಪ್ರಗತಿಯಲ್ಲಿದೆ.
23	ಮೈಸೂರು	ಹುಣಸೂರು	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬನ್ನಿಕುಪ್ಪೆ	365.00	298.56	ಫೂಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
24	ಮೈಸೂರು	ಮೈಸೂರು	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ,ತಿಲಕನಗರ	990.00	924.56	ನಿವೇಶನ ಒದಗಿಸಿದ್ದು, ನಿವೇಶನಕ್ಕನುಗುಣವಾಗಿ ಪರಿಷ್ಕೃತ ನಕ್ಷೆ ತಯಾರಿಸಲಾಗುತ್ತಿದೆ.
25	ಮೈಸೂರು	ಮೈಸೂರು	ಮೆಟ್ರಿಕ್ ನಂತರದ ಸ್ನಾತಕೋತ್ತರ ಬಾಲಕರ ವಿದ್ಯಾರ್ಥಿ ನಿಲಯ, ಬೋಗಾದಿ	989.00	931.77	ನಿವೇಶನ ಒದಗಿಸಿದ್ದು, ನಿವೇಶನಕ್ಕನುಗುಣವಾಗಿ ಪರಿಷ್ಕೃತ ನಕ್ಷೆ ತಯಾರಿಸಲಾಗುತ್ತಿದೆ.
26	ಮೈಸೂರು	ಮೈಸೂರು	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ. ಬೋಗಾದಿ(ಸಿದ್ದಲಿಂಗೇಶ್ವರ ನಗರ)	989.00	931.77	ನಿವೇಶನ ಒದಗಿಸಿದ್ದು, ನಿವೇಶನಕ್ಕನುಗುಣವಾಗಿ ಪರಿಷ್ಕೃತ ನಕ್ಷೆ ತಯಾರಿಸಲಾಗುತ್ತಿದೆ.
27	ಮೈಸೂರು	ಮೈಸೂರು	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ,ಮೈಸೂರು ಟೌನ್	990.00	923.28	ನಿವೇಶನ ಒದಗಿಸಿದ್ದು, ನಿವೇಶನಕ್ಕನುಗುಣವಾಗಿ ಪರಿಷ್ಕೃತ ನಕ್ಷೆ ತಯಾರಿಸಲಾಗುತ್ತಿದೆ.
28	ಹಾಸನ	ಚನ್ನರಾಯಪಟ್ಟಣ	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ,ಬಾಗೂರು	400.00	682.66	ಆರಂಭಿಕ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.
29	ಹಾಸನ	ಅರಸೀಕೆರೆ	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ,ಅಗ್ಗುಂದ	405.00		ಆರಂಭಿಕ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.
30	ವಿಜಯಪುರ	ಸಿಂದಗಿ	ಸರಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಸಿಂದಗಿ	444.00	399.81	ಮೊದಲನೇ ಮಹಡಿ ಛಾವಣಿ ಸೆಂಟ್ರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
31	ಬಾಗಲಕೋಟೆ	ಹುನಗುಂದ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಚಿತ್ತರಗಿ	686.00	604.49	ತಳಪಾಯದ ಕಾಮಗರಿ ಪ್ರಗತಿಯಲ್ಲಿದೆ.

ಕ್ರ. ಸಂ	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ಅಂದಾಜು ಮೊತ್ತ	ಕಾಮಗಾರಿಯ ಗುತ್ತಿಗೆ ಮೊತ್ತ	ಭೌತಿಕ ಪ್ರಗತಿ ವಿವರ
32	ಬಾಗಲಕೋಟೆ	ಬಾದಾಮಿ	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಬಾದಾಮಿ ಟೌನ್	488.00	426.14	ನೆಲ ಮಹಡಿ ಛಾವಣಿ ಸೆಂಟ್ರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
33	ಗದಗ	ನರಗುಂದ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ನರಗುಂದ	679.00	614.03	ತಳಪಾಯದ ಕಾಮಗರಿ ಪ್ರಗತಿಯಲ್ಲಿದೆ.
34	ಹಾವೇರಿ	ರಾಣೇಬೆನ್ನೂರ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ರಾಣೇಬೆನ್ನೂರು ಟೌನ್	670.00	589.57	ನೆಲ ಮಹಡಿ ಛಾವಣಿ ಹಾಕಲಾಗಿದ್ದು, ಮೊದಲನೇ ಮಹಡಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
35	ರಾಯಚೂರು	ಲಿಂಗಸಗೂರು	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಮಸ್ಕಿ	560.00	1033.85	ನೆಲಮಹಡಿ ಛಾವಣಿ ಹಾಕಲಾಗಿದ್ದು, ಮೊದಲನೇ ಮಹದಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
36	ರಾಯಚೂರು	ಲಿಂಗಸಗೂರು	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಲಿಂಗಸಗೂರು ಟೌನ್	600.00		ನೆಲಮಹಡಿ ಛಾವಣಿ ಹಾಕಲಾಗಿದ್ದು, ಮೊದಲನೇ ಮಹದಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
37	ಕೊಪ್ಪಳ	ಕೊಪ್ಪಳ	ವೃತ್ತಿಪರ ಬಾಲಕರ ವಿದ್ಯಾರ್ಥಿ ನಿಲಯ, ಹೊಸಬಂಡಿ ಹರ್ಲಾಪುರ	600.00	532.78	ಪ್ಲಿಂತ್ ಹಾಕಲಾಗಿದ್ದು, ನೆಲ ಮಹಡಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
38	ಬಳ್ಳಾರಿ	ಬಳ್ಳಾರಿ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಕುಡಿತಿನಿ	474.00	1217.96	ನಿವೇಶನ ಬದಲಾವಣೆಯಾಗಿದ್ದು ಸಮಾಜ ಕಲ್ಯಾಣ ಇಲಾಖೆಯಿಂದ ಬದಲಿ ನಿವೇಶನ ಒದಗಿಸಬೇಕಾಗಿದೆ.
39	ಬಳ್ಳಾರಿ	ಬಳ್ಳಾರಿ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಬಳ್ಳಾರಿ ಟೌನ್	875.00		ಫೂಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
40	ರಾಯಚೂರು	ದೇವದುರ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಾಗಡದಿನ್ನಿ	530.00	1148.14	ಪ್ಲಿಂತ್ ಹಾಕಲಾಗಿದ್ದು, ನೆಲಮಹಡಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
41	ರಾಯಚೂರು	ದೇವದುರ್ಗ	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಅರಕೇರಾ	750.00		ತಳಪಾಯದ ಕಾಮಗಾರಿ ಪ್ರಗತಿಯಲ್ಲಿದೆ.
42	ಬೆಳಗಾವಿ	ರಾಯಬಾಗ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಹಾರೋಗೇರಿ ಕುಡಚಿ	723.00	494.15	ನಿವೇಶನಹಸ್ತಾಂತರಿಸಲಾಗಿದ್ದು, ಸ್ಥಳೀಯ ಶಸಕರು ಭೂಮಿಪೂಜೆ ನೆರವೇರಿಸಿದ ನಂತರ ಕಾಮಗಾರಿ ಕೈಗೊಳ್ಳಲಾಗುವುದು.

ಕ್ರ. ಸಂ	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ಅಂದಾಜು ಮೊತ್ತ	ಕಾಮಗಾರಿಯ ಗುತ್ತಿಗೆ ಮೊತ್ತ	ಭೌತಿಕ ಪ್ರಗತಿ ವಿವರ
43	ಬೆಳಗಾವಿ	ರಾಯಬಾಗ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ರಾಯಬಾಗ	555.00	386.10	ನಿವೇಶನಹಸ್ತಾಂತರಿಸಲಾಗಿದ್ದು, ಸ್ಥಳೀಯ ಶಸಕರು ಭೂಮಿಪೂಜೆ ನೆರವೇರಿಸಿದ ನಂತರ ಕಾಮಗಾರಿ ಕೈಗೊಳ್ಳಲಾಗುವುದು.
44	ಧಾರವಾಡ	ಹುಬ್ಬಳ್ಳಿ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಉಣಕಲ್ ಕ್ರಾಸ್ ಹುಬ್ಬಳ್ಳಿ	439.00	637.77	ಪ್ಲಿಂತ್ ಹಂತದ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
45	ಧಾರವಾಡ	ಕಲಘಟಕಿ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ದುಮ್ಮವಾಡ	298.00		ನೆಲ ಮಹಡಿ ಕಾಲಂ ಮತ್ತು ಇಟ್ಟಿಗೆ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.
46	ಹಾವೇರಿ	ಹಾನಗಲ್	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಅಕ್ಕಿಆಲೂರ	700.00	610.84	ಫೂಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
47	ರಾಯಚೂರು	ರಾಯಚೂರು	ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ,ಕಲ್ಮಲಾ	530.00	427.36	ಪ್ಲಿಂತ್ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.
48	ತುಮಕೂರು	ತುರುವೇಕೆರೆ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ . ನಿಲಯ, ತುರುವೇಕೆರೆ ಟೌನ್	378.00	684.35	ಪ್ಲಿಂತ್ ಹಾಕಲಾಗಿದ್ದು, ನೆಲ ಮಹಡಿ ಕಾಲಂ ಕಾಮಗಾರಿ ಪ್ರಗತಿಯಲ್ಲಿದೆ.
49	ತುಮಕೂರು	ತುಮಕೂರು	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೆಗ್ಗೆರೆ ತುಮಕೂರು	382.00		ಭೂಮಿಪೂಜೆ ನೆರವೇರಿಸಿ ಕಾಮಗಾರಿ ಪ್ರಾರಂಭಿಸಬೇಕಿದೆ
50	ಗದಗ	ಮುಂಡರಗಿ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಮುಂಡರಗಿ ಟೌನ್	632.00	570.61	ಪಾಯದ ಕಾಮಗಾರಿ ಪ್ರಗತಿಯಲ್ಲಿದೆ.
51	ಕೊಪ್ಪಳ	ಕೊಪ್ಪಳ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕೊಪ್ಪಳ ಟೌನ್	980.00	883.23	ಭೂಮಿಪೂಜೆ ನೆರವೇರಿಸಿ ಕಾಮಗಾರಿ ಪ್ರಾರಂಭಿಸಬೇಕಿದೆ
52	ಮಂಡ್ಯ	ಮಳವಳ್ಳಿ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ,ಕಿರುಗಾವಲು	380.00	290.96	ಭೂಮಿಪೂಜೆ ನೆರವೇರಿಸಿ ಕಾಮಗಾರಿ ಪ್ರಾರಂಭಿಸಬೇಕಿದೆ
53	ಬೆಳಗಾವಿ	ರಾಯಬಾಗ	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ರಾಯಬಾಗ ಟೌನ್	720.00	499.09	ಭೂಮಿಪೂಜೆ ನೆರವೇರಿಸಿ ಕಾಮಗಾರಿ ಪ್ರಾರಂಭಿಸಬೇಕಿದೆ

ಕ್ರ. ಸಂ	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ಅಂದಾಜು ಮೊತ್ತ	ಕಾಮಗಾರಿಯ ಗುತ್ತಿಗೆ ಮೊತ್ತ	ಭೌತಿಕ ಪ್ರಗತಿ ವಿವರ
54	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಪೇರೆಸಂದ್ರ	508.00	474.79	ಭೂಮಿಪೂಜೆ ನೆರವೇರಿಸಿ ಕಾಮಗಾರಿ ಪ್ರಾರಂಭಿಸಬೇಕಿದೆ
55	ರಾಯಚೂರು	ಸಿಂಧನೂರು	ಸರಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಸಿಂಧನೂರು	538.00	-	ಕಾರ್ಯಾದೇಶ ನೀಡಬೇಕಿದೆ
ಒಟ್ಟು				34010.00	29526.31	

ಅನುಬಂಧ - 2

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣದ ಕಾಮಗಾರಿಗಳ ವಿವರ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ವಿದ್ಯಾರ್ಥಿನಿಲಯದ ವಿವರ	ನಿರ್ಮಾಣ ಏಜೆನ್ಸಿ	ಅಂದಾಜು ಮೊತ್ತ	ಕಾಮಗಾರಿಗಳ ಪ್ರಗತಿ ವಿವರ
1	ಬಳ್ಳಾರಿ	ಹರಪನಹಳ್ಳಿ	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಹರಪನಹಳ್ಳಿ ಟೌನ್	ಕೆ.ಆರ್ .ಐ.ಡಿ.ಎಲ್	293.05	ಮುಕ್ತಾಯದ ಹಂತದ ಕಾಮಗಾರಿ ಪ್ರಗತಿಯಲ್ಲಿದೆ.
2	ರಾಯಚೂರು	ರಾಯಚೂರು	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ರಾಯಚೂರು	ಕ್ರೈಸ್	1050.00	ಡಿ.ಪಿ.ಆರ್ ಸಿದ್ಧಪಡಿಸಲಾಗುತ್ತಿದೆ.
3	ಬೆಂಗಳೂರು ನಗರ	ಆನೇಕಲ್	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಚಂದಾಪುರ	ಕೆ.ಆರ್ .ಐ.ಡಿ.ಎಲ್	199.99	ಕಾಂಪೌಂಡ್ ಗೋಡೆ ನಿರ್ಮಾಣ ಪ್ರಗತಿಯಲ್ಲಿದೆ.
4	ಬೆಂಗಳೂರು ನಗರ	ಬೆಂಗಳೂರು ದಕ್ಷಿಣ	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಕೆಂಗೇರಿ	ಕೆ.ಆರ್ .ಐ.ಡಿ.ಎಲ್	199.99	ಕಾಂಪೌಂಡ್ ಗೋಡೆ ನಿರ್ಮಾಣ ಪ್ರಗತಿಯಲ್ಲಿದೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	384
ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಸಮುದಾಯ ಭವನ ನಿರ್ಮಾಣಕ್ಕಾಗಿ 2019-20, 2020-21 ಮತ್ತು 2021-22ನೇ ಸಾಲಿಗಾಗಿ ಮಂಜೂರು ಮಾಡಿ ಬಿಡುಗಡೆಗೊಳಿಸಿರುವ ಅನುದಾನದ ಮೊತ್ತವೆಷ್ಟು;	ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ 2019-20, 2020-21 ಮತ್ತು 2021-22 ನೇ ಸಾಲಿನಲ್ಲಿ ವಿವಿಧ ಸಂಘ-ಸಂಸ್ಥೆಗಳು ನಿರ್ಮಿಸುತ್ತಿರುವ ಸಮುದಾಯ ಭವನ / ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಈ ಕೆಳಗಿನಂತೆ ಸಹಾಯಧನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ರ. ಸಂ / ಆರ್ಥಿಕ ವರ್ಷ / ಬಿಡುಗಡೆ ಮಾಡಲಾಗಿರುವ ಅನುದಾನ (ರೂ. ಲಕ್ಷಗಳಲ್ಲಿ) 1 / 2019-20 / 6838.79 2 / 2020-21 / 4650.00 3 / 2021-22 / 18249.83
ಆ)	ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳಿಗೆ ಮೂರು ವರ್ಷಗಳ ಅವಧಿಯಲ್ಲಿ ಮಂಜೂರು ಮಾಡಲಾಗಿರುವ ಅನುದಾನಗಳೆಷ್ಟು? (ವಿವರ ನಿಡುವುದು)	ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳಿಗೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ರೂ.475.00 ಲಕ್ಷಗಳ ಮೊತ್ತದ ಅನುದಾನವನ್ನು ಮಂಜೂರು ಮಾಡಲಾಗಿದೆ. ವಿವರಗಳನ್ನುಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಬಿಸಿಡಬ್ಲ್ಯೂ 511 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಅನುಬಂಧ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹ್ಯಾರಿಸ್ ಎನ್. ಎ (ಶಾಂತಿನಗರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:384 ಕ್ಕೆ ಅನುಬಂಧ-1

ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳ ನಿರ್ಮಾಣಕ್ಕೆ ಕಳೆದ 3 ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ಅನುದಾನದ ವಿವರ.

					ರೂ.(ಲಕ್ಷಗಳಲ್ಲಿ)				
ಕ್ರ.ಸಂ	ಸಂಸ್ಥೆಯ ಹೆಸರು ಮತ್ತು ವಿಳಾಸ	ಮಂಜೂರಾತಿ ವರ್ಷ	ಉದ್ದೇಶ (ಸಮುದಾಯ ಭವನ/ವಿದ್ಯಾರ್ಥಿ ನಿಲಯ)	ಜಾತಿ/ ಪ್ರವರ್ಗ	ಮಂಜೂರಾದ ಮೊತ್ತ	ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ	ಷರಾ
1	2	3	4	5	6	7	8	9	10
1	ನಿಕೇತನ ಎಜುಕೇಷನ್ ಟ್ರಸ್ಟ್(ರಿ), ಬೆಂಗಳೂರು ನಗರ ಜಿಲ್ಲೆ	2019-20	ಸಮುದಾಯ ಭವನ/ವಿ.ನಿ	ಕುಂಚಿಟಿಗ ಸಮಾಜ	50.00	12.50	12.50	ಪ್ರಗತಿಯಲ್ಲಿದೆ	
2	ವಿರಕ್ತ ಮಠ ಬಿ. ಮಲ್ಲೇನಹಳ್ಳಿ(ರಿ), ಕಡೂರು ಚಿಕ್ಕಮಗಳೂರು ಜಿಲ್ಲೆ ರವರ ವತಿಯಿಂದ ಬೆಂಗಳೂರು ನಗರ ಜಿಲ್ಲೆ ಇಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ	2019-20	ವಿದ್ಯಾರ್ಥಿನಿಲಯ	ಕುಂಚಿಟಿಗ ಸಮಾಜ	50.00	12.50	12.50	ಪ್ರಗತಿಯಲ್ಲಿದೆ	
3	ಕನ್ನಲ್ಲಿ ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ (ರಿ)	2019-20	ಸಮುದಾಯ ಭವನ	ವೀರಶೈವ	100.00	25.00	25.00	ಪ್ರಗತಿಯಲ್ಲಿದೆ	
4	ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಕನ್ನಳ್ಳಿ ಗ್ರಾಮದ ಶ್ರೀ ವೀರಭದ್ರಸ್ವಾಮಿ ಸುಕ್ಷೇತ್ರದಲ್ಲಿ ಕನ್ನಲ್ಲಿ ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ(ರಿ), ಈ ಸಂಸ್ಥೆಯ ವತಿಯಿಂದ ನಿರ್ಮಿಸುತ್ತಿರುವ ಸಮುದಾಯ ಭವನ ಮುಂದುವರೆದ ಕಟ್ಟಡ ನಿರ್ಮಾಣಕ್ಕೆ ವಿಶೇಷ ಪ್ರಕರಣದಡಿ	2019-20	ಸಮುದಾಯ ಭವನ	ವೀರಶೈವ	50.00	12.50	12.50	ಪ್ರಗತಿಯಲ್ಲಿದೆ	
5	ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಕನ್ನಳ್ಳಿ ಗ್ರಾಮದ ಶ್ರೀ ವೀರಭದ್ರಸ್ವಾಮಿ ಸುಕ್ಷೇತ್ರದಲ್ಲಿ ಕನ್ನಲ್ಲಿ ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ(ರಿ), ಈ ಸಂಸ್ಥೆಯ ವತಿಯಿಂದ ನಿರ್ಮಿಸುತ್ತಿರುವ ಸಮುದಾಯ ಭವನ ಮುಂದುವರೆದ ಕಟ್ಟಡ ನಿರ್ಮಾಣಕ್ಕೆ	2019-20	ಸಮುದಾಯ ಭವನ	ವೀರಶೈವ	50.00	12.50	12.50	ಪ್ರಗತಿಯಲ್ಲಿದೆ	
6	ಶ್ರೀ ಕಾಳಿಕಾಂಬ ವಿಶ್ವಕರ್ಮ ಅಭಿವೃದ್ಧಿ ಸಂಘ, ಸಂ.866, 6ನೇ ಸಿ ಮೈನ್ ರೋಡ್, 6ನೇ ಕ್ರಾಸ್, ಪ್ರಕಾಶನಗರ, ಬೆಂಗಳೂರು-560021	2020-21	ಸಮುದಾಯ ಭವನ	ವಿಶ್ವಕರ್ಮ	25.00	18.75	18.75	ಪ್ರಗತಿಯಲ್ಲಿದೆ	
7	ಕರ್ನಾಟಕ ರಾಜ್ಯ ಗಂಗಾಮತಸ್ಥರ ಸಂಘ(ರಿ), ನಗರ್ತಪೇಟೆ, ರಾಮಶೆಟ್ಟಿಗಲ್ಲಿ, ಬೆಂಗಳೂರು-2	2021-22	ವಿದ್ಯಾರ್ಥಿನಿಲಯ	ಗಂಗಾಮತಸ್ಥ	150.00	37.50	37.50	ಪ್ರಗತಿಯಲ್ಲಿದೆ	
	ಒಟ್ಟು				475.00	131.25	131.25		

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 385
ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಸಾರಿಗೆ ಇಲಾಖೆಗೆ ಸರ್ಕಾರ ಕಳೆದ ಮೂರು ವರ್ಷಗಳಿಂದ ನಿಗದಿಪಡಿಸಿರುವ ಹಾಗೂ ಹಂಚಿದ ಮತ್ತು ವೆಚ್ಚವಾದ ಅನುದಾನವೆಷ್ಟು? (ಸಾರಿಗೆ ಸಂಸ್ಥೆಗಳ ನಿಗಮವಾರು, ವರ್ಷವಾರು ವಿವರಗಳನ್ನು ನೀಡುವುದು)	ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ನಿಗಧಿಪಡಿಸಿರುವ, ಹಂಚಿಕೆಯಾದ ಮತ್ತು ವೆಚ್ಚವಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ:

(ರೂ. ಕೋಟಿಗಳಲ್ಲಿ)

ಸಾರಿಗೆ ಸಂಸ್ಥೆ	ವರ್ಷ	ನಿಗಧಿಪಡಿಸಿರುವ ಅನುದಾನ	ಹಂಚಿಕೆಯಾದ ಅನುದಾನ	ವೆಚ್ಚವಾದ ಅನುದಾನ
ಕ.ರಾ.ರ.ಸಾ.ನಿಗಮ	2019-20	452.06	452.06	452.06
	2020-21	563.55	563.55	563.55
	2021-22	676.14	676.14	676.14
ಬೆಂ.ಮ.ಸಾ.ಸಂಸ್ಥೆ	2019-20	442.15	438.50	431.48
	2020-21	1142.37	1069.20	1069.20
	2021-22	1254.46	1254.44	1169.44
ವಾ.ಕ.ರ.ಸಾ.ಸಂಸ್ಥೆ	2019-20	300.57	299.13	299.13
	2020-21	369.41	369.41	369.41
	2021-22	336.54	335.33	335.33
ಕ.ಕ.ರ.ಸಾ.ನಿಗಮ	2019-20	255.58	255.57	255.57
	2020-21	329.91	329.89	329.89
	2021-22	290.12	288.99	288.99

ಕ್ರ.ಸಂ	ಪ್ರಶ್ನೆ	ಉತ್ತರ
ಆ.	ವಿವಿಧ ಸಾರಿಗೆ ನಿಗಮಗಳಿಗಾಗಿ ಈ ಅವಧಿಯಲ್ಲಿ ಖರೀದಿಸಿದ ವಿವಿಧ ಹೊ	ನಾಲ್ಕು ಸಾರಿಗೆ ಸಂಸ್ಥೆಗಳಿಂದ 2019-20 ರಿಂದ 2021-22ನೇ ಸಾಲಿನಲ್ಲಿ ಖರೀದಿಸಿರುವ ವಿವಿಧ ಹೊಸ ಬಸ್‌ಗಳ ಪರಿಮಾಣ ಕೆಳಕಂಡಂತಿರುತ್ತದೆ:

ವಿವರ	2019-20	2020-21	2021-22

DFA/ 249

	ಸ ಬಸ್‌ಗಳ ಸಂಖ್ಯೆಯೆಷ್ಟು; ಇದಕ್ಕಾಗಿ ವೆಚ್ಚವಾದ ಮೊತ್ತವೆಷ್ಟು; (ನಿಗಮವಾರು, ವರ್ಷವಾರು ಖರೀದಿಸಿದ ಬಸ್ಗಳ ವಿವರ ಮತ್ತು ನಿಗಮವಾರು ಪಾವತಿಸಿದ ಮೊತ್ತದ ವಿವರ ಒದಗಿಸುವುದು);	(see table below)

ಕ.ರಾ.ರ.ಸಾ.ನಿಗಮ			
ಬಸ್‌ಗಳ ಸಂಖ್ಯೆ	697	147	1*
ವೆಚ್ಚ (ರೂ. ಕೋಟಿಗಳಲ್ಲಿ)	258.63	35.34	0.14
ಬೆಂ.ಮ.ಸಾ.ಸಂಸ್ಥೆ			
ಬಸ್‌ಗಳ ಸಂಖ್ಯೆ	361	-	565
ವೆಚ್ಚ (ರೂ.ಕೋಟಿಗಳಲ್ಲಿ)	116.02	-	193.41
ವಾ.ಕ.ರ.ಸಾ.ಸಂಸ್ಥೆ			
ಬಸ್‌ಗಳ ಸಂಖ್ಯೆ	456	-	-
ವೆಚ್ಚ (ರೂ. ಕೋಟಿಗಳಲ್ಲಿ)	123.60	-	-
ಕ.ಕ.ರ.ಸಾ.ನಿಗಮ			
ಬಸ್‌ಗಳ ಸಂಖ್ಯೆ	49	01	-
ವೆಚ್ಚ (ರೂ. ಕೋಟಿಗಳಲ್ಲಿ)	12.13	0.25	-

*ಮೆ: ಟಾಟಾ ಮೋಟಾರ್ಸ್ ಇವರು ಪ್ರಾಯೋಗಿಕ ಕಾರ್ಯಾಚರಣೆಗಾಗಿ ಉಚಿತವಾಗಿ ಒಂದು ಬಿ.ಎಸ್.-6 224" ವ್ಹೀಲ್ ಬೇಸ್ ಅಡಿಗಟ್ಟನ್ನು ನೀಡಿದ್ದು, ಸದರಿ ಅಡಿಗಟ್ಟಿನ ಮೇಲೆ ಕರ್ನಾಟಕ ಸಾರಿಗೆ ಮಾದರಿ ವಾಹನದ ಕವಚವನ್ನು ನಿರ್ಮಾಣ ಮಾಡಿ ಪ್ರಾಯೋಗಿಕ ಕಾರ್ಯಾಚರಣೆಗಾಗಿ ನಿಯೋಜಿಸಲಾಗಿದೆ.

ಇ.	ಖರೀದಿಸಿದ ಬಸ್‌ಗಳನ್ನು ಯಾವ ಯಾವ ಘಟಕಗಳಿಗೆ ಪೂರೈಕೆ ಮಾಡಲಾಗಿದೆ ಹಾಗೂ ಕೊರತೆ ಇರುವ ಘಟಕಗಳಿಗೆ ಆದ್ಯತೆ ನೀಡಿ ಬಸ್‌ಗಳನ್ನು ಪೂರೈಕೆ ಮಾಡುವಲ್ಲಿ ಸರ್ಕಾರದ ಕ್ರಮಗಳೇನು?	ನಾಲ್ಕೂ ಸಾರಿಗೆ ಸಂಸ್ಥೆಗಳಿಂದ ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಾಹನಗಳನ್ನು ಘಟಕಗಳಿಗೆ ಹಂಚಿಕೆ ಮಾಡಿರುವ ಘಟಕವಾರು ವಿವರದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಮುಂದುವರೆದು ಸಂಸ್ಥೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಕೊರತೆಯಿರುವ ಘಟಕಗಳಿಗೆ ಆದ್ಯತೆ ಮೇರೆಗೆ ವಾಹನಗಳನ್ನು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ: ಟಿಡಿ 203 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-2

ಕಳೆದ 3 ವರ್ಷಗಳಲ್ಲಿ ಖರೀದಿಸಿದ ವಾಹನಗಳನ್ನು ನಿಗಮದ ಘಟಕಗಳಿಗೆ ಹಂಚಿಕೆ ಮಾಡಲಾದ ವಿವರ

Sl no	Division	Depot	2019-20	2020-21	2021-22
1	BNG (C)	D-1	38	4	0
		D-2	26	0	0
		D-4	18	0	0
		D-5	6	0	0
		D-6	10	0	1
		NMG	15	0	0
		Divn.	113	4	1
2	RNG	KKP	3	2	0
		AKL	4	1	0
		CPT	2	2	0
		HRL	3	3	0
		RNG	6	2	0
		MGD	3	3	0
		Divn.	21	13	0
3	TMK	TMK-1	4	2	0
		TMK-2	7	2	0
		KGL	8	2	0
		TVK	6	1	0
		SIRA	5	2	0
		TPT	4	2	0
		MDG	5	2	0
		Divn.	39	13	0
4	KLR	KLR	12	4	0
		KGF	15	5	0
		SRP	7	4	0
		MLR	4	3	0
		MBL	4	3	0
		Divn.	42	19	0
5	CBP	CBP	8	0	0
		CNT	8	0	0
		BGP	9	0	0
		GBR	8	2	0
		DBP	10	2	0
		Divn.	43	4	0
6	MYS	BMT	0	0	0
		KVP	0	0	0
		SGH	0	0	0
		VJN	0	0	0
		D-1	8	0	0
		D-2	27	0	0
		D-3	4	1	0
		KRN	6	0	0
		HNS	8	0	0
		HDK	7	0	0
		PRP	3	0	0
		Divn.	63	1	0

Sl no	Division	Depot	2019-20	2020-21	2021-22
7	MDY	MDY	6	0	0
		MDR	2	1	0
		MLY	4	1	0
		NMG	2	0	0
		KRP	3	7	0
		PND	3	2	0
		Divn.	**20**	11	0
8	CJR	CJR	14	3	0
		GPT	13	3	0
		KLG	17	2	0
		NJG	14	1	0
		Divn.	**58**	9	0
9	HSN	HSN 1	1	3	0
		HSN 2	3	2	0
		CRP	4	0	0
		RNP	3	1	0
		HNP	4	4	0
		AGD	6	0	0
		Divn.	**21**	10	0
10	CKM	CKM	15	0	0
		ARS	4	3	0
		SKP	5	0	0
		KDR	4	1	0
		MDG	4	0	0
		BLR	1	0	0
		Divn.	**33**	4	0
11	MNG	M-1	33	2	0
		M-2	12	4	0
		M-3	9	3	0
		KND	18	0	0
		UDP	17	6	0
		Divn.	**89**	15	0
12	PTR	PTR	9	0	0
		DSL	18	4	0
		BCR	4	4	0
		MRC	6	4	0
		SLA	6	2	0
		Divn.	**43**	14	0
13	DVG	DVG-1	40	0	0
		DVG-2	8	0	0
		HRP	15	0	0
		HRR	0	0	0
		Divn.	**63**	0	0
14	SMG	SMG	17	1	0
		BDVT	3	3	0
		SGR	11	2	0
		HNL	4	4	0
		Divn.	**35**	10	0
15	CDG	CTD	16	11	0
		CLK	7	0	0
		HSD	8	3	0
		PGD	8	2	0
		Divn.	39	16	0

ವ್ಯವಸ್ಥಾಪಕ ನಿರ್ದೇಶಕರು
ಕರಾರಸಾನಿಗಮ

ಅನುಬಂಧ-ಆ

ಖರೀದಿಸಿದ ಬಸ್ಸುಗಳನ್ನು ಘಟಕವಾರು ಹಂಚಿಕೆ ಮಾಡಿರುವ ವಿವರಗಳು

ಘಟಕ	2019-20			2021-22
	ಟಾಟಾ	ಐಷರ್	ವೋಲ್ವೋ	ಲೇಲ್ಯಾಂಡ್
2	4			19
3	7			19
4	5			18
6	5			15
7	0		1	0
8	24			15
9	18			15
10	7			16
11	16			14
12	5			18
14	5			13
15	6			10
16	10			18
17	4			16
19	6			15
20	8			18
21	7			22
22	15			15
23	6			12
24	7	1		12
25	0		9	0
26	21			15
27	10			10
30	19			16
31	10			27
32	11			11
33	5			22
34	12			24
35	13			0
36				20
37	6			10
38	7	1		10
39	20			12
40				15
41	20	2		10
43				13
45				15
46				15
47	17			10
48	11			10
ಒಟ್ಟು	347	4	10	565
ಒಟ್ಟು	361			565

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	386
ಮಾನ್ಯ ಸದಸ್ಯರ ಹೆಸರು	ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	14/09/2022
ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಾರ್ಮಿಕ ಇಲಾಖೆಯಿಂದ ತ್ರಿಚಕ್ರ ಮತ್ತು ದ್ವಿಚಕ್ರ ವಾಹನ ದುರಸ್ತಿಗೆ ದೊರೆಯುತ್ತಿರುವ ಸೌಲಭ್ಯಗಳೇನು; (ವಿವರ ಒದಗಿಸುವುದು).	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ **ಮೆಕ್ಯಾನಿಕ್ಸ್ (ತ್ರಿಚಕ್ರ ಮತ್ತು ದ್ವಿಚಕ್ರ ವಾಹನ ದುರಸ್ತಿಗಾರರು)** ಸೇರಿದಂತೆ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿಕಾರ್ಮಿಕ"ರನ್ನು ನೋಂದಾಯಿಸಿ ಗುರುತಿನ ಚೀಟಿ ವಿತರಿಸಲಾಗುತ್ತಿದ್ದು, ಈ ಯೋಜನೆಯಡಿ ಯಾವುದೇ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಕೋವಿಡ್-19ರ 2ನೇ ಅಲೆಯ ಸಂದರ್ಭದಲ್ಲಿ ಮೆಕ್ಯಾನಿಕ್‌ಗಳು ಸೇರಿದಂತೆ ಮೇಲ್ಕಂಡ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಒಂದು ಬಾರಿಯ ನೆರವಿನ ವಿಶೇಷ ಪ್ಯಾಕೇಜ್ ಅಡಿ ತಲಾ ರೂ.2,000/-ಗಳನ್ನು ವಿತರಿಸಲಾಗಿದ್ದು, ತ್ರಿಚಕ್ರ, ದ್ವಿಚಕ್ರ ಹಾಗೂ ಇತರೆ ವಾಹನ ದುರಸ್ತಿಯಲ್ಲಿ ತೊಡಗಿರುವ **36,329** ಮೆಕ್ಯಾನಿಕ್‌ಗಳಿಗೆ ಒಟ್ಟು ರೂ.7,26,58,000/-ಗಳ ನೆರವನ್ನು ವಿತರಿಸಲಾಗಿದೆ. ಮುಂದುವರೆದು, ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ (NDUW-National Database for Unorganised Worker) ಕ್ರೋಢೀಕರಿಸಲು ಸಾಮಾನ್ಯ ಸೇವಾ ಕೇಂದ್ರಗಳ (CSC) ಸಹಯೋಗದೊಂದಿಗೆ ಸುಮಾರು 379 ವರ್ಗಗಳ ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ ಮೂಲಕ ನೋಂದಾಯಿಸಲಾಗುತ್ತಿದ್ದು,

		ಸ್ಥಳದಲ್ಲಿಯೇ ಗುರುತಿನ ಚೀಟಿ ಪಡೆಯಬಹುದಾಗಿದೆ. ಸದರಿ ನೋಂದಾಯಿತ ಅಸಂಘಟಿತ ಕಾರ್ಮಿಕರು ಒಂದು ವರ್ಷದ ಅವಧಿಗೆ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PM-SBY) ಪ್ರಯೋಜನ ಪಡೆಯಬಹುದಾಗಿದ್ದು, ಅಪಘಾತದಿಂದ ಮರಣ ಹೊಂದಿದಲ್ಲಿ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2 ಲಕ್ಷ ಹಾಗೂ ಭಾಗಶಃ ಅಂಗವೈಕಲ್ಯಕ್ಕೆ ರೂ.1 ಲಕ್ಷ ಪರಿಹಾರದ ಲಾಭವನ್ನು ಪಡೆಯಬಹುದಾಗಿದೆ.
ಆ)	ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ ತ್ರಿಚಕ್ರ ಮತ್ತು ದ್ವಿಚಕ್ರ ವಾಹನ ದುರಸ್ತಿಗಾರರು ತುಂಬಾ ಸಮಸ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪಿರಿಯಾಪಟ್ಟಣ ಮತಕ್ಷೇತ್ರ ಸೇರಿದಂತೆ ರಾಜ್ಯಾದ್ಯಂತ ತ್ರಿಚಕ್ರ ಮತ್ತು ದ್ವಿಚಕ್ರ ವಾಹನ ದುರಸ್ತಿಗಾರರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಇ)	ಬಂದಿದ್ದಲ್ಲಿ, ಈ ಕ್ಷೇತ್ರದ ವಾಹನ ದುರಸ್ತಿಗಾರರು ಸಂಘ ನೋಂದಣಿ ಮಾಡಿದ್ದು ಇವರಿಗೆ ಸೌಲಭ್ಯವನ್ನು ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಮಂಡಳಿಯಿಂದ ನೀಡಲಾಗುವ ಸೌಲಭ್ಯಗಳನ್ನು ನೇರವಾಗಿ ಯಾವುದೇ ಸಂಘಗಳಿಗೆ ನೀಡಲಾಗುವುದಿಲ್ಲ. ಆಯಾ ಯೋಜನೆಯಡಿ ಸರ್ಕಾರದಿಂದ ಹೊರಡಿಸಲಾದ ಮಾರ್ಗಸೂಚಿಯನ್ವಯ ಅರ್ಹ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಮೆಕ್ಯಾನಿಕ್ಸ್‌ಗೆ (ತ್ರಿಚಕ್ರ ಮತ್ತು ದ್ವಿಚಕ್ರ ವಾಹನ ದುರಸ್ತಿಗಾರರು) ಸಂಬಂಧಿಸಿದಂತೆ, ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಮತ್ತು ಇ-ಶ್ರಮ್ ಯೋಜನೆಯಡಿ ಸದರಿ ಕಾರ್ಮಿಕರ ನೋಂದಣಿ ಹಾಗೂ ಕೋವಿಡ್-19ರ 2ನೇ ಅಲೆಯ ಸಂದರ್ಭದಲ್ಲಿ ನೀಡಿರುವ ಒಂದು ಬಾರಿಯ ನೆರವನ್ನು ಹೊರತುಪಡಿಸಿ, ಪ್ರಸ್ತುತ ಇತರೆ ಯಾವುದೇ ಸೌಲಭ್ಯವನ್ನು ನೀಡಲಾಗುತ್ತಿಲ್ಲ.

ಕಾಇ 484 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

<u>**ಕರ್ನಾಟಕ ವಿಧಾನ ಸಭೆ**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	387
ಮಾನ್ಯ ಸದಸ್ಯರ ಹೆಸರು	:	ಶ್ರೀ ಮಹದೇವ.ಕೆ
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ನೀಡಿರುವ ವಿಶೇಷ ಅನುದಾನವೆಷ್ಟು; (ಆದೇಶವಾಗಿರುವ ಕ್ಷೇತ್ರದ ವಿವರ ನೀಡುವುದು)	2022-23ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಠಾನ ಮಾಡುತ್ತಿರುವ ಪ್ರಗತಿ ಕಾಲೋನಿ ಯೋಜನೆ ಮತ್ತು ಸಮುದಾಯ ಭವನಗಳ ನಿರ್ಮಾಣ ಕಾರ್ಯಕ್ರಮಗಳಡಿ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಿಗೆ ವಿಶೇಷ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ವಿಧಾನಸಭಾ ಕ್ಷೇತ್ರ	ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಮಂಜೂರಾತಿ ಮೊತ್ತ
1	ಹೊಸಕೋಟೆ	ಸಕಇ 403 ಎಸ್‌ಎಲ್‌ಪಿ 2022 (5) ದಿನಾಂಕ:20-07-2022	500.00
2	ಹಳಿಯಾಳ	ಸಕಇ 403 ಎಸ್‌ಎಲ್‌ಪಿ 2022 (2) ದಿನಾಂಕ:20-07-2022	700.00
3	ಚಳ್ಳಕೆರೆ	ಸಕಇ 403 ಎಸ್‌ಎಲ್‌ಪಿ 2022 (1) ದಿನಾಂಕ:20-07-2022	300.00
4	ಜಮಖಂಡಿ	ಸಕಇ 403 ಎಸ್‌ಎಲ್‌ಪಿ 2022 (3) ದಿನಾಂಕ:25-07-2022	100.00
5	ವರುಣಾ	ಸಕಇ 403 ಎಸ್‌ಎಲ್‌ಪಿ 2022 ದಿನಾಂಕ:20-07-2022	200.00
6	ಬಾದಾಮಿ	ಸಕಇ 403 ಎಸ್‌ಎಲ್‌ಪಿ 2022 (6) ದಿನಾಂಕ:23-08-2022	680.00
7	ಕೆ.ಜಿ.ಎಫ್	ಸಕಇ 395 ಪಕವಿ 2022 ದಿನಾಂಕ:10-08-2022	400.00
8	ಹುನಗುಂದ	ಸಕಇ 395 ಪಕವಿ 2022 (1) ದಿನಾಂಕ:10-08-2022	120.00
9	ಜಗಳೂರು	ಸಕಇ 395 ಪಕವಿ 2022 (1) ದಿನಾಂಕ:10-08-2022	450.00
ಒಟ್ಟು			3450.00
ಸಮುದಾಯ ಭವನಗಳ ನಿರ್ಮಾಣ			
1	ಕೊಳ್ಳೇಗಾಲ	ಸಕಇ 175 ಪಕವಿ 2022 ದಿನಾಂಕ:20-08-2022	590.00
ಒಟ್ಟು			590.00

ಆ)	ಪಿರಿಯಾಪಟ್ಟಣ ಮತಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯ ಕಾಮಗಾರಿ ತೆಗೆದುಕೊಳ್ಳಲು ವಿಶೇಷ ಅನುದಾನ 150 ಲಕ್ಷ ರೂ ಮಂಜೂರು ಮಾಡಿ ಸುಮಾರು 2 ತಿಂಗಳು ಕಳೆದರೂ ಸಹ ಇದುವರೆವಿಗೂ ಆದೇಶವಾಗದೇ ಅಭಿವೃದ್ಧಿ ಕುಂಠಿತವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ಸರ್ಕಾರದ ಆದೇಶ ಮಾಡಿ ಹಣ ಬಿಡುಗಡೆ ಮಾಡಲು ಅಗತ್ಯ ಕ್ರಮಕೈಗೊಳ್ಳಲಾಗುವುದೇ?	ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 317 ವೆಚ್ಚ-3 2022 ದಿನಾಂಕ:31-05-2022 ರಲ್ಲಿ ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುತ್ತದೆ. ಆದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನುದಾನದ ಕೊರತೆಯಿರುವುದರಿಂದ ಹೆಚ್ಚುವರಿ ಅನುದಾನ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿರುತ್ತದೆ. ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನ ನೀಡಿದ ನಂತರ ಅಗತ್ಯ ಕ್ರಮವಹಿಸಲಾಗುವುದು.

ಸಕಇ 490 ಸಕೆವಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	388
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ.ಮಹದೇವ ಕೆ. (ಪಿರಿಯಾ ಪಟ್ಟಣ)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.
ಉತ್ತರಿಸುವ ದಿನಾಂಕ	:	14.09.2022.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾ ಪಟ್ಟಣ ಮತಕ್ಷೇತ್ರವನ್ನು ಅರೆ ಮಲೆನಾಡು ಎಂದು ಗುರುತಿಸಿದ್ದು ಬೆಳೆ ಸಮೀಕ್ಷೆ ಪ್ರಕಾರ ಮತ ಕ್ಷೇತ್ರದಲ್ಲಿ 1111.80 ಹೆಕ್ಟೇರ್ ಪ್ರದೇಶದಲ್ಲಿ ರೈತರು ಅಡಿಕೆ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	• ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ 1991 ರ ಅನ್ವಯ ಪಿರಿಯಾಪಟ್ಟಣ ಮತ ಕ್ಷೇತ್ರವನ್ನು ಮಲೆನಾಡು ಪ್ರದೇಶವೆಂದು ಗುರುತಿಸಲಾಗಿರುತ್ತದೆ. ಬೆಳೆ ಸಮೀಕ್ಷೆ 2021-22 ರ ಪ್ರಕಾರ ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ 1111.80 ಹೆಕ್ಟೇರ್ ಪ್ರದೇಶದಲ್ಲಿ ರೈತರು ಅಡಿಕೆ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ನರೇಗಾ ಹಾಗೂ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	• ಅಡಿಕೆ ಬೆಳೆಯುವ ಸಾಂಪ್ರದಾಯಿಕ ಪ್ರದೇಶಗಳಾದ ಕರಾವಳಿ ಮತ್ತು ಮಲೆನಾಡು ವ್ಯಾಪ್ತಿಯನ್ನು ಹೊರತುಪಡಿಸಿ, ಉಳಿದ ಪ್ರದೇಶಗಳಲ್ಲಿ ನರೇಗಾ ಹಾಗೂ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ಅಡಿಕೆ ಬೆಳೆ ಸಾಗುವಳಿಗೆ ಸಹಾಯಧನ ನೀಡಲು ಅವಕಾಶವಿಲ್ಲದಿರುವುದಿಲ್ಲ.
ಇ)	ಅಡಿಕೆ ಬೆಳೆಯುವ ರೈತರಿಗೆ ಸಹಾಯಧನ ನೀಡಲು ರಾಜ್ಯ ಮಟ್ಟದ ಸಮಿತಿಯಲ್ಲಿ ಈ ಮತಕ್ಷೇತ್ರದ ಅಡಿಕೆ ಬೆಳೆಯ ವಿಷಯವನ್ನು ಸೇರಿಸಿ ರೈತರಿಗೆ ಅನುಕೂಲ ಮಾಡಲು ಸರ್ಕಾರ ಕ್ರಮವಹಿಸುವುದೇ?	• ಅಡಿಕೆ ಬೆಳೆಯ ಅಗಾಧ ಪ್ರದೇಶ ವಿಸ್ತರಣೆ, ಅಂತರ್ಜಲ ಸಮಸ್ಯೆ ಉಂಟಾಗಬಹುದಾದ ಮಾರುಕಟ್ಟೆ ಸಮಸ್ಯೆ ಇವನ್ನು ಪರಿಗಣಿಸಿ, ಈ ವಿಷಯವು ಸರ್ಕಾರದ ಪರಿಶೀಲನೆ ಹಂತದಲ್ಲಿದೆ.

No.HORTI 405 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	389
ಸದಸ್ಯರ ಹೆಸರು	:	**ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)**
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	**ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ಮಂಜೂರಾದ ಸಮುದಾಯ ಭವನಗಳೆಷ್ಟು; (ಹೆಸರು ಸಹಿತ ಗ್ರಾಮವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಹೊಸ ಭವನಗಳ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಿರುವುದಿಲ್ಲ.
ಆ)	ಈ ಪೈಕಿ ಪೂರ್ಣಗೊಂಡಿರುವ ಸಮುದಾಯ ಭವನಗಳೆಷ್ಟು; ಅಪೂರ್ಣಗೊಂಡಿರುವ ಸಮುದಾಯ ಭವನಗಳೆಷ್ಟು; (ಹೆಸರು ಸಹಿತ ಗ್ರಾಮವಾರು ಸಂಪೂರ್ಣ ವಿವರ ನೀಡುವುದು)	
ಇ)	ಪೂರ್ಣಗೊಳ್ಳದೆ ಬಾಕಿ ಉಳಿಯಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)	
ಈ)	ಅಪೂರ್ಣಗೊಂಡಿರುವ ಹಾಗೂ ಪ್ರಾರಂಭಿಸಬೇಕಾಗಿರುವ ಸಮುದಾಯ ಭವನಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;	
ಉ)	ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	

ಸಕಇ 573 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	390
ಮಾನ್ಯ ಸದಸ್ಯರ ಹೆಸರು	ಶ್ರೀ ಪುಟ್ಟರಂಗಶೆಟ್ಟಿ ಸಿ (ಚಾಮರಾಜನಗರ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ರಸ್ತುತ ಹಿಂದುಳಿದ ವರ್ಗಗಳ ವ್ಯಾಪ್ತಿಯಡಿ ಅಸ್ತಿತ್ವದಲ್ಲಿರುವ ವಸತಿ ನಿಲಯಗಳೆಷ್ಟು; (ವಸತಿ ನಿಲಯಗಳ ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ 2438 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿನಿಲಯಗಳ ಸಂಪೂರ್ಣ ವಿವರವನ್ನು ಇಲಾಖಾ ಜಾಲತಾಣ http://bcwd.karnataka.gov.in/ರಲ್ಲಿ ನೀಡಲಾಗಿದೆ.
ಆ)	ಈ ವಸತಿ ನಿಲಯಗಳಲ್ಲಿ ಬಾಲಕ-ಬಾಲಕಿಯರ ನಿಲಯಗಳೆಷ್ಟು; ಇವುಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು;	ಇಲಾಖೆಯಡಿ 1519 ಬಾಲಕರ ಮತ್ತು 919 ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು ಸದರಿ ವಿದ್ಯಾರ್ಥಿನಿಲಯಗಳಲ್ಲಿ ಕ್ರಮವಾಗಿ 102892 ವಿದ್ಯಾರ್ಥಿಗಳು ಹಾಗೂ 75881 ವಿದ್ಯಾರ್ಥಿನಿಯರಿಗೆ ಪ್ರವೇಶವನ್ನು ಕಲ್ಪಿಸಲಾಗಿರುತ್ತದೆ. ವಿವರಗಳನ್ನು ಇಲಾಖಾ ಜಾಲತಾಣ http://bcwd.karnataka.gov.in/ ರಲ್ಲಿ ನೀಡಲಾಗಿದೆ.
ಇ)	ಈ ವಸತಿ ನಿಲಯಗಳ ಪೈಕಿ ಸ್ವಂತ ಕಟ್ಟಡ ಹೊಂದಿರುವ ನಿಲಯಗಳೆಷ್ಟು;	ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 2438 ವಿದ್ಯಾರ್ಥಿನಿಲಯಗಳ ಪೈಕಿ 1578 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ.
ಈ)	ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳಾವುವು ಹಾಗೂ ಅವುಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಬಾಡಿಗೆಯ ಮೊತ್ತವೆಷ್ಟು? (ಸಂಪೂರ್ಣ ವಿವರ ನೀಡುವುದು)	ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳು ಹಾಗೂ ಅವುಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಬಾಡಿಗೆಯ ಮೊತ್ತದ ಸಂಪೂರ್ಣ ವಿವರಗಳನ್ನು ಇಲಾಖಾ ಜಾಲತಾಣ http://bcwd.karnataka.gov.in/ ರಲ್ಲಿ ನೀಡಲಾಗಿದೆ.

ಸಂಖ್ಯೆ: ಬಿಸಿಡಬ್ಲ್ಯೂ 514 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

C.// 889922

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 391
ಸದಸ್ಯರ ಹೆಸರು : ಶ್ರೀ ಪುಟ್ಟರಂಗಶೆಟ್ಟಿ ಸಿ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಚಾಮರಾಜನಗರ ಪಟ್ಟಣದಲ್ಲಿ ನೂತನ ಬಸ್ ಘಟಕ ಸ್ಥಾಪಿಸಲು ಭೂಮಿ ಮಂಜೂರು ಮಾಡಲಾಗಿದೆಯೇ; (ಆದೇಶದ ಪ್ರತಿ ನೀಡುವುದು)	ನೂತನ ಬಸ್ ಘಟಕಕ್ಕಾಗಿ ಭೂಮಿ ಮಂಜೂರಾಗಿರುವುದಿಲ್ಲ.
ಆ	ನೂತನ ಬಸ್ ಘಟಕ ಮಂಜೂರಾತಿಗೆ ಪ್ರಸ್ತುತ ಬಜೆಟ್‌ನಲ್ಲಿ ಹಣಕಾಸಿನ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗಿದೆಯೇ?	ಚಾಮರಾಜನಗರದಲ್ಲಿ ಈಗಾಗಲೇ ಬಸ್ ಘಟಕ ಸ್ಥಾಪಿಸಲಾಗಿದ್ದು, ಕಾರ್ಯಾಚರಣೆ ಮಾಡುತ್ತಿರುವುದರಿಂದ ನೂತನ ಘಟಕದ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಟಿಡಿ 177 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	408
ವಿಧಾನ ಸಭೆಯ ಸದಸ್ಯರ ಹೆಸರು	:	ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸಬೇಕಾದ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.
ಉತ್ತರಿಸಬೇಕಾದ ದಿನಾಂಕ	:	14.09.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ	ತೋಟಗಾರಿಕೆ ಇಲಾಖೆಯಲ್ಲಿ ಬರುವಂತಹ ಸಲಕರಣೆಗಳು, ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ವಿತರಿಸಲು ಸರಿಯಾದ ಮಾಹಿತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತೋಟಗಾರಿಕೆ ಇಲಾಖೆಯಲ್ಲಿ ಬರುವಂತಹ ಸಲಕರಣೆಗಳು, ಕೃಷಿ ಯಂತ್ರೋಪಕರಣಗಳನ್ನು RKVY, NHM & SMAM ಯೋಜನೆಗಳಡಿ ರೈತರಿಗೆ ವಿತರಿಸಲು ಸರಿಯಾದ ಮಾಹಿತಿಯನ್ನು ನೀಡಲಾಗುತ್ತಿದೆ.
ಆ	ತೋಟಗಾರಿಕೆಇಲಾಖೆಯಲ್ಲಿರೈತರ ಹೊಲದಲ್ಲಿಹಣ್ಣಿನಗಿಡಗಳನ್ನುಬೆಳೆಸಲುಎಸ್. ಸಿ.ಪಿ/ಟಿ.ಎಸ್.ಪಿಯಡಿಆದ್ಯತೆನೀಡದಿರುವುದುಸರ್ಕಾರ ದಗಮನಕ್ಕೆಬಂದಿದೆಯೇ;	ತೋಟಗಾರಿಕೆ ಇಲಾಖೆಯಲ್ಲಿ ರೈತರ ಹೊಲದಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಲು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 4 ಹೆಕ್ಟೇರ್ ವರೆಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಹಾಯಧನವನ್ನು ನೀಡಲಾಗುತ್ತಿದೆ.
ಇ	ಪ್ರತಿಯೊಂದುಗ್ರಾಮಪಂಚಾಯ್ತಿವ್ಯಾಪ್ತಿಯಲ್ಲಿ ತೋಟಗಾರಿಕೆಇಲಾಖೆಯುಉಚಿತವಾಗಿಗಿಡಗಳನ್ನುನೆ ಟ್ಟಿಲ್ಲದಿರುವುದುಸರ್ಕಾರದಗಮನಕ್ಕೆಬಂದಿದೆಯೇ ;	ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಗಿಡಗಳನ್ನು ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳಿಗೆ ವಿತರಿಸಿ ನೆಡಲಾಗುತ್ತಿದೆ.
ಈ	ಎನ್.ಆರ್.ಜಿ. ಯೋಜನೆಯ ಅನುದಾನ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಉ	ಬಂದಿದ್ದಲ್ಲಿಸರ್ಕಾರ ಕೈಗೊಂಡ ಕ್ರಮಗಳೇನು?	ಅನ್ವಯಿಸುವುದಿಲ್ಲ.

No.HORTI 406 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 409
ಉತ್ತರಿಸಬೇಕಾದ ದಿನಾಂಕ : 14.09.2022
ಸದಸ್ಯರ ಹೆಸರು : ಶ್ರೀ ವೆಂಕಟ ರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಯಾದಗಿರಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗೆ ಇದುವರೆಗೂ ಒದಗಿಸಿದ ಅನುದಾನ ಹಾಗೂ ಖರ್ಚಿನ ವಿವರ ನೀಡುವುದು;	2020-21 ಮತ್ತು 2021-22ನೇ ಸಾಲಿನಲ್ಲಿ ಕ್ರಮವಾಗಿ ರೂ.1.00 ಲಕ್ಷ ಮತ್ತು ರೂ. 3.00 ಲಕ್ಷಗಳ ಅನುದಾನ ಒದಗಿಸಿದ್ದು, ಸದರಿ ಅನುದಾನದಲ್ಲಿ ಜಿಲ್ಲೆಯ MNREGA ಕಾರ್ಯಕ್ರಮದ ಅಡಿಯಲ್ಲಿ ಆಟದ ಮೈದಾನವನ್ನು ಅಭಿವೃದ್ಧಿಗೊಳಿಸಿದ ಸರ್ಕಾರಿ ಪ್ರೌಢಶಾಲೆಗಳಿಗೆ ವಿತರಿಸಲು ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲಾಗಿರುತ್ತದೆ.
24. ಸಿ.ಸಿ. ಚರಂಡಿಗಳನ್ನು ನಿರ್ಮಿಸುವಾಗ ಚರಂಡಿಯ ಮಧ್ಯಭಾಗದಲ್ಲಿ ಕನಿಷ್ಠ 100 ಅಡಿಗೊಂದು ಚಿಕ್ಕದಾದ ಪಿಟ್‌ನ್ನು ಅಥವಾ ಹೋಲನ್ನು ನಿರ್ಮಿಸುವುದು ಕಡ್ಡಾಯ. ಇದರಿಂದ ಮಳೆಯ ಅಥವಾ ಇತರೆ ನೀರು ಭೂಮಿಯಲ್ಲಿ ಇಂಗಿ ನೀರಿನ ತೇವಾಂಶವನ್ನು ಅಭಿವೃದ್ಧಿಪಡಿಸಲು ಸುತ್ತಮುತ್ತಲಿನ ಪರಿಸರಕ್ಕೆ ಸಹಕಾರಿಯಾಗುತ್ತದೆ (ಅಂದಾಜು ಪಟ್ಟಿಯಲ್ಲಿ ಇತರೆ ವೆಚ್ಚದಲ್ಲಿ ಸೇರಿಸುವುದು).
25. ರಸ್ತೆ ನಿರ್ಮಾಣ, ಸಿ.ಸಿ. ಚರಂಡಿ ನಿರ್ಮಾಣ ಆಗುವಂತಹ ಕಾಮಗಾರಿಗಳ ಅಕ್ಕಪಕ್ಕದಲ್ಲಿರುವ ಮನೆಗಳಲ್ಲಿನ ದಿನನಿತ್ಯ ಉಪಯೋಗಿಸುವ ನೀರನ್ನು ಅಂದರೆ, ಸ್ನಾನದ ನೀರು, ಪಾತ್ರೆ ಪಗಡೆಗಳನ್ನು ತೊಳೆಯುವ ನೀರು ಮತ್ತು ಬಟ್ಟೆ ತೊಳೆಯುವ ನೀರನ್ನು ಪೋಲಾಗಿ ಹರಿಯಲು ಬಿಡದೆ ಸಾಧ್ಯವಾದರೆ ಅಲ್ಲಿ ಚಿಕ್ಕದೊಂದು ಗುಂಡಿಯನ್ನು ನಿರ್ಮಿಸಿ ಅದರ ಮೇಲೆ ಗಟ್ಟಿಯಾದ ಕಲ್ಲು ಚಪ್ಪಡಿಯನ್ನು ಇಡಿಸಿ ಆ ನೀರನ್ನು ಗುಂಡಿಗೆ ಹೋಗುವಂತೆ ಮಾಡಿದಲ್ಲಿ ಒಳ್ಳೆಯ ತೇವಾಂಶವನ್ನು ಸೃಷ್ಟಿಸಿ ಭೂಮಿಯನ್ನು ತಂಪಾಗಿಸಲು ಹಾಗೂ ಹವಾಮಾನ ತಂಪಾಗಿಸಲು ಸಹಕಾರಿಯಾಗುತ್ತದೆ (ಅಂದಾಜು ಪಟ್ಟಿಯಲ್ಲಿ ಇತರೆ ವೆಚ್ಚದಲ್ಲಿ ಸೇರಿಸುವುದು)
26. ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 13 ಪಿಟಿಪಿ 2019, ಬೆಂಗಳೂರು ದಿ:21.12.2019 ರ ಆದೇಶದಂತೆ ಎಲ್ಲಾ ಕಾಮಗಾರಿಗಳನ್ನು 3ನೇ ವ್ಯಕ್ತಿಯಿಂದ ತಪಾಸಣೆ ಮಾಡಿ ವರದಿ ಸಲ್ಲಿಸುವುದು. ಈಗ ಬಿಡುಗಡೆ ಮಾಡಿರುವ ಹಣಕ್ಕೆ ಕಾಮಗಾರಿಯು ಸಂಪೂರ್ಣ ಮುಗಿದಿವೆ ಎಂದು ಪ್ರಮಾಣೀಕರಿಸಿದ ನಂತರವೇ ಉಳಿದ ಶೇ.40 ರಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು. ಕೊನೆಯ ಶೇ.20 ರಷ್ಟು ಹಣವನ್ನು 3ನೇ ವ್ಯಕ್ತಿಯಿಂದ ಕಾಮಗಾರಿಯ ಪರಿಶೀಲನಾ ವರದಿ ಬಂದ ನಂತರವೇ ಬಿಡುಗಡೆ ಮಾಡಲಾಗುವುದು. 3ನೇ ವ್ಯಕ್ತಿ ತಪಾಸಣಾ ವರದಿ ಸಲ್ಲಿಸದಿದ್ದಲ್ಲಿ ಅಂತಿಮ ಕಂತಿನ ಅನುದಾನ ಬಿಡುಗಡೆ ಮಾಡುವುದಿಲ್ಲ.

ಕಾರ್ಯದರ್ಶಿ (ಪ್ರ)
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

ಪ್ರತಿಯನ್ನು:-

1. ಉಪಹಣಕಾಸು ನಿಯಂತ್ರಣಾಧಿಕಾರಿಗಳು, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ಇವರಿಗೆ ಮುಂದಿನ ಕ್ರಮಕ್ಕೆ.
2. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಬೆಂಗಳೂರು ಇವರಿಗೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಬೆಂಗಳೂರು (ಗ್ರಾ) ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ / ಕಡತಕ್ಕೆ.

OFFICE OF THE SECRETARY
BAYALUSEEME DEVELOPMENT BOARD
TAMATAKALLU ROAD
CHITRADURGA-577502
e-mail:bsdbsecretary@gmail.com
Phone No: 08194-231584/85/86

ಕಾರ್ಯದರ್ಶಿಗಳವರ ಕಾರ್ಯಾಲಯ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ತಮಟಕಲ್ಲು ರಸ್ತೆ, ಚಿತ್ರದುರ್ಗ-577502
e-mail:bsdbsecretary@gmail.com
ದೂರವಾಣಿ ಸಂ: 08194-231584/85/86

ಸಂಖ್ಯೆ: ಬಪ್ರಮಂ/ಚಿ/ಲೆಕ್ಕ/ಹ.ಬಿ/2019-20 ದಿನಾಂಕ:21.12.2019

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕೆ.ಆರ್.ಐ.ಡಿ.ಎಲ್,
ಬೆಂಗಳೂರು

ಮಾನ್ಯರೇ,

ವಿಷಯ:- ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.
ಉಲ್ಲೇಖ:- ಮಂಡಳಿಯ ನಡವಳಿಗಳ ದಿನಾಂಕ:21.12.2019

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಾನುಸಾರ ನೀಡಲಾಗಿರುವ ಆಡಳಿತಾತ್ಮಕ ಮಂಜೂರಾತಿಗನುಸಾರವಾಗಿ ಅನುದಾನವನ್ನು RTGS ಮುಖಾಂತರ ಈ ಕೆಳಕಂಡಂತೆ ಜಮೆ ಮಾಡಲಾಗಿದೆ.

ಕ್ರ.ಸಂ.	ಚೆಕ್ ನಂ. ಮತ್ತು ದಿನಾಂಕ	ಅನುದಾನ ಜಮಾ ಮಾಡಲಾದ ತಮ್ಮ ಖಾತೆ ಸಂಖ್ಯೆ ಮತ್ತು ದಿನಾಂಕ	ಮೊತ್ತ
1	000822/ 21-12-2019	510101002832649 Corporation Bank, SC Road, Bengaluru	40,00,000
(RTGS ಮುಖಾಂತರ ಕಳುಹಿಸಲಾಗಿದೆ)			

ಸದರಿ ಅನುದಾನ ಸಂದಾಯವಾದ ಬಗ್ಗೆ ಪಾವತಿ ಪತ್ರ ಸಲ್ಲಿಸಲು ಸೂಚಿಸುತ್ತಾ ಆಡಳಿತಾತ್ಮಕ ಅನುಮೋದಿತ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿದೆ.

ಬಿಡುಗಡೆಗೊಳಿಸಿದ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಗಳನ್ನು ನಿರ್ವಹಿಸಬಹುದಾಗಿದೆ.

1. ಅನುದಾನವನ್ನು ಯಾವುದೇ ಕಾರಣಕ್ಕೂ ಅನುಮೋದಿತ ಕಾಮಗಾರಿಗಳನ್ನು ಹೊರತುಪಡಿಸಿ ಬೇರೆ ಕಾಮಗಾರಿಗಳಗೆ ಉಪಯೋಗಿಸಬಾರದು.
2. ಅನುದಾನವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿಡುವುದು ಹಾಗೂ ಪ್ರತ್ಯೇಕ ನಗದು ಪುಸ್ತಕದಲ್ಲಿನ ವ್ಯವಹರಿಸುವುದು.
3. ಕಾರ್ಯಕ್ರಮದ ಅನುಷ್ಠಾನದಲ್ಲಿ ಹಣ ವೆಚ್ಚ ಮಾಡುವ ಮುನ್ನ ಕರ್ನಾಟಕ ಆರ್ಥಿಕ ಸಂಹಿತೆ ಕೋಡ್,
ಕರ್ನಾಟಕ ಖಜಾನೆ ಕೋಡ್, ಲೋಕೋಪಯೋಗಿ ಇಲಾಖಾ ಅಕೌಂಟ್ಸ್ ಕೋಡ್ ಮತ್ತು ಸರ್ಕಾರದ ಆರ್ಥಿಕ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಾಮಗಾರಿಗಳು ನಿಗದಿತ ದಿನದೊಳಗೆ / ಪ್ರಸಕ್ತ ಆರ್ಥಿಕ ಸಾಲಿನ ಅಂತ್ಯದೊಳಗೆ ಮುಕ್ತಾಯಗೊಳಿಸುವುದು.
5. ಸದರಿ ಅನುದಾನದ ಹಣ ಬಳಕೆ ಪ್ರಮಾಣ ಪತ್ರ, ಓಚರ್ ವೆಚ್ಚ ತಃಖ್ತೆ, ಕಾಮಗಾರಿ ಮುಕ್ತಾಯದ ಪ್ರಮಾಣದ ಪತ್ರ, ಕಾಮಗಾರಿಯ ಮಾಸಿಕ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ತಃಖ್ತೆಯನ್ನು ಪ್ರತಿ ತಿಂಗಳು ದಿನಾಂಕ:- 10ರೊಳಗಾಗಿ ಈ ಕಛೇರಿಗೆ ಸಲ್ಲಿಸುವುದು.
6. ಯಾವುದೇ ಕಾಮಗಾರಿಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ತಾಂತ್ರಿಕ ಅನುಮೋದನೆಯೊಂದಿಗೆ ಸದರಿ ಮಂಡಳಿಯಿಂದ ಆಡಳಿತಾತ್ಮಕ ಮಂಜೂರಾತಿ ಇಲ್ಲದೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
ಕಾಮಗಾರಿಗಳನ್ನು ಅನುಮೋದಿತ ಕ್ರಿಯಾ ಯೋಜನೆ ಪ್ರಕಾರ ಹಾಗೂ ಸಂಬಂಧಪಟ್ಟ ಶಾಸಕರೊಂದಿಗೆ ಸಮಾಲೋಚಿಸಿ ಕಾರ್ಯನಿರ್ವಹಿಸುವುದು.
8. ಎರಡನೇ ಮತ್ತು ಅಂತಿಮ ಕಂತಿನ ಹಣವನ್ನುಬಿಡುಗಡೆ ಮಾಡಲು ತಮ್ಮಿಂದ ಮುಕ್ತಾಯ ವರದಿ, ಛಾಯ ಚಿತ್ರಗಳು, ಸ್ಥಳ ತನಿಖಾ ವರದಿಗಳು ಮತ್ತು ಈಗಾಗಲೇ ಬಿಡುಗಡೆ ಮಾಡಿರುವ ಹಣಕ್ಕೆ ಹಣ ಬಳಕೆ ಪ್ರಮಾಣ ಪತ್ರ (ಕೆ.ಎಫ್.ಸಿ 187 (ಸಿ) ರಲ್ಲಿ) ಬಂದ ನಂತರ ಮಂಡಳಿ ಅಧಿಕಾರಿಗಳು ಕಾಮಗಾರಿಗಳನ್ನು ಪರಿಶೀಲಿಸಿ ತೃಪ್ತಿಕರವಾಗಿದೆಯೆಂದು ಕಂಡುಬಂದ ಮೇಲೆ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.
9. ಸರ್ಕಾರದ ಆದೇಶ ಸಂಖ್ಯೆ: ಯೋಇ 100 ಪಿ.ಬಿ.ಪಿ. 2017 ಬೆಂಗಳೂರು ದಿನಾಂಕ:01-09-2017 ರ ಆದೇಶದಂತೆ ಎಲ್ಲಾ ಕಾಮಗಾರಿಗಳನ್ನು 3ನೆ ವ್ಯಕ್ತಿಯಿಂದ ತಪಾಸಣೆ ಮಾಡಿ ವರದಿ ಸಲ್ಲಿಸುವುದು. ಈಗ ಬಿಡುಗಡೆ ಮಾಡಿರುವ ಹಣಕ್ಕೆ ಕಾಮಗಾರಿಗಳು ಸಂಪೂರ್ಣ ಮುಗಿದಿವೆ ಎಂದ ಪ್ರಮಾಣೀಕರಿಸಿದ ನಂತರವೇ ಉಳಿದ ಶೇ.40 ರಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು. ಕೊನೆಯ ಶೇ.20 ರಷ್ಟು ಹಣವನ್ನು 3ನೆ ವ್ಯಕ್ತಿಯಿಂದ ಕಾಮಗಾರಿಗಳ ಪರಿಶೀಲನಾ ವರದಿ ಬಂದ ನಂತರವೇ ಬಿಡುಗಡೆ ಮಾಡಲಾಗುವುದು. 3ನೇ ವ್ಯಕ್ತಿ ತಪಾಸಣಾ ವರದಿ ಸಲ್ಲಿಸದಿದ್ದಲ್ಲಿ ಅಂತಿಮ ಕಂತಿನ ಅನುದಾನ ಬಿಡುಗಡೆ ಮಾಡುವುದಿಲ್ಲ.

ಈ ಮೇಲ್ಕಂಡ ಅಂಶಗಳನ್ನು ಚಾಚು ತಪ್ಪದೆ ಪಾಲಿಸಲು ಸೂಚಿಸಿದೆ.

(ಕಛೇರಿ ಟಿಪ್ಪಣಿ ಮಾನ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ.)

ತಮ್ಮ ವಿಶ್ವಾಸಿ,
21/12/19
ಉಪ ಹಣಕಾಸು ನಿಯಂತ್ರಣಾಧಿಕಾರಿಗಳು
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ,
ಚಿತ್ರದುರ್ಗ.

ಜಿಲ್ಲೆ: ಕೋಲಾರ

(₹ ಲಕ್ಷಗಳಲ್ಲಿ)

ಕ್ರ. ಸಂ.	ಕ್ಷೇತ್ರ	ಕಾಮಗಾರಿಗಳ ವಿವರ	ಮಂಡಳಿಯಿಂದ ನಿಗಧಿಪಡಿಸಿದ ಅಂದಾಜು ಮೊತ್ತ	ಅಂದಾಜು ಪಟ್ಟಿಯಲ್ಲಿರುವಂತೆ ಮಂಡಳಿಯಿಂದ ಅನುಮೋದನೆ ನೀಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಬಾಕಿ ಮೊತ್ತ
1	ಬಂಗಾರಪೇಟೆ	ಬಂಗಾರಪೇಟೆ ತಾ ಬೂದಿಕೋಟೆ ಹೋ. ಬೂದಿಕೋಟೆ ಗ್ರಾಪಂ. ಮಾರ್ಕೊಂಡಯ್ಯ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	50.00	50.00	20.00	30.0
2		ಬಂಗಾರಪೇಟೆ ತಾ ಕಾಮಸಮುದ್ರಂ ಹೋಬಳಿ ಕಾಮಸಮುದ್ರಂ ಗ್ರಾಪಂ ವಟ್ಟಿಗಲ್ಲು ಗ್ರಾಮದ ಹತ್ತಿರ ಕಾಲುವೆಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	10.00	10.00	4.00	6.0
3		ಬಂಗಾರಪೇಟೆ ತಾ ಬೂದಿಕೋಟೆ ಹೋ. ಆಲಂಬಾಡಿ ಜ್ಯೋತೇನಹಳ್ಳಿ ಗ್ರಾಪಂ ಕಾರಮನಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	20.00	20.00	8.00	12.0
4		ಬಂಗಾರಪೇಟೆ ತಾ ಕಸಬಾ ಹೋ. ಐನೋರಹೊಸಹಳ್ಳಿ ಗ್ರಾಪಂ ದೊಡ್ಡಂಕಂಡಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	20.00	20.00	8.00	12.0
		ಒಟ್ಟು	100.00	100.00	40.00	60.0

ಉಪ ಹಣಕಾಸು ನಿಯಂತ್ರಣಾಧಿಕಾರಿಗಳು
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

G:\MSCB 2020-21\2019-20 WORKS\6 BSDB-2019-20 P\OM-40%-2019-20 P\GENERAL-19-20 OM 40%\GEN-OM-19-20 40%-P.docx

OFFICE OF THE SECRETARY
BAYALUSEEME DEVELOPMENT BOARD
TAMATAKALLU ROAD
CHITRADURGA-577502
e-mail:bsdbsecretary@gmail.com
Phone No: 08194-231584/85/86

ಕಾರ್ಯದರ್ಶಿಗಳವರ ಕಾರ್ಯಾಲಯ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ತಮಟಕಲ್ಲು ರಸ್ತೆ, ಚಿತ್ರದುರ್ಗ-577502
e-mail:bsdbsecretary@gmail.com
ದೂರವಾಣಿ ಸಂ: 08194-231584/85/86

ಸಂಖ್ಯೆ: ಬಪ್ರಮಂ/ಚಿ/ಲೆಕ್ಕ/ಹ.ಬಿ/2019-20 ದಿನಾಂಕ:21.09.2020

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕೆಆರ್‌ಐಡಿಎಲ್,
ಬೆಂಗಳೂರು.

ಮಾನ್ಯರೆ,

ವಿಷಯ:- ಮುಕ್ತಾಯವಾಗಿರುವ ಕಾಮಗಾರಿಗೆ ಬಾಕಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.
ಉಲ್ಲೇಖ:-ತಮ್ಮ ಕಛೇರಿ ಪತ್ರ ಸಂ:ಕಾಪಾಅ/ಕೆಆರ್‌ಐಡಿಎಲ್/ಬಪ್ರಮಂ/1659/2020-21, ದಿನಾಂಕ:25.02.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖದಲ್ಲಿರುವಂತೆ ಈ ಕೆಳಕಂಡ ಕಾಮಗಾರಿಗೆ ಸಲ್ಲಿಸಿರುವ ಮುಕ್ತಾಯ ವರದಿ, ಸ್ಥಳ ತನಿಖಾ ವರದಿ, ಬಿಡುಗಡೆಯಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಛಾಯಾ ಚಿತ್ರಗಳ ಆಧಾರದ ಮೇಲೆ ನಿಮ್ಮ ಕೋರಿಕೆಯಂತೆ ಬಾಕಿ ಬಿಡುಗಡೆ ಮಾಡಬೇಕಾದ ಅನುದಾನವನ್ನು RTGS ಮುಖಾಂತರ ಈ ಕೆಳಕಂಡಂತೆ ಜಮೆ ಮಾಡಲಾಗಿದೆ.

ಕ್ರ. ಸಂ.	ಮಂಡಳಿಯ ಧನಾದೇಶ ಸಂಖ್ಯೆ ಮತ್ತು ದಿನಾಂಕ	ಅನುದಾನ ಜಮಾ ಮಾಡಲಾದ ತಮ್ಮ ಖಾತೆ ಸಂಖ್ಯೆ ಮತ್ತು ಜಮಾ ಮಾಡಿದ ದಿನಾಂಕ	ಮೊಬಲಗು (ರೂ. ಗಳಲ್ಲಿ)
1.	422238/19.09.2020	Corporation Bank, SC Road, Bengaluru 510101002832649	60,00,000

ಅನುದಾನವು ತಮ್ಮ ಖಾತೆಗೆ ಜಮಾ ಆಗಿರುವ ಬಗ್ಗೆ ಈ ಕಛೇರಿಗೆ ಮಾಹಿತಿ ನೀಡಲು ಹಾಗೂ ಬಿಡುಗಡೆ ಮಾಡಿರುವ ಅನುದಾನಕ್ಕೆ *ಹಣ ಬಳಕೆ ಪ್ರಮಾಣ ಪತ್ರವನ್ನು ತ್ವರಿತವಾಗಿ ಅಂದರೆ 15 ದಿನಗಳೊಳಗೆ ಸಲ್ಲಿಸಲು ಸೂಚಿಸಿದೆ.*

ತಮ್ಮ ವಿಶ್ವಾಸಿ,

(ಕಛೇರಿ ಟಿಪ್ಪಣಿ ಮಾನ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲಪಟ್ಟಿದ)

ಉಪ ಹಣಕಾಸು ನಿಯಂತ್ರಣಾಧಿಕಾರಿ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

ಜಿಲ್ಲೆ:ಕೋಲಾರ

(ಮೊತ್ತ ರೂಗಳಲ್ಲಿ)

ಕ್ರ. ಸಂ.	ತಾಲ್ಲೂಕು	ಕಾಮಗಾರಿ ವಿವರ	ಒಟ್ಟು ಅಂದಾಜು ಮೊತ್ತ	ಪೂರ್ಣಗೊಂಡ ಕಾಮಗಾರಿ ಮೊತ್ತ	ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಮೊತ್ತ	ಅಂತಿಮವಾಗಿ ಬಿಡುಗಡೆ ಮಾಡಿರುವ ಮೊತ್ತ
1	ಬಂಗಾರಪೇಟೆ	ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ ಹೋ. ಬೂದಿಕೋಟೆ ಗ್ರಾ.ಪಂ. ಮಾರ್ಕೊಂಡಯ್ಯ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	5000000	5000000	2000000	3000000
2		ಬಂಗಾರಪೇಟೆ ತಾಲ್ಲೂಕು ಕಾಮಸಮುದ್ರಂ ಹೋಬಳಿ ಕಾಮಸಮುದ್ರಂ ಗ್ರಾ.ಪಂ. ವಟ್ಟಿಗಲ್ಲು ಗ್ರಾಮದ ಹತ್ತಿರ ಕಾಲುವೆಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	1000000	1000000	400000	600000
3		ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ ಹೋ. ಆಲಂಬಾಡಿ ಜ್ಯೋತೇನಹಳ್ಳಿ ಗ್ರಾ.ಪಂ. ಕಾರಮನಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	2000000	2000000	800000	1200000
4		ಬಂಗಾರಪೇಟೆ ತಾಲ್ಲೂಕು ಕಸಬಾ ಹೋ. ಐನೋರಹೊಸಹಳ್ಳಿ ಗ್ರಾ.ಪಂ. ದೊಡ್ಡಂಕಂಡಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	2000000	2000000	800000	1200000
		ಒಟ್ಟು				6000000

ಉಪ ಹಣಕಾಸು ನಿಯಂತ್ರಣಾಧಿಕಾರಿಗಳು
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

ಅನುಬಂಧ - ೭೮ ಫೋಟೋ ಪ್ರತಿ

OFFICE OF THE SECRETARY
BAYALUSEEME DEVELOPMENT BOARD
TAMATAKALLU ROAD
CHITRADURGA-577502
e-mail:bsdbsecretary@gmail.com
Phone No: 08194-231584/85/86

ಕಾರ್ಯದರ್ಶಿಗಳವರ ಕಾರ್ಯಾಲಯ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ತಮಟಕಲ್ಲು ರಸ್ತೆ, ಚಿತ್ರದುರ್ಗ-577502
e-mail:bsdbsecretary@gmail.com
ದೂರವಾಣಿ ಸಂ: 08194-231584/85/86

ಸಂಖ್ಯೆ:ಬಪ್ರಮಂ/ಚಿ/ವಿಜಿಜಿ/ಕೋಜಿ/ವಿಘಯೋ/ತಾಂ-3/2021-22 ದಿನಾಂಕ:30.07.2021

ವಿಷಯ: 2021-22ನೇ ಸಾಲಿನಲ್ಲಿ ಮಂಡಳಿಯ ಕ್ರಿಯಾಯೋಜನೆಯಡಿ ಸೇರ್ಪಡೆಗೊಂಡು **ವಿಶೇಷ ಘಟಕ ಯೋಜನೆಯಡಿಯಲ್ಲಿ** ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 53 ಪಿಟಿಪಿ 2021 ದಿ:29.07.2021.
2) ಕಾರ್ಯನಿರ್ವಾಹಕ ಇಂಜನಿಯರ್, ಪಂರಾಇಂವಿ, ಕೋಲಾರ ಇವರ ಪತ್ರ ಸಂ:ಇಇ/ಪಂರಾಇಂವಿ/ಕೋ/ಸಇಂ-2/ಅಂಪ/2021-22/249 ದಿ:22.06.2021
3) ಸರ್ಕಾರದ ಆದೇಶ ಸಂಖ್ಯೆ: ಯೋಇ 100 ಪಿಟಿಪಿ 2017 ಬೆಂಗಳೂರು, ದಿನಾಂಕ: 08.03.2019.

****

ಪ್ರಸ್ತಾವನೆ:

ಉಲ್ಲೇಖಿತ (1)ರಲ್ಲಿರುವಂತೆ 2021-22ನೇ ಸಾಲಿನಲ್ಲಿ ಕಾಮಗಾರಿಯು ಮಂಡಳಿಯ ಕ್ರಿಯಾ ಯೋಜನೆಯಡಿಯಲ್ಲಿನ **ವಿಶೇಷ ಘಟಕ ಯೋಜನೆಯಡಿಯಲ್ಲಿ** ಒಳಗೊಂಡಿರುತ್ತವೆ. ಉಲ್ಲೇಖಿತ (2)ರಲ್ಲಿರುವಂತೆ ಕಾರ್ಯನಿರ್ವಾಹಕ ಇಂಜನಿಯರ್, ಪಂರಾಇಂವಿ, ಕೋಲಾರ ರವರು ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ತಾಂತ್ರಿಕ ಪರಿಶೀಲನೆಯೊಂದಿಗೆ ಸಲ್ಲಿಸಿದ್ದು, ಇವುಗಳಲ್ಲಿ ಅಕ್ಷಾಂಶ-ರೇಖಾಂಶ ವಿವರಗಳನ್ನೊಳಗೊಂಡ ಕಾಮಗಾರಿಯ ಛಾಯಾಚಿತ್ರಗಳನ್ನು ಲಗತ್ತಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಕೋರಿ ದ್ವಿಪ್ರತಿಯಲ್ಲಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳು **ಪ.ಜಾತಿ ಜನಾಂಗದವರಿಗೆ** ಉಪಯೋಗವಾಗುತ್ತದೆ ಮತ್ತು ಈ ಕಾಮಗಾರಿಯನ್ನು ಬೇರೆ ಯಾವುದೇ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವುದಿಲ್ಲವೆಂದು ದೃಢೀಕರಿಸಿ ವರದಿ ಸಲ್ಲಿಸಿರುತ್ತಾರೆ. 2021-22ನೇ ಸಾಲಿನ ಮಂಡಳಿಯ ಕಾಮಗಾರಿಯ ಕ್ರಿಯಾ ಯೋಜನೆಯಲ್ಲಿ ಸೇರಿರುತ್ತದೆ. ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು ಅವಶ್ಯವಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ:ಬಪ್ರಮಂ/ಕೋಜಿ/ಬಂ.ಕ್ಷೇ/ತಾಂ-3/ವಿಘಯೋ/2021-22 ದಿನಾಂಕ:30.07.2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕೋಲಾರ ಜಿಲ್ಲೆ, ಬಂಗಾರುಪೇಟೆ ವಿಧಾನಸಭಾ ಕ್ಷೇತ್ರದ ಕೆಳಕಂಡ ಕಾಮಗಾರಿಗಳಿಗೆ ಮುಂದೆ ತೋರಿಸಿರುವ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಉಲ್ಲೇಖ (3)ರಲ್ಲಿರುವಂತೆ ಸರ್ಕಾರದ ಆದೇಶದನ್ವಯ ಅನುಮೋದಿಸಿದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವಾಗ ಶೇ.75 ರಷ್ಟು ಅನುದಾನವನ್ನು ಹಾಗೂ ಬಾಕಿ ಉಳಿದ ಶೇ.25 ರಷ್ಟು ಅನುದಾನವನ್ನು ಸಂಪೂರ್ಣ ಮುಗಿಸಿ ಮೂರನೇ ವ್ಯಕ್ತಿಯಿಂದ ಪರಿಶೀಲನಾ ವರದಿ ಬಂದ ನಂತರ ಬಿಡುಗಡೆ ಮಾಡಬೇಕಾಗಿರುತ್ತದೆ. ಪ್ರಯುಕ್ತ ಸದರಿ ಕಾಮಗಾರಿಗಳಿಗೆ ಶೇ.75 ರಷ್ಟು ಅನುದಾನವನ್ನು ಇವರಿಗೆ **ವಿಶೇಷ ಘಟಕ ಯೋಜನೆಯಡಿ** ಕಾರ್ಯನಿರ್ವಾಹಕ ಇಂಜನಿಯರ್, ಪಂರಾಇಂವಿ, ಕೋಲಾರ ಬಿಡುಗಡೆ ಮಾಡಿದೆ. ಹಾಗೂ ಇವರು ಇಲಾಖಾ ನಿಯಮಗಳನ್ನು ಅನುಸರಿಸಿ ಈ ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

(₹ ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಗಳ ವಿವರ	ಒಟ್ಟು ಅಂದಾಜು ಮೊತ್ತ	ಮಂಡಳಿಯಿಂದ ಅನುಮೋದನೆ ನೀಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಬಾಕಿ ಮೊತ್ತ
1	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಪಾಕರಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾರೆದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ 15699885	5.00	5.00	3.75	1.25
2	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹುದುಕುಳ ಗ್ರಾಮದ ಪರಿಶಿಷ್ಟ ಜಾತಿ ಜನಾರೆದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ 25099886	5.00	5.00	3.75	1.25
3	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹಂಚಾಳ ಗ್ರಾಮದ ಪರಿಶಿಷ್ಟ ಜಾತಿ ಜನಾರೆದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ 25099887	5.00	5.00	3.75	1.25
4	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಅಕ್ಷಂತಲ ಗೊಲ್ಲಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ	5.00	5.00	3.75	1.25

23. ಸ

ನಿಬಂಧನೆಗಳು

1. ಕರ್ನಾಟಕ ಪಾರದರ್ಶಕ ಕಾಯಿದೆ (ಕೆಟಿಪಿಪಿ ಆಕ್ಟ್) 1999 ಮತ್ತು ನಿಯಮಾವಳಿಗಳು 2000 ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಸುತ್ತೋಲೇ ಸಂಖ್ಯೆ:ಪಿಡಬ್ಲ್ಯೂಡಿ 513/ಎಫ್‌ಸಿ/III/2001, ದಿನಾಂಕ:29.10.2001 ರನ್ವಯ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು ಹಾಗೂ ಸೂಚನೆಗಳನ್ನು ಪಾಲಿಸತಕ್ಕದ್ದು.
2. ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಮಾತ್ರ ನೀಡಲಾಗಿದ್ದು, ಅಂದಾಜು ಪಟ್ಟಿಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯತಕ್ಕದ್ದು.
3. ಕಾಮಗಾರಿಯ ಗುಣಮಟ್ಟವನ್ನು ಕಾಪಾಡಿಕೊಳ್ಳತಕ್ಕದ್ದು. ಕಾಮಗಾರಿಯನ್ನು ಆದಷ್ಟು ಬೇಗನೇ ಪೂರ್ಣಗೊಳಿಸತಕ್ಕದ್ದು.
4. ಕಾಮಗಾರಿಯನ್ನು ಅನುಷ್ಠಾನಗೊಳಿಸುವಾಗ ವಿಳಂಬವಾದಲ್ಲಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು
5. ಕಾಮಗಾರಿಯ ಗುಣಮಟ್ಟದಲ್ಲಿ ಕೊರತೆ ಇದ್ದಲ್ಲಿ ಅನುಷ್ಠಾನಾಧಿಕಾರಿಗಳನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.
6. ನೀವು ಅಂದಾಜುಪಟ್ಟಿ ಸಲ್ಲಿಸುವಾಗ ನೀಡಿದ ವರದಿ, ಸಾರ್ವಜನಿಕ ಉಪಯುಕ್ತತೆ, ಅಗತ್ಯತೆ, ಸಾಧ್ಯತೆಯನ್ನಾದರಿಸಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ದೂರುಗಳು ಬಂದ ಸಂದರ್ಭದಲ್ಲಿ ತಪಾಸಣಾ ಮಾಡಿದಾಗ ಸುಳ್ಳು ಮಾಹಿತಿ ಇತ್ಯಾದಿ ಕಂಡುಬಂದಲ್ಲಿ ಕಾಮಗಾರಿಯನ್ನು ಅದೇ ಹಂತದಲ್ಲಿ ನಿಲ್ಲಿಸಿ ಯಾವುದೇ ಅನುದಾನ ನೀಡಲಾಗುವುದಿಲ್ಲ.
7. ಸದರಿ ಕಾಮಗಾರಿಯು ಯಾವುದೇ ವೈಯಕ್ತಿಕ ಕಾಮಗಾರಿ ಆಗಿರಕೂಡದು, ಅದು ಸಾಮೂಹಿಕ ಅಥವಾ ಸಾರ್ವಜನಿಕ ಉಪಯುಕ್ತ ಕಾಮಗಾರಿ ಆಗಿರತಕ್ಕದ್ದು.
8. ಸದರಿ ಕಾಮಗಾರಿಯನ್ನು ಗಾಂಧೀಸಾಕ್ಷಿ ಕಾಯಕ (WORKSOFT) ತಂತ್ರಾಂಶದಲ್ಲಿ ಅಳವಡಿಸಿ, ಅಂತಿಮ ಕಂತಿನ ಅನುದಾನ ಬಿಡುಗಡೆಗಾಗಿ ಸಲ್ಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
9. ಸಮುದಾಯ ಭವನ, ಮಹಿಳಾ ಮಂಡಳಿಗಳ ಇತ್ಯಾದಿ ಕಟ್ಟಡಗಳನ್ನು ಸರ್ಕಾರಿ ಜಮೀನಿನಲ್ಲಿ ಕಟ್ಟಬೇಕು, ಒಂದು ವೇಳೆ ಖಾಸಗಿ ಜಮೀನು ಆಗಿದ್ದರೆ, ಅಂತಹ ಜಮೀನುಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ (Local Bodies) ಹೆಸರಿಗೆ ವರ್ಗಾವಣೆ ಮಾಡಿ ಕಟ್ಟಬೇಕು. ಸ್ಥಳೀಯ ಸಂಸ್ಥೆಗಳು, ಲೋಕೋಪಯೋಗಿ ಇಲಾಖೆ ನಿಗಧಿ ಪಡಿಸಿದ ದರಗಳಲ್ಲಿ ಅಂತಹ ಕಟ್ಟಡಗಳನ್ನು ನಿರ್ವಹಣೆ ಮಾಡಬೇಕು.
10. ಅನುಷ್ಠಾನಾಧಿಕಾರಿಗಳಿಗೆ ವಹಿಸಲಾದ ಕಾಮಗಾರಿಗಳನ್ನು ಇಲಾಖಾ ನಿಯಮಾನುಸಾರ ಕಾಮಗಾರಿಯನ್ನು ತಪಾಸಣೆ ಮಾಡಿ ಕಾಮಗಾರಿ ತೃಪ್ತಿಕರವಾಗಿ ಪೂರ್ಣಗೊಂಡಿರುವ ಬಗ್ಗೆ ತಪಾಸಣಾ ವರದಿಯನ್ನು ಸಲ್ಲಿಸತಕ್ಕದ್ದು.
11. ಕಾಮಗಾರಿಯ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು.
12. ಸಣ್ಣ ನೀರಾವರಿ ಕೆರೆಗಳ ಹೂಳೆತ್ತುವ ಕಾಮಗಾರಿ ಇದ್ದಲ್ಲಿ ಈ ಕಛೇರಿಯ ಸುತ್ತೋಲೆ ದಿನಾಂಕ:15-10-97 ರ ಪ್ರಕಾರ ತಪ್ಪದೆ ಕಾರ್ಯಗತಗೊಳಿಸಲು ಸೂಚಿಸಿದೆ.
13. ಶಾಶ್ವತ ಚಿತ್ರದೊಂದಿಗೆ ಹೊಂದಿಕೆಯಾಗುವಂತೆ ಕಾಮಗಾರಿ ಪ್ರಾರಂಭಕ್ಕೆ ಮುಂಚಿನ, ಕಾಮಗಾರಿಯು ಪ್ರಗತಿಯಲ್ಲಿರುವ ಸಮಯದಲ್ಲಿ ಮತ್ತು ಪೂರ್ಣಗೊಂಡ ನಂತರದ ಒಂದೊಂದು ಛಾಯಾ ಚಿತ್ರಗಳನ್ನು ಸಲ್ಲಿಸುವುದು.
14. ಕಾಮಗಾರಿ ನಡೆಯುವ ಸ್ಥಳದಲ್ಲಿ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
15. ಬಿಡುಗಡೆ ಮಾಡಿರುವ ಅನುದಾನವನ್ನು ಎರಡು ತಿಂಗಳೊಳಗೆ ವೆಚ್ಚ ಭರಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಕೆಎಫ್‌ಸಿ 187, ಪ್ರಪತ್ರ 'ಸಿ' ರಲ್ಲಿ ಸಲ್ಲಿಸುವುದು.
16. ಅನುಮೋದಿತ ಕಾಮಗಾರಿಗಳನ್ನು ಸರ್ಕಾರದ ಇತರೆ ಯೋಜನೆಗಳಡಿಯಲ್ಲಿ ಸಂಘ, ಸಂಸ್ಥೆಗಳ ವತಿಯಿಂದ ಕೈಗೊಂಡಿರುವುದಿಲ್ಲ ಹಾಗೂ ಯಾವುದೇ ವೈಯಕ್ತಿಕ ಕಾಮಗಾರಿಗಳನ್ನು ಕೈಗೊಳ್ಳುವುದಿಲ್ಲ ಎಂಬುದನ್ನು ದೃಢೀಕರಿಸಿಕೊಳ್ಳುವುದು.
17. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಹೆಸರಿಗೆ ಪ್ರತ್ಯೇಕ ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಸೂಚಿಸಲಾಗಿದೆ.
18. ಜಲಾನಯನ ಅಭಿವೃದ್ಧಿ ಪ್ರದೇಶಗಳಲ್ಲಿ ಮಳೆ ಆಧಾರಿತ ಕೃಷಿ ಪದ್ಧತಿಗಳಲ್ಲಿ ಮತ್ತು ಅರಣ್ಯಾಭಿವೃದ್ಧಿಯಲ್ಲಿ ಭೂಸಾರ ಮತ್ತು ಜಲ ಸಂರಕ್ಷಣಾ ಕ್ರಮಗಳನ್ನು ಅಳವಡಿಸುವಾಗ ಚೆಕ್‌ಡ್ಯಾಂ, ಗೋಕಟ್ಟೆ, ತಡೆಗೋಡೆ ನಿರ್ಮಾಣ ಮಾಡಿದ್ದಲ್ಲಿ ಸದರಿ ಕಾಮಗಾರಿಗಳ 2 ಬದಿಗಳಲ್ಲಿ ಕನಿಷ್ಠ 5-10 ಹೊಂಗೆ ಗಿಡಗಳನ್ನು ನೆಡುವುದು ಕಡ್ಡಾಯ ಹಾಗೂ ಅಂತಿಮ ಅನುದಾನಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸವಾಗ ಸದರಿ ಗಿಡಗಳ ಹಾಗೂ ಕಾಮಗಾರಿಯ ಮುಕ್ತಾಯದ ಚಿತ್ರಗಳನ್ನೊಳಗೊಂಡ ಛಾಯಾಚಿತ್ರವನ್ನು ಅಂತಿಮ ಅನುದಾನದ ಬೇಡಿಕೆಯ ಸಮಯದಲ್ಲಿ ಒದಗಿಸುವುದು ಕಡ್ಡಾಯ.
19. ಸಮುದಾಯ ಭವನಗಳ ಕಾಮಗಾರಿಗಳನ್ನು ತೆಗೆದುಕೊಂಡಲ್ಲಿ ಸಮುದಾಯ ಭವನದ ಜಾಗ ಇದ್ದಲ್ಲಿ 2 ಕಡೆಗಳಲ್ಲಿ 2 ಬೇವು, 2 ಹೊಂಗೆ ಮರಗಳನ್ನು ನೆಡುವುದು ಕಡ್ಡಾಯ.
20. ರಸ್ತೆ ಕಾಮಗಾರಿಗಳಾಗಿದ್ದಲ್ಲಿ ಕನಿಷ್ಠ 100 ಅಡಿಗೆ ಒಂದರಂತೆ ಬೇವು, ಮಾವು, ಹುಣಸೆ, ಹೊಂಗೆ, ನೇರಳೆ, ಹಲಸಿನ ಗಿಡಗಳನ್ನು ಆಯಾ ಕ್ಷೇತ್ರದ ಹವಾಗುಣದಂತೆ ನೆಡುವುದು ಕಡ್ಡಾಯ. ಸದರಿ ಅಂಶವನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿ ಅಂದಾಜು ಪಟ್ಟಿ ತಯಾರಿಸಲು ಹಾಗೂ ಅಂತಿಮ ಅನುದಾನಕ್ಕೆ ಸದರಿ ಗಿಡಗಳ ಹಾಗೂ ಕಾಮಗಾರಿಯ ಅಂತಿಮ ಚಿತ್ರಗಳನ್ನೊಳಗೊಂಡ ಛಾಯಾಚಿತ್ರವನ್ನು ಅಂತಿಮ ಅನುದಾನದ ಬೇಡಿಕೆಯ ಸಮಯದಲ್ಲಿ ಒದಗಿಸುವುದು ಕಡ್ಡಾಯ.
21. ಅಂಗನವಾಡಿ ಕೊಠಡಿ ಮತ್ತು ಶಾಲಾ ಕೊಠಡಿಗಳ ಕಾಮಗಾರಿಗಳನ್ನು ತೆಗೆದುಕೊಂಡಲ್ಲಿ 2 ಬೇವು, 2 ಹೊಂಗೆ ಮರಗಳನ್ನು ನೆಡುವುದು ಕಡ್ಡಾಯ.
22. ಸದರಿ ಗಿಡಗಳನ್ನು ನೆಟ್ಟಾಗ ಅದರ ಸಂರಕ್ಷಣೆಯನ್ನು ಆಯಾ ವಲಯವಾರು, ಅಂದರೆ ಸಂಬಂಧಿಸಿದ ಗ್ರಾಮ ಪಂಚಾಯತ್ ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಾಲಾ ಮುಖ್ಯೋಪಾಧ್ಯಾಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಇವರುಗಳು ಕ್ರಮ ವಹಿಸುವುದು ಕಡ್ಡಾಯ.

23. ಸಮುದಾಯ ಭವನ, ಅಂಗನವಾಡಿ ಕೇಂದ್ರ ಮತ್ತು ಶಾಲೆಗಳಲ್ಲಿ ಊಟ ಉಪಚಾರ ಮಾಡುವ ಜಾಗದಲ್ಲಿ, ಪಾತ್ರೆಗಳನ್ನು ತೊಳೆಯುವ ಜಾಗದಲ್ಲಿ ಅಂತಹ ನೀರನ್ನು ಪೋಲಾಗಿ ಹರಿಯಲು ಬಿಡದೆ ಚಿಕ್ಕದಾದ ಗುಂಡಿಯನ್ನು ನಿರ್ಮಿಸಿ ಅದರ ಮೇಲೆ ಗಟ್ಟಿಯಾದ ಕಲ್ಲು ಚಪ್ಪಡಿಯನ್ನು ಅಳವಡಿಸುವುದು ಕಡ್ಡಾಯ. ಇದರಿಂದ ನೀರಿನ ಇಂಗುವಿಕೆಯಿಂದ ಸುತ್ತಮುತ್ತಲ ಪರಿಸರಕ್ಕೆ ಸಹಕಾರಿಯಾಗುತ್ತದೆ (ಅಂದಾಜು ಪಟ್ಟಿಯಲ್ಲಿ ಇತರೆ ವೆಚ್ಚದಲ್ಲಿ ಸೇರಿಸುವುದು)

24. ಸಿ.ಸಿ. ಚರಂಡಿಗಳನ್ನು ನಿರ್ಮಿಸುವಾಗ ಚರಂಡಿಯ ಮಧ್ಯಭಾಗದಲ್ಲಿ ಕನಿಷ್ಠ 100 ಅಡಿಗೊಂದು ಚಿಕ್ಕದಾದ ಪಿಟ್‌ನ್ನು ಅಥವಾ ಹೋಲನ್ನು ನಿರ್ಮಿಸುವುದು ಕಡ್ಡಾಯ. ಇದರಿಂದ ಮಳೆಯ ಅಥವಾ ಇತರೆ ನೀರು ಭೂಮಿಯಲ್ಲಿ ಇಂಗಿ ನೀರಿನ ತೇವಾಂಶವನ್ನು ಅಭಿವೃದ್ಧಿಪಡಿಸಲು ಸುತ್ತಮುತ್ತಲಿನ ಪರಿಸರಕ್ಕೆ ಸಹಕಾರಿಯಾಗುತ್ತದೆ (ಅಂದಾಜು ಪಟ್ಟಿಯಲ್ಲಿ ಇತರೆ ವೆಚ್ಚದಲ್ಲಿ ಸೇರಿಸುವುದು).

25. ರಸ್ತೆ ನಿರ್ಮಾಣ, ಸಿ.ಸಿ. ಚರಂಡಿ ನಿರ್ಮಾಣ ಆಗುವಂತಹ ಕಾಮಗಾರಿಗಳ ಅಕ್ಕಪಕ್ಕದಲ್ಲಿರುವ ಮನೆಗಳಲ್ಲಿನ ದಿನನಿತ್ಯ ಉಪಯೋಗಿಸುವ ನೀರನ್ನು ಅಂದರೆ, ಸ್ನಾನದ ನೀರು, ಪಾತ್ರೆ ಪಗಡೆಗಳನ್ನು ತೊಳೆಯುವ ನೀರು ಮತ್ತು ಬಟ್ಟೆ ತೊಳೆಯುವ ನೀರನ್ನು ಪೋಲಾಗಿ ಹರಿಯಲು ಬಿಡದೆ ಸಾಧ್ಯವಾದರೆ ಅಲ್ಲಿ ಚಿಕ್ಕದೊಂದು ಗುಂಡಿಯನ್ನು ನಿರ್ಮಿಸಿ ಅದರ ಮೇಲೆ ಗಟ್ಟಿಯಾದ ಕಲ್ಲು ಚಪ್ಪಡಿಯನ್ನು ಇಡಿಸಿ ಆ ನೀರನ್ನು ಗುಂಡಿಗೆ ಹೋಗುವಂತೆ ಮಾಡಿದಲ್ಲಿ ಒಳ್ಳೆಯ ತೇವಾಂಶವನ್ನು ಸೃಷ್ಠಿಸಿ ಭೂಮಿಯನ್ನು ತಂಪಾಗಿಸಲು ಹಾಗೂ ಹವಾಮಾನ ತಂಪಾಗಿಸಲು ಸಹಕಾರಿಯಾಗುತ್ತದೆ (ಅಂದಾಜು ಪಟ್ಟಿಯಲ್ಲಿ ಇತರೆ ವೆಚ್ಚದಲ್ಲಿ ಸೇರಿಸುವುದು)

ಕಾರ್ಯದರ್ಶಿ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

ಪ್ರತಿಯನ್ನು:-

1. ಉಪಹಣಕಾಸು ನಿಯಂತ್ರಣಾಧಿಕಾರಿಗಳು, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ಇವರಿಗೆ ಮುಂದಿನ ಕ್ರಮಕ್ಕೆ.
2. ಕಾರ್ಯನಿರ್ವಾಹಕ ಇಂಜಿನಿಯರ್, ಪಂರಾಇಂವಿ, ಕೋಲಾರ ಇವರಿಗೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಪಂರಾಇಂವಿ ಉಪ ವಿಭಾಗ, ಬಂಗಾರುಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ / ಕಡತಕ್ಕೆ.

OFFICE OF THE SECRETARY
BAYALUSEEME DEVELOPMENT BOARD
TAMATAKALLU ROAD
CHITRADURGA-577502
e-mail:bsdbsecretary@gmail.com
Phone No: 08194-231584/85/86

ಕಾರ್ಯದರ್ಶಿಗಳವರ ಕಾರ್ಯಾಲಯ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ತಮಟಕಲ್ಲುರಸ್ತೆ, ಚಿತ್ರದುರ್ಗ-577502
e-mail:bsdbsecretary@gmail.com
ದೂರವಾಣಿ ಸಂ: 08194-231584/85/86

ಸಂಖ್ಯೆ: ಬಪ್ರಮಂ/ಚಿ/ಲೆಕ್ಕ/ಹ.ಬಿ/2021-22 ದಿನಾಂಕ:31.07.2021

ಇವರಿಗೆ,

ಕಾರ್ಯಪಾಲಕಅಭಿಯಂತರರು,
ಪಂಚಾಯತ್‌ರಾಜ್‌ಇಂಜಿನಿಯರಿಂಗ್ ವಿಭಾಗ,
ಕೋಲಾರ.

ಮಾನ್ಯರೆ,

ವಿಷಯ:- ಅನುದಾನ ಬಿಡುಗಡೆ ಮಾಡುವ ಬಗ್ಗೆ
ಉಲ್ಲೇಖ:-ಮಂಡಳಿಯ ನಡವಳಿ ಪತ್ರ ದಿನಾಂಕ:30.07.2021

****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಾನುಸಾರ ನೀಡಲಾಗಿರುವ ಆಡಳಿತಾತ್ಮಕ ಮಂಜೂರಾತಿಗನುಸಾರವಾಗಿಅನುದಾನವನ್ನುRTGS ಮುಖಾಂತರಈ ಕೆಳಕಂಡಂತೆ ಜಮೆ ಮಾಡಲಾಗಿದೆ.

ಕ್ರ. ಸಂ.	ಮಂಡಳಿಯ ಧನಾದೇಶ ಸಂಖ್ಯೆ ಮತ್ತು ದಿನಾಂಕ	ಅನುದಾನಜಮಾ ಮಾಡಲಾದತಮ್ಮ ಖಾತೆ ಸಂಖ್ಯೆ ಮತ್ತುಜಮಾ ಮಾಡಿದ ದಿನಾಂಕ	ಮೊಬಲಗು (ರೂ. ಗಳಲ್ಲಿ)
1.	000039/31.07.2021	KOTAK MAHINDRA BANK, DODDAPET, KOLAR 182010088305	1500000

ಸದರಿಅನುದಾನ ಸಂದಾಯವಾದ ಬಗ್ಗೆ ಪಾವತಿ ಪತ್ರ ಸಲ್ಲಿಸಲು ಸೂಚಿಸುತ್ತಾ ಆಡಳಿತಾತ್ಮಕ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.

<u>ಬಿಡುಗಡೆಗೊಳಿಸಿದ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಗಳನ್ನು ನಿರ್ವಹಿಸಬಹುದಾಗಿದೆ.</u>

1. ಅನುದಾನವನ್ನುಯಾವುದೇಕಾರಣಕ್ಕೂಅನುಮೋದಿತ ಕಾಮಗಾರಿಗಳನ್ನು ಹೊರತುಪಡಿಸಿ ಬೇರೆ ಕಾಮಗಾರಿಗಳಿಗೆ ಉಪಯೋಗಿಸಬಾರದು.
2. ಅನುದಾನವನ್ನು ಪ್ರತ್ಯೇಕ ಬ್ಯಾಂಕ್‌ಖಾತೆಯಲ್ಲಿಡುವುದು ಹಾಗೂ ಪ್ರತ್ಯೇಕ ನಗದು ಪುಸ್ತಕದಲ್ಲಿ ವ್ಯವಹರಿಸುವುದು.
3. ಕಾರ್ಯಕ್ರಮದಅನುಷ್ಠಾನದಲ್ಲಿ ಹಣ ವೆಚ್ಚ ಮಾಡುವ ಮುನ್ನಕರ್ನಾಟಕಆರ್ಥಿಕ ಸಂಹಿತೆಕೋಡ್, ಕರ್ನಾಟಕಖಜಾನೆಕೋಡ್, ಲೋಕೋಪಯೋಗಿ ಇಲಾಖಾ ಅಕೌಂಟ್ಸ್‌ಕೋಡ್ ಮತ್ತು ಸರ್ಕಾರಆರ್ಥಿಕ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಾಮಗಾರಿಗಳು ನಿಗಧಿತ ದಿನದೊಳಗೆ/ ಪ್ರಸಕ್ತಆರ್ಥಿಕ ಸಾಲಿನ ಅಂತ್ಯದೊಳಗೆ ಮುಕ್ತಾಯಗೊಳಿಸುವುದು.
5. ಸದರಿಅನುದಾನ ಹಣ ಬಳಕೆ ಪ್ರಮಾಣ ಪತ್ರ, ಓಚರ್ ವೆಚ್ಚ ತಃಖ್ತೆ, ಕಾಮಗಾರಿ ಮುಕ್ತಾಯದ ಪ್ರಮಾಣದ ಪತ್ರ, ಕಾಮಗಾರಿಯ ಮಾಸಿಕ ಆರ್ಥಿಕ ಮತ್ತು ಭೌತಿಕ ಪ್ರಗತಿಯತಃಖ್ತೆಯನ್ನು ಪ್ರತಿ ತಿಂಗಳು ದಿನಾಂಕ: 10ನೇ ತಾರೀಖಿನೊಳಗೆ ಈ ಕಛೇರಿಗೆ ಸಲ್ಲಿಸುವುದು.
6. ಯಾವುದೇ ಕಾಮಗಾರಿಗಳನ್ನು ಮೇಲಾಧಿಕಾರಿಗಳಿಂದ ತಾಂತ್ರಿಕಅನುಮೋದನೆಯೊಂದಿಗೆ ಸದರಿ ಮಂಡಳಿಯಿಂದ ಆಡಳಿತಾತ್ಮಕ ಮಂಜೂರಾತಿಇಲ್ಲದ ಕಾಮಗಾರಿಗಳನ್ನು ಕೈಗೊಳ್ಳಬಾರದು.
7. ಕಾಮಗಾರಿಗಳನ್ನು ಅನುಮೋದಿತಕ್ರಿಯಾಯೋಜನೆ ಪ್ರಕಾರ ಹಾಗೂ ಸಂಬಂಧಪಟ್ಟ ಶಾಸಕರೊಂದಿಗೆ ಸಮಾಲೋಚಿಸಿ ಕಾರ್ಯನಿರ್ವಹಿಸುವುದು.
8. ಎರಡನೇ ಮತ್ತುಅಂತಿಮಕಂತಿನ ಹಣವನ್ನು ಬಿಡುಗಡೆ ಮಾಡಲುತಮ್ಮಿಂದ ಮುಕ್ತಾಯ ವರದಿ, ಛಾಯಾ ಚಿತ್ರಗಳು, ಸ್ಥಳ ತನಿಖಾ ವರದಿಗಳು ಮತ್ತು ಈಗಾಗಲೇ ಬಿಡುಗಡೆ ಮಾಡಿರುವ ಹಣಕ್ಕೆ ಹಣ ಬಳಕೆ ಪ್ರಮಾಣ ಪತ್ರ (ಕೆ.ಎಫ್.ಸಿ.187 (ಸಿ) ರಲ್ಲಿ) ಬಂದ ನಂತರ ಮಂಡಳಿ ಅಧಿಕಾರಿಗಳು ಕಾಮಗಾರಿಗಳನ್ನು ಪರಿಶೀಲಿಸಿ ತೃಪ್ತಿಕರವಾಗಿದೆಯೆಂದುಕಂಡುಬಂದ ಮೇಲೆ ಬಾಕಿ ಅನುದಾನ ಬಿಡುಗಡೆ ಮಾಡಲುಕ್ರಮ ವಹಿಸಲಾಗುವುದು.
9. ಸರ್ಕಾರದಆದೇಶ ಸಂಖ್ಯೆ: ಪಿಡಿಎಸ್ 13 ಪಿಆರ್‌ಪಿ 2019, ಬೆಂಗಳೂರು ದಿ:21.12.2019 ರಆದೇಶದಂತೆಎಲ್ಲಾ ಕಾಮಗಾರಿಗಳನ್ನು 3ನೇ ವ್ಯಕ್ತಿಯಿಂದತಪಾಸಣೆ ಮಾಡಿ ವರದಿ ಸಲ್ಲಿಸುವುದು. ಈಗ ಬಿಡುಗಡೆ ಮಾಡಿರುವ ಹಣಕ್ಕೆಕಾಮಗಾರಿಯು ಸಂಪೂರ್ಣ ಮುಗಿದಿವೆ ಎಂದು ಪ್ರಮಾಣೀಕರಿಸಿದ ನಂತರವೇ ಉಳಿದ ಶೇ.40 ರಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು. ಕೊನೆಯ ಶೇ.20 ರಷ್ಟು ಹಣವನ್ನು 3ನೇ ವ್ಯಕ್ತಿಯಿಂದಕಾಮಗಾರಿಯ ಪರಿಶೀಲನಾ ವರದಿ ಬಂದ ನಂತರವೇ ಬಿಡುಗಡೆ ಮಾಡಲಾಗುವುದು. 3ನೇ ವ್ಯಕ್ತಿತಪಾಸಣಾ ವರದಿ ಸಲ್ಲಿಸದಿದ್ದಲ್ಲಿಅಂತಿಮಕಂತಿನಅನುದಾನ ಬಿಡುಗಡೆ ಮಾಡುವುದಿಲ್ಲ.

ತಮ್ಮ ವಿಶ್ವಾಸಿ,

(ಕಛೇರಿಟಿಪ್ಪಣಿ ಮಾನ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲಪಟ್ಟಿದೆ)

ಉಪ ಹಣಕಾಸು ನಿಯಂತ್ರಣಾಧಿಕಾರಿ,
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ,
ಚಿತ್ರದುರ್ಗ.

ವಿಶೇಷ ಘಟಕ ಯೋಜನೆ-2021-22

ಜಿಲ್ಲೆ: ಕೋಲಾರ

(₹ ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಗಳ ವಿವರ	ಒಟ್ಟು ಅಂದಾಜು ಮೊತ್ತ	ಮಂಡಳಿಯಿಂದ ಅನುಮೋದನೆ ನೀಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಬಾಕಿ ಮೊತ್ತ
1	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಪಾಕರಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	5.00	5.00	3.75	1.25
2	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹುದುಕುಳ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	5.00	5.00	3.75	1.25
3	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹಂಚಾಳ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	5.00	5.00	3.75	1.25
4	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಅಕ್ಕಂತಲ ಗೊಲ್ಲಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	5.00	5.00	3.75	1.25
	ಒಟ್ಟು	20.00	20.00	15.00	5.00

ಉಪ ಹಣಕಾಸು ನಿಯಂತ್ರಣಾಧಿಕಾರಿ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

OFFICE OF THE SECRETARY
BAYALUSEEME DEVELOPMENT BOARD
TAMATAKALLU ROAD
CHITRADURGA-577502
e-mail:bsdbsecretary@gmail.com
Phone No: 08194-231584/85/86

ಕಾರ್ಯದರ್ಶಿಗಳವರ ಕಾರ್ಯಾಲಯ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ತಮಟಕಲ್ಲುರಸ್ತೆ, ಚಿತ್ರದುರ್ಗ-577502
e-mail:bsdbsecretary@gmail.com
ದೂರವಾಣಿ ಸಂ: 08194-231584/85/86

ಸಂಖ್ಯೆ: ಬಪ್ರಮಂ/ಚಿ/ಲೆಕ್ಕ/ಹ.ಬಿ/2019-20

ದಿನಾಂಕ:24.11.2021

ಇವರಿಗೆ,

ಕಾರ್ಯಪಾಲಕಅಭಿಯಂತರರು,
ಪಂಚಾಯತ್‌ರಾಜ್‌ಇಂಜಿನಿಯರಿಂಗ್ ವಿಭಾಗ,
ಕೋಲಾರ.

ಮಾನ್ಯರೆ,

ವಿಷಯ:-ಮುಕ್ತಾಯವಾಗಿರುವ ಕಾಮಗಾರಿಗಳಿಗೆ ಬಾಕಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.
ಉಲ್ಲೇಖ:-ತಮ್ಮ ಕಛೇರಿ ಸಂಖ್ಯೆ. ಸಂ:ಕಾಪಾಅ/ಪಂರಾಇಂವಿ/ಕೋ/ಲೆಶಾ/921/2021-22, ದಿ:27.10.2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖದಲ್ಲಿರುವಂತೆ ಈ ಕೆಳಕಂಡ ಕಾಮಗಾರಿಗಳಿಗೆ ಸಲ್ಲಿಸಿರುವ ಮುಕ್ತಾಯ ವರದಿ, ಸ್ಥಳ ತನಿಖಾ ವರದಿ, ಬಿಡುಗಡೆಯಾದಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಛಾಯಾ ಚಿತ್ರಗಳ ಆಧಾರದ ಮೇಲೆ ನಿಮ್ಮಕೋರಿಕೆಯಂತೆ ಬಾಕಿ ಬಿಡುಗಡೆ ಮಾಡಬೇಕಾದಅನುದಾನವನ್ನುRTGS ಮುಖಾಂತರ ಈ ಕೆಳಕಂಡಂತೆ ಜಮೆ ಮಾಡಲಾಗಿದೆ.

ಕ್ರ. ಸಂ.	ಮಂಡಳಿಯ ಧನಾದೇಶ ಸಂಖ್ಯೆ ಮತ್ತು ದಿನಾಂಕ	ಅನುದಾನಜಮಾ ಮಾಡಲಾದತಮ್ಮ ಖಾತೆ ಸಂಖ್ಯೆ ಮತ್ತುಜಮಾ ಮಾಡಿದ ದಿನಾಂಕ	ಮೊಬಲಗು (ರೂ. ಗಳಲ್ಲಿ)
1.	537640/24.11.2021	KOTAK MAHINDRA BANK, DODDAPET, KOLAR 182010088305	372987

ಅನುದಾನವು ತಮ್ಮ ಖಾತೆಗೆ ಜಮಾ ಆಗಿರುವ ಬಗ್ಗೆ ಈ ಕಛೇರಿಗೆ ಮಾಹಿತಿ ನೀಡಲು ಹಾಗೂ ಬಿಡುಗಡೆ ಮಾಡಿರುವ ಅನುದಾನಕ್ಕೆ *ಹಣ ಬಳಕೆ ಪ್ರಮಾಣ ಪತ್ರವನ್ನು ಮತ್ತು WORKSOFT ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಯು ಪೂರ್ಣಗೊಂಡ ವರದಿಯನ್ನು ತ್ವರಿತವಾಗಿ ಅಂದರೆ 15 ದಿನಗಳೊಳಗೆ ಸಲ್ಲಿಸಲು ಸೂಚಿಸಿದೆ.*

ತಮ್ಮ ವಿಶ್ವಾಸಿ,

ಉಪ ಹಣಕಾಸು ನಿಯಂತ್ರಣಾಧಿಕಾರಿ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

(ಕಛೇರಿ ಟಿಪ್ಪಣಿ ಮಾನ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲಪ್ಪಟ್ಟಿದೆ)

ವಿಶೇಷ ಘಟಕ ಯೋಜನೆ

ಜಿಲ್ಲೆ: ಕೋಲಾರ

(ಮೊತ್ತ ರೂಗಳಲ್ಲಿ)

ಕ್ರ. ಸಂ.	ತಾಲ್ಲೂಕು	ಕಾಮಗಾರಿ ವಿವರ	ಒಟ್ಟು ಅಂದಾಜು ಮೊತ್ತ	ಪೂರ್ಣಗೊಂಡ ಕಾಮಗಾರಿ ಮೊತ್ತ	ಇಲ್ಲಿಯವರೆಗ ಬಿಡುಗಡೆ ಮಾಡಿರುವ ಮೊತ್ತ	ಈಗ ಬಿಡುಗಡೆ ಮಾಡಿರುವ ಮೊತ್ತ
1	ಬಂಗಾರಪೇಟೆ	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಪಾಕರಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	500000	499550	375000	124550
2		ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹಂಚಾಳ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	500000	499052	375000	124052
3		ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಅಕ್ಷಂತಲ ಗೊಲ್ಲಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	500000	499385	375000	124385
		ಒಟ್ಟು				372987

ಉಪ ಹಣಕಾಸು ನಿಯಂತ್ರಣಾಧಿಕಾರಿ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ಚಿತ್ರದುರ್ಗ

Office of the Secretary
Bayaluseeme Development Board
Tamatakallu Road, Chitradurga-577502
e-mail: bsdbsecretary@gmail.com
Phone No: 08194-231584/85/86

ಕಾರ್ಯದರ್ಶಿಗಳವರ ಕಾರ್ಯಾಲಯ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ
ತಮಟಕಲ್ಲು ರಸ್ತೆ, ಚಿತ್ರದುರ್ಗ-577502
e-mail: bsdbsecretary@gmail.com
ದೂರವಾಣಿ ಸಂಖ್ಯೆ: 08194-231584/85/86

ಸಂಖ್ಯೆ:ಬಪ್ರಮಂ/ಚಿ/ಎಲ್.ಎ.ಕ್ಯೂ./2022-23

ದಿನಾಂಕ: 08.09.2022

ಇವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಹಂತ, 7ನೇ ಮಹಡಿ,
ಬಹುಮಹಡಿ ಕಟ್ಟಡ,
ಬೆಂಗಳೂರು-560001.

ಮಾನ್ಯರೆ,

ವಿಷಯ : ವಿಧಾನಸಭಾ ಸದಸ್ಯರಾದ ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ ವಿಧಾನಸಭಾ ಕ್ಷೇತ್ರ) ಇವರು ಮಂಡಿಸಿರುವ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-432 ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ : ವಿಧಾನಸಭೆ ಸಚಿವಾಲಯದ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/13ಅ/ಪ್ರ.ಸಂ.432/2022, ದಿನಾಂಕ: 06.09.2022.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನೆ ಸಂಖ್ಯೆ: 432ಕ್ಕೆ ಕೆಳಕಂಡಂತೆ ಮಾಹಿತಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ಪ್ರಶ್ನೆ	ಉತ್ತರ
ಅ) ಕಳೆದ ಮೂರು ವರ್ಷಗಳಿಂದ ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯಿಂದ ಬಿಡುಗಡೆ ಮಾಡಿದ ಅನುದಾನವೆಷ್ಟು;	ಕಳೆದ ಮೂರು ವರ್ಷಗಳಿಂದ ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಅಧೀನದಲ್ಲಿ ಬರುವ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗದಿಂದ ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ನೀಡಲಾದ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.
ಆ) ಕಳೆದ ಮೂರು ವರ್ಷಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳು ಯಾವುವು; (ಯೋಜನಾವಾರು, ಅನುದಾನವಾರು, ಗ್ರಾಮವಾರು ವಿವರ ನೀಡುವುದು)	ಅನ್ವಯಿಸುವುದಿಲ್ಲ.
ಇ) ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಬಯಲುಸೀಮೆ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಮಂಜೂರು ಮಾಡಿದ ಅನುದಾನವೆಷ್ಟು; (ಆದೇಶದ ಪ್ರತಿ ಸಹಿತ ಕಾಮಗಾರಿಗಳ ವಿವರ ನೀಡುವುದು)	ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಬಯಲುಸೀಮೆ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಮಂಜೂರು ಮಾಡಿದ ಅನುದಾನ ಮತ್ತು ಕಾಮಗಾರಿಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ(ಆಡಳಿತಾತ್ಮಕ ಮಂಜೂರಾತಿ ನೀಡಿ ಭಾಗಶಃ ಮತ್ತು ಅಂತಿಮ ಕಂತಿನ ಅನುದಾನ ಬಿಡುಗಡೆ ಮಾಡಿದ ಆದೇಶದ ಪ್ರತಿಗಳನ್ನು ಲಗತ್ತಿಸಿದೆ).
ಈ) ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯಲ್ಲಿರುವ ಯೋಜನೆಗಳಾವುವು; ಪ್ರಸಕ್ತ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಅಧೀನದಲ್ಲಿ ಬರುವ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ವತಿಯಿಂದ ಕೈಗೊಳ್ಳುವ ಯೋಜನೆಗಳು. 1) ಬಂಡವಾಳ ವೆಚ್ಚ 2) ವಿಶೇಷ ಘಟಕ ಯೋಜನೆ 3) ಗಿರಿಜನ ಉಪಯೋಜನೆ ಸರ್ಕಾರದ ಆದೇಶದಂತೆ 2022-23ನೇ ಸಾಲಿನಲ್ಲಿ ಮಂಡಳಿ ವ್ಯಾಪ್ತಿಯಲ್ಲಿನ ಮಾನ್ಯ ಶಾಸಕ ಸದಸ್ಯರುಗಳಿಗೆ ರೂ. 100.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಅದರಂತೆ ಮಾನ್ಯ ಶಾಸಕರು, ಬಂಗಾರಪೇಟೆ ರವರು ರೂ. 100.00 ಲಕ್ಷಗಳ ಕಾಮಗಾರಿಗಳ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿದ್ದು, ಸದರಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ಹಂತದಲ್ಲಿ ಉತ್ತರಿಸಬಹುದಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿಗಳ ಪರವಾಗಿ
ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ

ಅನುಬಂಧ-1

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ

ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ನೀಡಲಾದ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರ	ಮಾನ್ಯ ವಿಧಾನಸಭಾ ಸದಸ್ಯರ ಹೆಸರು	2019-20			2020-21			2021-22		
			ಬಂಡವಾಳ ವೆಚ್ಚ	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ	ಬಂಡವಾಳ ವೆಚ್ಚ	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ	ಬಂಡವಾಳ ವೆಚ್ಚ	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ
1	ಬಂಗಾರಪೇಟೆ	ಎಸ್.ಎನ್. ನಾರಾಯಣಸ್ವಾಮಿ	100.00	0.00	0.00	0.00	0.00	0.00	0.00	19.97	0.00

ಷರಾ: 2020-21ನೇ ಸಾಲಿನಲ್ಲಿ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಅನುಬಂಧ-2

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ

ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಬಯಲುಸೀಮೆ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಮಂಜೂರು ಮಾಡಿದ ಅನುದಾನ ಮತ್ತು ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ ಹೆಸರು	ವಿಧಾನಸಭಾ ಕ್ಷೇತ್ರ	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಮೋದನೆ ನೀಡಿದ ಮೊತ್ತ	ಆಡಳಿತಾತ್ಮಕ ಅನುಮೋದನೆ ನೀಡಿದ ದಿನಾಂಕ	ಭರಿಸಿದ ವೆಚ್ಚ	ಕಾಮಗಾರಿಯ ಹಂತ
1	2	3	4	5	6	7	8	9	10
ಸಾಮಾನ್ಯ ಯೋಜನೆ									
1	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ ಹೋ. ಬೂದಿಕೋಟೆ ಗ್ರಾ.ಪಂ. ಮಾರ್ಕೊಂಡಯ್ಯ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	2019-20	50.00	50.00	21.12.2019	50.00	ಮುಗಿದಿದೆ
2			ಬಂಗಾರಪೇಟೆ ತಾಲ್ಲೂಕು ಕಾಮಸಮುದ್ರಂ ಹೋಬಳಿ ಕಾಮಸಮುದ್ರಂ ಗ್ರಾ.ಪಂ. ವಟ್ಟಿಗಲ್ಲು ಗ್ರಾಮದ ಹತ್ತಿರ ಕಾಲುವೆಗೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ	2019-20	10.00	10.00	21.12.2019	10.00	ಮುಗಿದಿದೆ
3			ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ ಹೋ. ಆಲಂಬಾಡಿ ಜ್ಯೋತೇನಹಳ್ಳಿ ಗ್ರಾ.ಪಂ. ಕಾರಮನಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	2019-20	20.00	20.00	21.12.2019	20.00	ಮುಗಿದಿದೆ
4			ಬಂಗಾರಪೇಟೆ ತಾಲ್ಲೂಕು ಕಸಬಾ ಹೋ. ಐನೋರಹೊಸಹಳ್ಳಿ ಗ್ರಾ.ಪಂ. ದೊಡ್ಡಂಕಡಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	2019-20	20.00	20.00	21.12.2019	20.00	ಮುಗಿದಿದೆ
			ಒಟ್ಟು	4	100.00	100.00		100.00	
ವಿಶೇಷ ಘಟಕ ಯೋಜನೆ									
ಕ್ಷೇತ್ರ : ಬಂಗಾರಪೇಟೆ									
1	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಪಾಕರಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	2021-22	5.00	5.00	30.07.2021	5.00	ಮುಗಿದಿದೆ
2			ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹುದುಕುಳ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	2021-22	5.00	5.00	30.07.2021	4.99	ಮುಗಿದಿದೆ
3			ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಹಂಚಾಳ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	2021-22	5.00	5.00	30.07.2021	4.99	ಮುಗಿದಿದೆ
4			ಬಂಗಾರಪೇಟೆ ತಾಲ್ಲೂಕು ಕಸಬಾ ಹೋಬಳಿ ಅಕ್ಷಂತಲ ಗೊಲ್ಲಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಜನಾಂದವರ ಜಮೀನಿನ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	2021-22	5.00	5.00	30.07.2021	4.99	ಮುಗಿದಿದೆ
			ಒಟ್ಟು	4	20.00	20.00		19.97	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	433
ಮಾನ್ಯ ಸದಸ್ಯರ ಹೆಸರು	ಶ್ರೀ ಅಪ್ಪಚ್ಚು (ರಂಜನ್) ಎಂ. ಪಿ. (ಮಡಕೇರಿ)
ಉತ್ತರಿಸಬೇಕಾದ ದಿನಾಂಕ	14/09/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಿವಿಧ ಕಾರ್ಮಿಕ ಶ್ರಮಿಕ ವರ್ಗದವರಿಗೆ ಯಾವ ಯಾವ ಯೋಜನೆಯಡಿ ಸೌಲಭ್ಯ ನೀಡಲಾಗುತ್ತದೆ; ಇದರ ಮಾನದಂಡವೇನು; ಇದರ ಪ್ರಗತಿಯೇನು; ವಿವರ ನೀಡುವುದು;	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಕಾರ್ಮಿಕರಿಗೆ ಹಲವು ಸೌಲಭ್ಯಗಳನ್ನು ಒದಗಿಸುತ್ತಿದ್ದು, ನೀಡಲಾಗುವ ಸೌಲಭ್ಯಗಳ ವಿವರ; ಇದರ ಮಾನದಂಡ ಹಾಗೂ ಪ್ರಗತಿಯ ವಿವರಗಳನ್ನು ಈ ಕೆಳಕಂಡಂತೆ ಒದಗಿಸಿದೆ: 1) **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ;** ಈ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗಾಗಿ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರವನ್ನು **ಅನುಬಂಧ-01**ರಲ್ಲಿ ಒದಗಿಸಿದೆ. ಈ ಸೌಲಭ್ಯಗಳನ್ನು ಪಡೆಯಲು ನೋಂದಾಯಿತ ಎಲ್ಲಾ ಅರ್ಹ ಫಲಾನುಭವಿಗಳು ಸೇವಾ ಸಿಂಧು ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯಗಳನ್ನು ಪಡೆಯಲು ಅನುಸರಿಸಬೇಕಾದ ಮಾನದಂಡವನ್ನು **ಅನುಬಂಧ-02**ರಲ್ಲಿ ಒದಗಿಸಿದೆ. ಇಲ್ಲಿಯವರೆಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ **32,29,309** ಫಲಾನುಭವಿಗಳಿಗೆ ರೂ. **2,398.16** ಕೋಟಿಗಳಷ್ಟು ಸಹಾಯಧನ ವಿತರಿಸಲಾಗಿದೆ. 2) **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ;** ಈ ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. (1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

		ಅ) **ಅಪಘಾತ ಪರಿಹಾರ ಸೌಲಭ್ಯ :** ಈ ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ. ಮಾನದಂಡ:– • ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ. • ವಯೋಮಿತಿ 20 ರಿಂದ 70 ವರ್ಷಗಳು. • ಅಪಘಾತದ ಸಮಯದಲ್ಲಿ ಚಾಲಕನು ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ಊರ್ಜಿತ ಚಾಲನ ಪತ್ರ ಹೊಂದಿರತಕ್ಕದ್ದು. • ನಿರ್ವಾಹಕರಿಗೆ ಸಂಬಂಧಿಸಿದಂತೆ ಆತನು/ಆಕೆಯು ಮೋಟಾರು ವಾಹನಗಳ ಕರ್ನಾಟಕ ನಿಯಮಗಳು, 1989ರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ನೀಡಲಾಗಿರುವ ಊರ್ಜಿತ ನಿರ್ವಾಹಕರ ಪರವಾನಿಗೆಯನ್ನು ಹೊಂದಿರತಕ್ಕದ್ದು ಹಾಗೂ ಯೋಜನೆಯಡಿ ನಿಗದಿ ಪಡಿಸಿದ ನೋಂದಣಿ ಅಧಿಕಾರಿಯವರಲ್ಲಿ ನೋಂದಾಯಿಸಿಕೊಂಡಿರಬೇಕು. • ಕ್ಲೀನರ್‌ಗಳು ಯೋಜನೆಯಡಿ ನಿಗದಿ ಪಡಿಸಿದ ನೋಂದಣಿ ಅಧಿಕಾರಿಯವರಲ್ಲಿ ನೋಂದಾಯಿಸಿಕೊಂಡಿರಬೇಕು. • ಅರ್ಜಿದಾರರು ವಾಣಿಜ್ಯ ಸಾರಿಗೆ ವಾಹನ/ಸಂಸ್ಥೆಯಲ್ಲಿ ಹಿಂದಿನ 12 ತಿಂಗಳಿನಲ್ಲಿ ತೊಂಬತ್ತು ದಿನಗಳಿಗೆ ಕಡಿಮೆ ಇಲ್ಲದಂತೆ ಕಾರ್ಯ ನಿರ್ವಹಿಸಿರತಕ್ಕದ್ದು. ಪ್ರಗತಿ:– ಈವರೆಗೆ ಒಟ್ಟು 1169 ಅಪಘಾತ ಪ್ರಕರಣಗಳಲ್ಲಿ ಒಟ್ಟು ರೂ. 41,28,70,482ಗಳ ಅಪಘಾತ ಪರಿಹಾರವನ್ನು ವಿತರಿಸಲಾಗಿದೆ. (ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/–ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ. ಮಾನದಂಡ:– • ಖಾಸಗಿ ವಾಣಿಜ್ಯ ಸಾರಿಗೆಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳು ಅಪಘಾತದಿಂದ ಶಾಶ್ವತ ದುರ್ಬಲತೆಅಥವಾ ಮರಣ ಹೊಂದಿದ ಪ್ರಕರಣಗಳಲ್ಲಿ ಮಂಡಳಿಯಿಂದ ಸೌಲಭ್ಯ ಪಡೆದಿರಬೇಕು. • ಗರಿಷ್ಠ ಇಬ್ಬರು ಮಕ್ಕಳಿಗೆ ಮಾತ್ರ.

		• 1ನೇ ತರಗತಿಯಿಂದ ಪದವಿ ಪೂರ್ವ / 12ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. **ಪ್ರಗತಿ:-** ಈವರೆಗೆ ಒಟ್ಟು 792 ವಿದ್ಯಾರ್ಥಿಗಳಿಗೆ ಒಟ್ಟು ರೂ. 79.20 ಲಕ್ಷಗಳ ಶೈಕ್ಷಣಿಕ ಧನ ಸಹಾಯ ವಿತರಿಸಲಾಗಿದೆ. 2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-** ಈ ಯೋಜನೆಯಡಿ, 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಗೃಹ ಕಾರ್ಮಿಕರು, ಟೈಲರ್ಸ್, ಚಿಂದಿ ಆಯುವವರು, ಮೆಕ್ಯಾನಿಕ್ಸ್, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕ ನೋಂದಣಿ ಮಾಡಿಕೊಂಡು ಸ್ಮಾರ್ಟ್‌ಕಾರ್ಡ್ ವಿತರಿಸಲಾಗುತ್ತಿದ್ದು, ಯಾವುದೇ ಆರ್ಥಿಕ ಸೌಲಭ್ಯ ನೀಡುತ್ತಿಲ್ಲ. **ಮಾನದಂಡ:-** • ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ. • ವಯೋಮಿತಿ 18 ರಿಂದ 60 ವರ್ಷಗಳು. • ಪ್ರಸ್ತುತ ಮೇಲ್ಕಂಡ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ. **ಪ್ರಗತಿ:-** ಈವರೆಗೆ ಮೇಲ್ಕಂಡ 11 ಅಸಂಘಟಿತ ವರ್ಗಗಳ ಒಟ್ಟು 2,66,982 ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ನೀಡಲಾಗಿದೆ. (3) **ಇ-ಶ್ರಮ್ ಕಾರ್ಯಕ್ರಮ (ಅಸಂಘಟಿತ ಕಾರ್ಮಿಕರ ನೋಂದಣಿ) :-** ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಇ-ಶ್ರಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದ್ದು, ಯೋಜನೆಯಡಿ 16-59 ವಯೋಮಾನದ ಇ.ಎಸ್.ಐ ಹಾಗೂ ಇ.ಪಿ.ಎಫ್ ಸೌಲಭ್ಯವನ್ನು ಹೊಂದಿರದ ಹಾಗೂ ಆದಾಯ ತೆರಿಗೆ ಪಾವತಿ ಮಾಡದ ಎಲ್ಲಾ ಅಸಂಘಟಿತ ಕಾರ್ಮಿಕರು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಅಥವಾ ಸ್ವಯಂ ಆಗಿ ಇ-ಶ್ರಮ್ ಪೋರ್ಟಲ್‌ನಲ್ಲಿ (eshram.gov.in) ಉಚಿತವಾಗಿ ನೋಂದಾಯಿಸಬಹುದಾಗಿದ್ದು, ಗುರುತಿನ ಚೀಟಿಯನ್ನು ನೋಂದಾಯಿತ ಸ್ಥಳದಲ್ಲೆ ವಿತರಿಸಲಾಗುತ್ತದೆ. **ಮಾನದಂಡ:-** • ಕೇಂದ್ರ ಸರ್ಕಾರವು ಗುರುತಿಸಿರುವ 379 ಅಸಂಘಟಿತ ವರ್ಗಗಳಿಗೆ ಮಾತ್ರ ಅನ್ವಯಿಸುತ್ತದೆ.

		• ಇಎಸ್ಐ ಹಾಗೂ ಇಪಿಎಫ್ ವಂತಿಕೆದಾರರಾಗಿರಬಾರದು. • ಆದಾಯ ತೆರಿಗೆ ಪಾವತಿದಾರರಾಗಿರಬಾರದು. • ವಯೋಮಿತಿ 16 ರಿಂದ 59 ವರ್ಷಗಳು. <u>ಪ್ರಗತಿ:-</u> ಈವರೆಗೆ ವಿವಿಧ ಅಸಂಘಟಿತ ವರ್ಗಗಳ ಒಟ್ಟು 70,17,461 ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ನೀಡಲಾಗಿದೆ. 3) **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ;** ಈ ಮಂಡಳಿಯ ವತಿಯಿಂದ 20:40 ರ ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಪ್ರತಿ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಉದ್ಯೋಗದಾತರು ಪಾವತಿ ಮಾಡುತ್ತಿದ್ದು ಹಾಗೂ ರೂ 20/- ರಂತೆ ವಂತಿಕೆ ಪಾವತಿಸುವ ಸಂಘಟಿತ ಕಾರ್ಮಿಕರಿಗೆ ಕೆಳಕಂಡ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು. 1) **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ** 2) **ಕಾರ್ಮಿಕರಿಗೆ ವೈದ್ಯಕೀಯ ನೆರವು** 3) **ಕಾರ್ಮಿಕರಿಗೆ ಅಪಘಾತ ಧನ ಸಹಾಯ** 4) **ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ** 5) **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ** 6) **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ** 7) **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ** ಈ ಮೇಲಿನ ಕಲ್ಯಾಣ ಯೋಜನೆಗಳ ಸೌಲಭ್ಯಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡವನ್ನು **ಅನುಬಂಧ-3ರಲ್ಲಿ** ಮತ್ತು 3 ವರ್ಷಗಳ ಪ್ರಗತಿಯ ವಿವರಗಳನ್ನು **ಅನುಬಂಧ-4ರಲ್ಲಿ** ಲಗತ್ತಿಸಿದೆ.
ಆ)	ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಎಷ್ಟು ಜನರಿಗೆ ಇಲಾಖೆಯಿಂದ ಯೋಜನೆಯ ಸೌಲಭ್ಯ ನೀಡಲಾಗಿದೆ; (ಪೂರ್ಣ ವಿವರ ನೀಡುವುದು)	1) **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ;** ಮಂಡಳಿಯ ವತಿಯಿಂದ ಕಳೆದ ಎರಡು ವರ್ಷದಲ್ಲಿ (2020-21 ಮತ್ತು 2021-22)ಕೊಡಗು ಜಿಲ್ಲೆಯಲ್ಲಿ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ ನೋಂದಾಯಿತ ಫಲಾನುಭವಿಗಳಿಗೆ ಸಹಾಯ ವಿತರಿಸಿದ ವಿವರವನ್ನು **ಅನುಬಂಧ-05ರಲ್ಲಿ** ಸಲ್ಲಿಸಿದೆ. 2) **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ;** ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನೀಡಲಾದ ಯೋಜನೆಗಳ ಸೌಲಭ್ಯವಾರು ವಿವರವನ್ನು **ಅನುಬಂಧ-06** ಒದಗಿಸಲಾಗಿದೆ.

3) ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ;

ಈ ಮಂಡಳಿಯಿಂದ ಕಲ್ಯಾಣ ಯೋಜನೆಗಳಡಿ ಕಳೆದ 2 ವರ್ಷಗಳಿಂದ ಕೊಡಗು ಜಿಲ್ಲೆಯ 42 ಫಲಾನುಭವಿಗಳಿಗೆ ರೂ. 2,34,000/- ಗಳ ಧನ ಸಹಾಯವನ್ನು ನೀಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

ವರ್ಷ	ಯೋಜನೆಗಳು	ಫಲಾನುಭವಿಗಳು	ಮೊತ್ತ
2020-21	ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ	25	1,20,000
	ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ	1	5,000
2020-21	ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ	9	64,000
	ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ	7	45,000
ಒಟ್ಟು		42	2,34,000

ಇ)	ಹೊರ ರಾಜ್ಯದಿಂದ ಬರುವ ಕಾರ್ಮಿಕರನ್ನು ಹೇಗೆ ಗುರುತಿಸಲಾಗುತ್ತಿದೆ; ಇವರಿಗೆ ಸರ್ಕಾರದಿಂದ ಯಾವ ರೀತಿಯ ಸೌಲಭ್ಯ ನೀಡಲಾಗುತ್ತದೆ;	ಹೊರ ರಾಜ್ಯದಿಂದ ಬರುವ ಕಾರ್ಮಿಕರನ್ನು ಗುರುತಿಸಲು ಕಾರ್ಮಿಕ ಇಲಾಖೆಯು ಯಾವುದೇ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಕಾರ್ಮಿಕರು ತಾವಾಗಿಯೇ ದುಡಿಮೆ ಹುಡುಕಿಕೊಂಡು ವಲಸೆ ಬರುತ್ತಾರೆ. ಎ) ಕಾರ್ಮಿಕ ಇಲಾಖೆಯಲ್ಲಿ ಕೆಳಕಂಡ ಎರಡು ಸಾಮಾಜಿಕ ಭದ್ರತಾ ಕಾಯ್ದೆಯಡಿಯಲ್ಲಿ ಹೊರ ರಾಜ್ಯದ ಕಾರ್ಮಿಕರನ್ನು ಗುರುತಿಸಿ ಅವರಿಗೆ ಸಾಮಾಜಿಕ ಭದ್ರತಾ ಸೌಲಭ್ಯ ನೀಡಲಾಗುತ್ತಿದೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ಅವರುಗಳನ್ನು ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ನೋಂದಾಯಿತ ಕಾರ್ಮಿಕರಿಗೆ ನೀಡಲ್ಪಡುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಬಿ) ಅಂತೆಯೇ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವತಿಯಿಂದ ಇ-ಶ್ರಮ್ ಪೋರ್ಟಲ್‌ನಲ್ಲಿ (eshram.gov.in) ವಲಸೆ ಕಾರ್ಮಿಕರನ್ನು ಸಹ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.
ಈ)	ಕೊಡಗು ಜಿಲ್ಲೆಗೆ ಹೊರ ರಾಜ್ಯದಿಂದ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಕಾರ್ಮಿಕರು ವಲಸೆ ಬಂದಿರುತ್ತಾರೆ ? (ಸಂಪೂರ್ಣ ಮಾಹಿತಿ ಒದಗಿಸುವುದು)	ವಲಸೆ ಕಾರ್ಮಿಕರನ್ನು ನೇಮಿಸಿಕೊಂಡ ಸಂಸ್ಥೆಗಳಿಗೆ ಅಂತರ ರಾಜ್ಯ ಕಾರ್ಮಿಕ ಕಾಯ್ದೆಯಡಿ ನೋಂದಣಿ ಮತ್ತು ಪರವಾನಿಗೆ ನೀಡಲು ಅವಕಾಶವಿರುತ್ತದೆ. ಆದರೆ ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಯಾವುದೇ ನೋಂದಣಿ ಮತ್ತು ಪರವಾನಿಗೆ ಪಡೆದಿರುವುದಿಲ್ಲವಾದ್ದರಿಂದ ವಲಸೆ ಕಾರ್ಮಿಕರ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಕಾಇ 480 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ–1

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 433

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಫಲಾನುಭವಿಗಳಿಗೆ ಸಿಗುವ ಕಲ್ಯಾಣ ಮತ್ತು ಸಾಮಾಜಿಕ ಮತ್ತು ಭದ್ರತಾ ಸೌಲಭ್ಯಗಳು;

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/–
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1500/–
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/– ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/– ದವರೆಗೆಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. ಟ್ರೈನಿಂಗ್–ಕಮ್–ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/– ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/– ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆರೂ.50,000/–
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ : ರೂ.4,000/– ಹಾಗೂ ಅನುಗ್ರಹ ರಾಶಿ ರೂ.71,000/–ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	
1	ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5)	5,000
2	1 ರಿಂದ 4ನೇ ತರಗತಿ	5,000
3	5 ರಿಂದ 8ನೇ ತರಗತಿ	8,000
4	9 ಹಾಗೂ 10ನೇ ತರಗತಿ	12,000
	ಪದವಿ ಪೂರ್ವ	
5	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	15,000
6	ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ	20,000
7	ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್	40,000
8	ಡಿ.ಎಡ್	25,000

	ಬಿ.ಎಡ್	35,000
9	ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ)	25,000
10	ಎಲ್ಎಲ್ಬಿ / ಎಲ್ಎಲ್ಎಮ್	30,000
11	ಸ್ನಾತಕೋತ್ತರ ಪದವಿ ಸೇರ್ಪಡೆಗೆ	35,000 ಗರಿಷ್ಠ 2 ವರ್ಷಅವಧಿಗೆ ಒಳಪಟ್ಟು
	ತಾಂತ್ರಿಕ/ ವೈದ್ಯಕೀಯ ಎನ್ಇಇಟಿ ಅಥವಾ ಕೆಸಿಇಟಿ	
12	ಬಿಇ / ಬಿ.ಟೆಕ್ಅಥವಾ ಸಂಬಂಧಪಟ್ಟ ಯೂಜಿಕೋರ್ಸ್	ಸದರಿ ಕೋರ್ಸ್‌ನ ಗರಿಷ್ಠ 2 ವರ್ಷಅವಧಿಗೆ ಒಳಪಟ್ಟು ವಾರ್ಷಿಕ ರೂ.50,000
13	ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರಕೋರ್ಸ್)	ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು ವಾರ್ಷಿಕ ರೂ. 60,000
14	ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ಎಸ್ / ಬಿಡಿಎಸ್ /ಬಿಹೆಚ್ಎಮ್ಎಸ್‌ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್	ರೂ.60,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
	ಎಮ್‌ಡಿ	ರೂ. 75,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆ ಗರಿಷ್ಠಮೂರು ವರ್ಷಗಳಿಗೆ ಹಾಗೂಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷರೂ. 25,000 (ಯೂಜಿಸಿಯ ಜೂನಿಯರ್‌ರಿಸರ್ಚ್ ಫೆಲೋಶಿಫ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಯೂಜಿಸಿ ನಿಯಮಗಳನ್ವಯ ವೇತನ ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
16	ಐಐಟಿ/ಐಐಐಟಿ/ ಐಐಎಮ್/ ಎನ್ಐಟಿ/ ಐಐಎಸ್ಇಆರ್/ ಎಐಐಎಮ್ಎಸ್ /ಎನ್ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	ಪಾವತಿಸಿದ ಬೋದನಾ ಶುಲ್ಕ

12. **ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆರೂ.300/- ರಿಂದರೂ.20,000/-ವರೆಗೆ

13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ ರೂ.2,00,000/- ಮತ್ತುಭಾಗಶಃ ಶಾಶ್ವತದುರ್ಬಲತೆಯಾದಲ್ಲಿ ರೂ.1,00,000/-

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ

ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/–ವರೆಗೆ

15. **ಮದುವೆ ಸಹಾಯಧನ** (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ **ರೂ.60,000/–**
16. **ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪಾರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠೀತ ಸಂಸ್ಥೆಗಳಿಂದ ತರಬೇತಿ ಮತ್ತು ಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.**
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ**: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ**: ನೋಂದಾಯಿತ ಫಲಾನುಭವಿಗಳಿಗೆ **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ**
19. **ತಾಯಿ ಮಗು ಸಹಾಯ ಹಸ್ತ**: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ**ರೂ.6,000/–** ಗಳ ಸಹಾಯಧನ.
20. ಇಮ್ಯುನಿಟಿ ಬೂಸ್ಟರ್‌ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್‌ಯೋಜನೆ
22. ಮೊಬೈಲ್ ಮೆಡಿಕಲ್ ಕೇರ್ ಯುನಿಟ್
23. ಪೈಲಟ್‌ಟ್ರೈನಿಂಗ್: ಫಲಾನುಭವಿಯ ಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ
25. ನ್ಯೂಟ್ರೀಸನ್ ಕಿಟ್ಸ್:

ಅನುಬಂಧ-2

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 433

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿವಿಧ ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ದಾಖಲೆಗಳು:

ನಿಯಮ 39: ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್‌ಲೈನ್‌ನಲ್ಲಿಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಣಿಯಾಗಿ ಕನಿಷ್ಠ 3 ವರ್ಷ ಸದಸ್ಯತ್ವವನ್ನು ಪೂರ್ಣಗೊಳಿಸಿದ ನಂತರ 60 ವರ್ಷ ವಯಸ್ಸಾಗಿರಬೇಕು.
- ಸರ್ಕಾರದ ವಿವಿಧಯೋಜನೆಯಡಿಯಲ್ಲಿ ಈ ಸೌಲಭ್ಯ ಪಡೆಯತ್ತಿರಬಾರದು.
- ಜೀವಿತ ಪ್ರಮಾಣ ಪತ್ರ ಸಲ್ಲಿಸುವುದು.
- ಫಲಾನುಭವಿಯಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 40: ದುರ್ಬಲತೆ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಶಾಶ್ವತ ದುರ್ಬಲತೆಯಾಗಿರುವುದಕ್ಕೆ ಕಟ್ಟಡ ಕಾರ್ಮಿಕನ ಭಾವಚಿತ್ರ (ಫೋಟೋ).
- ದುರ್ಬಲತೆ ಗುರುತಿನ ಚೀಟಿ ಪಡೆದ ನಂತರ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
- ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಪಘಾತ ಉಂಟಾಗಿರುದರಿಂದ ದುರ್ಬಲತೆಯಾಗಿರಬೇಕು.
- ಫಲಾನುಭವಿಗೆ ದುರ್ಬಲತೆಯಾಗಿರುವುದಕ್ಕೆ ಹಿರಿಯ ನಾಗರಿಕರ ಹಾಗೂ ಅಂಗವಿಕಲ ಸಬಲೀಕರಣ ಇಲಾಖೆ ಇವರಿಂದ ಪಡೆದ ಅಂಗವಿಕಲ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು.
- ಫಲಾನುಭವಿಯ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 39(ಎ): ಕುಟುಂಬ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ–12(ಎ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಅರ್ಜಿದಾರರ ಕೋರಿಕೆ ಪತ್ರ.
- ಮೃತ ಪಿಂಚಣಿದಾರರ ಮರಣ ಪ್ರಮಾಣ ಪತ್ರ ಸಲ್ಲಿಸುವುದು.
- ನಾಮನಿರ್ದೇಶಿತರು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಪಿಂಚಣಿದಾರರು ಮಂಡಳಿಯಿಂದ ಪಿಂಚಣಿ ಪಡೆಯುತ್ತಿರುವ ಅವಧಿಯಲ್ಲಿ ಮರಣ ಹೊಂದಿದರೆ ಮಾತ್ರ ಕುಟುಂಬ ಪಿಂಚಣಿ ಪಡೆಯಲು ಅವಕಾಶವಿರುತ್ತದೆ.
- ನಾಮ ನಿರ್ದೇಶಿತರ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 41: ಶ್ರಮ ಸಾಮರ್ಥ್ಯಟೂಲ್‌ಕಿಟ್ ವಿತ್‌ಟ್ರೈನಿಂಗ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ–15ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯ ಸದಸ್ಯತ್ವ ಅವಧಿಯಲ್ಲಿಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.
- ಫಲಾನುಭವಿಯು ತರಬೇತಿ ಪಡೆಯಲು 55 ವರ್ಷ ವಯಸ್ಸಿನ ಒಳಗಿರಬೇಕು

ನಿಯಮ 42: ಮನೆ ಖರೀದಿ ಅಥವಾ ನಿರ್ಮಾಣಕ್ಕಾಗಿ (ಕಾರ್ಮಿಕ ಗೃಹ ಭಾಗ್ಯ) ನೀಡುವ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ–16 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನಚೀಟಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಅರ್ಜಿ ಸಲ್ಲಿಸುವ ಫಲಾನುಭವಿಗೆ ಕನಿಷ್ಠ 45 ವರ್ಷ ವಯಸ್ಸಾಗಿರಬೇಕು
- ಸರ್ಕಾರದಿಂದ ಯಾವುದಾದರೂ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಸಾಲ ಮಂಜೂರಾಗಿರಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 43: ಹೆರಿಗೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-17ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯುತನ್ನ ಮೊದಲ 2 ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ. (ಕೇವಲ ಎರಡು ಜೀವಂತ ಮಕ್ಕಳಿದ್ದಾರೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಬೇಕು.)
- ಇದುಎರಡನೇ ಹೆರಿಗೆ ಎಂದು ಅಫಿಡೆವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ನೊಂದಣಾಧಿಕಾರಿಗಳಿಂದ ಪಡೆದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 43-ಎ: ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕಾಂಶಗಳನ್ನು ಮಹಿಳಾ ಫಲಾನುಭವಿಯು ಮೊದಲ ಎರಡು ಮಕ್ಕಳಿಗಾಗಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್. (ತಾಯಿ ಮಗು ಸಹಾಯ ಹಸ್ತ)

- ನಮೂನೆ-17-ಎ ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯುತನ್ನ ಮೊದಲ ಎರಡು ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ.
- ಎರಡನೇ ಹೆರಿಗೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿಅಫಿಡೆವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ಅಧಿಕಾರಿಗಳಿಂದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ44:ಅಂತ್ಯಕ್ರಿಯೆ ಸಂಸ್ಕಾರ ಮತ್ತು ಅನುಗ್ರಹರಾಶಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-18ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.

- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
- ಮೃತ ಫಲಾನುಭವಿಯ ವಯಸ್ಸು 60 ವರ್ಷ ಮೀರದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ಅರ್ಜಿದಾರನನ್ನು ಮೃತ ಫಲಾನುಭವಿಯ ನಾಮನಿರ್ದೇಶಿತನಾಗಿ ನೋಂದಾಯಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಬೇಕು.
- ಫಲಾನುಭವಿಯು ಮೃತನಾದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 45: ಶೈಕ್ಷಣಿಕ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ–19 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾಭವಿಯ ಮಗ / ಮಗಳು ಉತ್ತೀರ್ಣ ಆಗಿರುವ ಕುರಿತು ಅಂಕಪಟ್ಟಿ ಹಾಗೂ ವ್ಯಾಸಂಗ ಮಾಡುತ್ತಿರುವ
- ಸಂಸ್ಥೆಯ ಮುಖ್ಯಸ್ಥರಿಂದ ವ್ಯಾಸಂಗ ಮೂಲ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಫಲಾನುಭವಿಯ ಪ್ರಸ್ತುತ ಅರ್ಜಿಯು ಈ ಹಿಂದೆ ಶೈಕ್ಷಣಿಕ ಸಹಾಯಧನ ಪಡೆದಇಬ್ಬರು ಮಕ್ಕಳಿಗೆ ಅನ್ವಯಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಶೈಕಣಿಕ ಸಹಾಯಧನಅರ್ಜಿಯನ್ನು ಶೈಕ್ಷಣಿಕ ವರ್ಷ ಪ್ರಾರಂಭವಾದ ದಿನದಿಂದ 6 ತಿಂಗಳ ಒಳಗೆ ಸಲ್ಲಿಸಬೇಕು.

ನಿಯಮ 46: ಒಳರೋಗಿ ವೈದ್ಯಕೀಯ ಸಹಾಯಧನಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ–20 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯು ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕ ಹಾಗೂ ಬಿಡುಗಡೆಯಾದ ದಿನಾಂಕ ವಿವರಗಳನ್ನು ನಮೂದಿಸಬೇಕು.
- ಫಲಾನುಭವಿಯು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ (ಶೆಡ್ಯೂಲ್ 1ಗೆ ಸೇರಿದ) ಖಾಸಗಿ ಆಸ್ಪತ್ರೆಗಳಲ್ಲಿ ಕನಿಷ್ಠ ಎರಡು ದಿನ ಒಳರೋಗಿಯಾಗಿ ದಾಖಲಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಆಸ್ಪತ್ರೆಗೆ ದಾಖಲಾದ ದಿನಾಂಕದಿಂದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ 47: ಅಪಘಾತ ಮರಣ, ಶಾಶ್ವತ ಸಂಪೂರ್ಣ / ಭಾಗಶಃದುರ್ಬಲತೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-21ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಅಪಘಾತದ ಸ್ವರೂಪವನ್ನು ನಮೂದಿಸಬೇಕು.
- ದುರ್ಬಲತೆ ಪ್ರಕರಣವಿದ್ದಲ್ಲಿ, ಅಪಘಾತದ ಪರಿಣಾಮವಾಗಿರುವ ಶಾಶ್ವತ-ಸಂಪೂರ್ಣ (ಪ್ರತಿ ಶತಃ 100ರಷ್ಟು) ಅಥವಾ ಶಾಶ್ವತ-ಭಾಗಶಃ (ಪ್ರತಿ ಶತಃ 100ಕ್ಕಿಂತ ಕಡಿಮೆ) ದುರ್ಬಲತೆಯಾದ ಬಗ್ಗೆ ಹಾಗೂ ದುರ್ಬಲತೆಯ ಶೇಕಡವಾರು ಪ್ರಮಾಣ ನಮೂದಿಸಬೇಕು.
- ಫಲಾನುಭವಿಗೆ ದುರ್ಬಲತೆಯಾದ ನಂತರ ತಪಾಸಣೆ ಮಾಡಿದ ಸರ್ಕಾರಿ / ಸರ್ಕಾರದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ ವೈದ್ಯರಿಂದ ಶೇಕಡವಾರು ದುರ್ಬಲತೆ ಖಚಿತ ಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸುವುದು.
- ನಮೂನೆ 21ಎ ನಲ್ಲಿ ನಿಯೋಜಕರಿಂದ ಪಡೆದ ವರದಿಯನ್ನು ಸಲ್ಲಿಸಬೇಕು.
- ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 48: ಪ್ರಮುಖ ವೈದ್ಯಕೀಯ ವೆಚ್ಚ (ಕಾರ್ಮಿಕಚಿಕಿತ್ಸಾ ವೆಚ್ಚ) ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-22 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ನಮೂನೆ-22 (ಎ) ರಲ್ಲಿ ಚಿಕಿತ್ಸೆ ನೀಡಿದ ವೈದ್ಯರಿಂದ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸುವುದು
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ/ಆರ್.ಎಸ್.ಬಿ.ವೈ. ಯೋಜನೆಯಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು
- ಚಿಕಿತ್ಸೆ ಪಡೆದ ಮೂಲ ವೈದ್ಯಕೀಯ ದಾಖಲೆಗಳನ್ನು ಮತ್ತು ಬಿಲ್ಲುಗಳನ್ನು ಸಲ್ಲಿಸುವುದು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49: ಮದುವೆ ಸಹಾಯಧನ (ಗೃಹಲಕ್ಷ್ಮೀ ಬಾಂಡ್) ಸೌಲಭ್ಯಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ–23 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ನೋಂದಣಿಯಾಗಿ ಒಂದು ವರ್ಷ ಪೂರೈಯಿಸಿದ ನಂತರ ಫಲಾನುಭವಿ/ಮಕ್ಕಳಿಗೆ ಮದುವೆಯಾಗಿರಬೇಕು
- ಮದುವೆಯಾದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49(ಇ): ಬಿ.ಎಂ.ಟಿ.ಸಿ. ಬಸ್ ಪಾಸ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ–23 (ಬಿ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಖಾಯಂ ವಿಳಾಸ ಹೊಂದಿರುವ ಫಲಾನುಭವಿಯಾಗಿರಬೇಕು
- ಆಧಾರ್‌ಕಾರ್ಡ್ ಮತ್ತು ಪಡಿತರಚೀಟಿ ಪ್ರತಿ ಸಲ್ಲಿಸುವುದು.
- ಬಿಎಂಟಿಸಿ ಸಂಸ್ಥೆ ನೀಡುವ ಬಸ್ ಪಾಸ್‌ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು.

<u>ಅನುಬಂಧ-3</u>

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ; 433

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು – ಕಾರ್ಮಿಕ ಕಲ್ಯಾಣ ಯೋಜನೆಗಳ ವಿವರ ;

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಾದ ಕಾರ್ಖಾನೆಗಳು/ಸಂಸ್ಥೆಗಳು/ಪ್ಲಾಂಟೇಶನ್/ಸಾರಿಗೆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ.

1. ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ವರ್ಷ ಜನವರಿ 15 ರೊಳಗೆ ಕಾರ್ಮಿಕರು, ಮಾಲೀಕರು ರೂ. 20 : 40 ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಒಟ್ಟು ರೂ. 60/- ಗಳಂತೆ ವಂತಿಕೆಯನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸತಕ್ಕದ್ದು.
2. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಪಡೆಯಲು ವಿದ್ಯಾರ್ಥಿಗಳು, ಶೈಕ್ಷಣಿಕ ಸಂಸ್ಥೆಗಳು, ಕಾರ್ಖಾನೆಗಳು/ಸಂಸ್ಥೆಗಳು <u>klwb.karnataka.gov.in</u> ಇಲ್ಲಿ ನೊಂದಾಯಿಸಿ ಅನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
3. ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳು <u>klwb.karnataka.gov.in</u> ಇಲ್ಲಿ ತಮ್ಮ ಸಂಸ್ಥೆಗಳನ್ನು ನೊಂದಾಯಿಸಿ ವಂತಿಕೆ ಪಾವತಿ ಮಾಡಬೇಕಾಗಿರುತ್ತದೆ.

<u>ಕೆಳಗಿನ ಯೋಜನೆಗಳಿಗೆ ಮಾಸಿಕ ವೇತನ ರೂ. 21,000/- ಗಿಂತ ಮೀರಿರಬಾರದು. ವಯೋಮಿತಿ 18- 60 ವರ್ಷ</u>

1. **<u>ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ:</u> ಪ್ರೌಢ ಶಾಲೆ,** (8 ರಿಂದ 10ನೇ ತರಗತಿವರೆಗೆ) ರೂ.3,000/ ಪಿಯುಸಿ/ಡಿಪ್ಲೊಮಾ/ಐಟಿಐ/ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.4,000/-ಪದವಿ ಶಿಕ್ಷಣಕ್ಕಾಗಿ ರೂ.5,000/ ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.6,000/-ಇಂಜಿನೀಯರಿಂಗ್/ವೈದ್ಯಕೀಯ ಶಿಕ್ಷಣಕ್ಕಾಗಿ ರೂ.10,000/-ಗಳ ಪ್ರೋತ್ಸಾಹ ಧನ ನೀಡಲಾಗುವುದು.(**ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50 ಹಾಗೂ ಪ.ಜಾ / ಪ.ಪಂಗಡದ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು**)

2. **<u>ಕಾರ್ಮಿಕರಿಗೆ ವೈದ್ಯಕೀಯ ನೆರವು :</u>** ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್, ಕ್ಯಾನ್ಸರ್, ಆಂಜಿಯೋಪ್ಲಾಸ್ಟಿ, ಕಣ್ಣು, ಅರ್ಥೋಪೆಡಿಕ್, ಗರ್ಭಕೋಶದ ಶಸ್ತ್ರ ಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ ಚಿಕಿತ್ಸೆಗೆ ಕನಿಷ್ಠ **ರೂ. 1,000/-**ದಿಂದ ಗರಿಷ್ಠ **ರೂ,25,000/-**ವರೆಗೆ ಮತ್ತು ಆರೋಗ್ಯ ತಪಾಸಣೆಗೆ **ರೂ. 500/-**ರಿಂದ **ರೂ, 1000/-**ವರೆಗೆ ಧನ ಸಹಾಯ ನೀಡಲಾಗುವುದು.

3. **<u>ಕಾರ್ಮಿಕರಿಗೆ ಅಪಘಾತ ಧನ ಸಹಾಯ :</u>** ಕಾರ್ಮಿಕರಿಗೆ ಕೆಲಸದ ವೇಳೆಯಲ್ಲಿ ಅಪಘಾತವಾದಲ್ಲಿ ಕನಿಷ್ಠ **ರೂ. 1,000/-** ಗರಿಷ್ಠ **ರೂ. 10,000/-** ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

4. <u>ಹೆರಿಗೆ ಭತ್ಯೆ ಸೌಲಭ್ಯ :</u> ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ತಲಾ ರೂ. **10,000/-** ಧನ ಸಹಾಯ ನೀಡಲಾಗುವುದು. ಮಗು ಜನಿಸಿದ 6 ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

<u>ಈ ಕೆಳಗಿನ ಯೋಜನೆಗಳಿಗೆ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18- 60</u>

5. <u>ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ :</u> ಈ ಯೋಜನೆಯ ಸೌಲಭ್ಯ ಪಡೆಯಲು ಮೃತರ ಕುಟುಂಬದ ಅವಲಂಬಿತರು ಕಾರ್ಮಿಕ ಮೃತಪಟ್ಟ ಆರು ತಿಂಗಳೊಳಗೆ ನಿಗದಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, ರೂ. **10,000/-** ಧನ ಸಹಾಯ ನೀಡಲಾಗುವುದು.

6. <u>ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ</u> : ನೋಂದಾಯಿತ ಕಾರ್ಮಿಕ ಸಂಘಟನೆಗಳು/ಸರ್ಕಾರೇತರ ಸಂಸ್ಥೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ ರೂ. **1,00,000/-** ಧನ ಸಹಾಯ ನೀಡಲಾಗುವುದು.

7. <u>ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ :</u> ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ ರೂ. **1,00,000/-** ಧನ ಸಹಾಯ ನೀಡಲಾಗುವುದು.

<u>ಧನ ಸಹಾಯವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್ ಮೂಲಕ ಜಮಾ ಮಾಡಲಾಗುವುದು</u>

ಅನುಬಂಧ-4

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 433

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ-2019-20ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಕಲ್ಯಾಣ ಯೋಜನೆಗಳಡಿ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ನೀಡಿರುವ ವಿವಿಧ ಸೌಲಭ್ಯಗಳ ವಿವರ ಈ ಕೆಳಕಂಡಂತಿರುತ್ತದೆ.

	ವರ್ಷ	2019-20		2020-21		2021-22	
ಕ್ರಸಂ	ಯೋಜನೆಗಳ ವಿವರ	ಫಲಾನುಭವಿ ಸಂಖ್ಯೆ	ಮೊತ್ತ (ರೂ.ಗಳಲ್ಲಿ)	ಫಲಾನುಭವಿ ಸಂಖ್ಯೆ	ಮೊತ್ತ (ರೂ.ಗಳಲ್ಲಿ)	ಫಲಾನುಭವಿ ಸಂಖ್ಯೆ	ಮೊತ್ತ (ರೂ.ಗಳಲ್ಲಿ)
1	ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ	26,257	10,51,98,000	13,729	6,01,48,000	10745	4,51,76,000
2	ವೈದ್ಯಕೀಯ ನೆರವು.	5	45,252	7	70,000	3	30,000
3	ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ.	295	14,75,000	387	19,35,000	540	33,30,000
4	ಕಾರ್ಮಿಕರ ಅಪಘಾತ ಧನ ಸಹಾಯ ಎಂ.ಎಂ. ಫುಡ್ ಪ್ರಾಡಕ್ಟ್ ಮಾಗಡಿ ರಸ್ತೆ ಬೆಂಗಳೂರು	-	-	3	6,03,000	2 4	15,000 12,00,000
5	ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ	-	-	-	-	20	2,00,000
6	ವೈದ್ಯಕೀಯ ತಪಾಸಣಾ ಶಿಬಿರ	400 (2 ಸಂಘಟನೆ)	60,000	401 (2 ಸಂಘಟನೆ)	60,000	824 (2 ಸಂಘಟನೆ)	2,00,000
7	ವಾರ್ಷಿಕ ಕ್ರೀಡಾ ಚಟುವಟಿಕೆ	600 (2 ಸಂಘಟನೆ)	1,00,000	-	-	-	-
	ಒಟ್ಟು	**27,557**	**10,68,78,252**	**14,527**	**6,28,16,000**	**12,138**	**5,01,51,000**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 434
ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ನೂತನ ಕೆ.ಎಸ್.ಆರ್.ಟಿ.ಸಿ. ಬಸ್ ಘಟಕ ನಿರ್ಮಿಸಲು ಈಗಾಗಲೇ ಜಾಗವನ್ನು ಗುರುತಿಸಿದ್ದು, ಇದುವರೆಗೂ ಘಟಕ ಸ್ಥಾಪನೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ; ಕಾರಣವೇನು; ಯಾವಾಗ ಘಟಕ ಸ್ಥಾಪಿಸಲಾಗುತ್ತದೆ? (ಪೂರ್ಣ ವಿವರ ನೀಡುವುದು)	ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಬಸವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 1/1ರಲ್ಲಿ 4 ಎಕರೆ ನಿವೇಶನವನ್ನು ಕ.ರಾ.ರ.ಸಾ.ನಿಗಮದ ವಶಕ್ಕೆ ಪಡೆಯಲಾಗಿದೆ. ಕೋವಿಡ್-19ರ ಸಾಂಕ್ರಾಮಿಕ ರೋಗದ ಪಿಡುಗಿನಿಂದಾಗಿ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಯಾವುದೇ ಹೊಸ ನಿರ್ಮಾಣ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತುಂಬಾ ಕಷ್ಟಕರವಾಗಿರುತ್ತದೆ. ಆದಾಗ್ಯೂ, ಮುಂದಿನ ದಿನಗಳ ಸಾರಿಗೆ ಅವಶ್ಯಕತೆಯ ದೃಷ್ಟಿಯಿಂದ ನಿವೇಶನವನ್ನು ಪಡೆಯಲಾಗಿದ್ದು, ನಿಗಮದ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ ಘಟಕ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು. ಪ್ರಸ್ತುತ ಕುಶಾಲನಗರ ಭಾಗದ ಸಾರಿಗೆ ಅವಶ್ಯಕತೆಗಳನ್ನು ಮಡಿಕೇರಿ ಘಟಕ, ಪಿರಿಯಪಟ್ಟಣ ಘಟಕ ಮತ್ತು ಮೈಸೂರು ಘಟಕಗಳಿಂದ ಪೂರೈಸಲಾಗುತ್ತಿದೆ.

ಸಂಖ್ಯೆ: ಟಿಡಿ 180 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	435
ಮಾನ್ಯ ಸದಸ್ಯರ ಹೆಸರು	ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ (ಮಡಿಕೇರಿ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	1 ರಿಂದ 10ನೇ ತರಗತಿವರೆಗೆ ಹೊಸದಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕಳೆದ ಎರಡು ವರ್ಷಗಳಿಂದ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು;	ಹೌದು; ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಕಳೆದ ಎರಡು ವರ್ಷಗಳಲ್ಲಿ (2020-21 ಹಾಗೂ 2021-22) 1 ರಿಂದ 10 ನೇ ತರಗತಿವರೆಗೆ ಹೊಸದಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಅನುದಾನದ ಕೊರತೆಯಿಂದ ವಿದ್ಯಾರ್ಥಿ ವೇತನವನ್ನು ಪಾವತಿ ಮಾಡಿರುವುದಿಲ್ಲ. ಕಳೆದ ಎರಡು ವರ್ಷಗಳಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮಗಳಡಿ ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿದ್ದು ಅದರಂತೆ ವಿನಿಯೋಗಿಸಲಾಗಿರುವ ವಿವರಗಳು ಈ ಕೆಳಕಂಡಂತಿವೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು	ವರ್ಷ	ಒದಗಿ ಸಿದ ಅನುದಾನ	ಸ್ವೀಕೃತ ವಾದ ಅರ್ಜಿ ಗಳ ಸಂಖ್ಯೆ	ಮಂಜೂರಾ ದ ಅನುದಾನ	ಮಂಜೂರಾದ ವಿದ್ಯಾರ್ಥಿ ಗಳ ಸಂಖ್ಯೆ
1.	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	2020-21	103.79	1796904	105.34	1122409
		2021-22	75.49	1577562	81.91	862546

- 2020-21ನೇ ಸಾಲಿನಲ್ಲಿ ಅನುದಾನದ ಕೊರತೆಯಿಂದ 6ನೇ ತರಗತಿಯಿಂದ 10ನೇ ತರಗತಿಯವರೆಗಿನ ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗಿರುತ್ತದೆ.

- 2021-22ರಲ್ಲಿ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಅನುದಾನ ಲಭ್ಯತೆಯಿಲ್ಲದೆಯಿರುವ ಪ್ರಯುಕ್ತ ಕೇವಲ 7 ರಿಂದ 10ನೇ ತರಗತಿಯ ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿವೇತನ ಮಂಜೂರು ಮಾಡಲಾಗಿರುತ್ತದೆ.

ಆ)	ಈ ಹಿಂದೆ ಪಿ.ಯು.ಸಿ ಮೇಲ್ಪಟ್ಟವರಿಗೆ ಶುಲ್ಕ ವಿನಾಯಿತಿ ಮತ್ತು ವಿದ್ಯಾರ್ಥಿ ವೇತನ ಸಹ ದೊರೆಯುತ್ತಿದ್ದು, ಪ್ರಸ್ತುತ ಶುಲ್ಕ ವಿನಾಯಿತಿ ಮಾತ್ರ ಇದ್ದು, ವಿದ್ಯಾರ್ಥಿ ವೇತನ ನಿಂತುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿಯೇ; ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಲು ಕಾರಣವೇನು; ಯಾವಾಗ ಮುಂದುವರೆಸಲಾಗುವುದು; (ಪೂರ್ಣ ವಿವರ ನೀಡುವುದು)	ಹೌದು; ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಳೆದ ಎರಡು ವರ್ಷಗಳಲ್ಲಿ (2020-21 ಹಾಗೂ 2021-22) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದಿಲ್ಲ. ಕಳೆದ ಎರಡು ವರ್ಷಗಳಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಕಡಿಮೆ ಅನುದಾನ ನಿಗದಿಯಾಗಿದ್ದು, ಹೆಚ್ಚು ಅರ್ಜಿಗಳು ಸ್ವೀಕೃತವಾಗಿರುತ್ತವೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಶುಲ್ಕ ಮರುಪಾವತಿ ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾಗಿರುತ್ತದೆ. ಆದ ಕಾರಣದಿಂದ 2020-21 ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ರೂ.140.00 ಕೋಟಿಗಳು ಹಾಗೂ 2021-22ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ರೂ.50.00 ಕೋಟಿಗಳನ್ನು ಸರ್ಕಾರದ ಆದೇಶದಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕೆ ವಿನಿಯೋಗಿಸಿಕೊಳ್ಳಲಾಗಿರುತ್ತದೆ.
ಇ)	ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವ್ಯಾಸಂಗ ಮಾಡಿ ತೇರ್ಗಡೆ ಹೊಂದಿ ಶೇಕಡಾ 90 ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುತ್ತಿದ್ದು, ಕಳೆದ ಎರಡು ವರ್ಷಗಳಿಂದ ಪ್ರತಿಭಾ ಪುರಸ್ಕಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು;	ಹೌದು; ಅನುದಾನ ಲಭ್ಯತೆಯಿಲ್ಲದ ಕಾರಣ ಕಳೆದ ಎರಡು ವರ್ಷಗಳಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದಿಲ್ಲ. 2022-23ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮಕ್ಕಾಗಿ ಅನುದಾನ ಲಭ್ಯವಿದ್ದು, ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುತ್ತಿದೆ.
ಈ)	ಕೊಡಗು ಜಿಲ್ಲೆ, ಕುಶಾಲನಗರದಲ್ಲಿ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಸಲ್ಲಿಸುತ್ತಿದ್ದು ಇವರಿಗೆ ಹೆಚ್ಚುವರಿ ವಿದ್ಯಾರ್ಥಿ ನಿಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೊಸದಾಗಿ ವಿದ್ಯಾರ್ಥಿ ನಿಲಯ ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ಪೂರ್ಣ ವಿವರ ನೀಡುವುದು)	ಕೊಡಗು ಜಿಲ್ಲೆಯ ಕುಶಾಲನಗರ ಟೌನಿನಲ್ಲಿ 3 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಗಳಿದ್ದು ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ನಿಲಯದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಕೊಡಗು ಜಿಲ್ಲೆ ಕುಶಾಲ ನಗರಕ್ಕೆ ಹೊಸ ವಿದ್ಯಾರ್ಥಿ ನಿಲಯ ಮಂಜೂರಾತಿ ಕೋರಿ ಜಿಲ್ಲೆಯಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ ಹೊಸ ವಿದ್ಯಾರ್ಥಿ ನಿಲಯ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಭಿಸಿರುತ್ತದೆ.

ಸಂಖ್ಯೆ: ಬಿಸಿಡಬ್ಲ್ಯೂ 519 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**436**
ಸದಸ್ಯರ ಹೆಸರು	:	**ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)**
ಉತ್ತರಿಸುವ ದಿನಾಂಕ	:	**14-09-2022**
ಉತ್ತರಿಸುವ ಸಚಿವರು	:	**ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿ ಎಷ್ಟು ಎಕರೆ ಜಾಗವನ್ನು ಅಂಬೇಡ್ಕರ್ ಭವನಕ್ಕಾಗಿ ಮೀಸಲಿಡಲಾಗಿದೆ; ಕಾಯ್ದಿರಿಸಿದ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ಸರ್ಕಾರ ಎಷ್ಟು ಅನುದಾನ ಮೀಸಲಿಡಲಕಾಗಿದೆ;	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 29 ಡಾ|| ಬಿ.ಆರ್. ಅಂಬೇಡ್ಕರ್ / ಡಾ|| ಬಾಬು ಜಗಜೀವನರಾಮ್ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಒಟ್ಟು ರೂ.724.00 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.692.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.31.50 ಲಕ್ಷಗಳನ್ನು ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. 29 ಭವನಗಳ ಪೈಕಿ 25 ಭವನಗಳ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, 04 ಭವನಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.
ಆ)	ಕುಶಾಲನಗರ ಮತ್ತು ಬಾಣಾವಾರ ಗ್ರಾಮಗಳಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಈಗಾಗಲೇ ಜಾಗ	2013-14ನೇ ಸಾಲಿನಲ್ಲಿ ಕುಶಾಲ ನಗರದಲ್ಲಿ ರೂ.60.00 ಲಕ್ಷಗಳ ವೆಚ್ಚದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡಲು

	ಕಾಯ್ದಿರಿಸಲಾಗಿದ್ದು, ಅನುದಾನ ಇಲ್ಲದೆ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಪೂರ್ಣ ವಿವರ ನೀಡುವುದು)	ಮಂಜೂರಾತಿ ನೀಡಿ, ಪೂರ್ಣ ಅನುದಾನವನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, ಬಾಣವಾರ ಗ್ರಾಮದಲ್ಲಿ ಹೋಬಳಿ ಮಟ್ಟದ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡುವ ಪ್ರಸ್ತಾವನೆ ಸರ್ಕಾರದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಇ)	ಕೊಡಗು ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ವಸತಿ ನಿಲಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಚಿಕ್ಕಳುವಾರ ವಿಶ್ವ ವಿದ್ಯಾಲಯ ಮತ್ತು ಕುಶಾಲನಗರ ಇಂಜಿನಿಯರ್ ಕಾಲೇಜಿನಲ್ಲಿ ನೂತನವಾಗಿ ವಿದ್ಯಾರ್ಥಿಗಳ ವಸತಿ ನಿಲಯ ಮಂಜೂರಾತಿಗಾಗಿ ಈ ಹಿಂದೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈವರೆವಿಗೂ ವಿದ್ಯಾರ್ಥಿ ನಿಲಯ ಮಂಜೂರಾತಿಯಾಗಿರುವುದಿಲ್ಲ ಕಾರಣವೇನು?	ಹೌದು. ಸಮಾಜ ಕಲ್ಯಾಣ ಇಲಾಖೆಯ 27 ಮೆಟ್ರಿಕ್ ಪೂರ್ವ ಮತ್ತು 81 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಮಂಜೂರಾತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಈ ಕೆಳಕಂಡಂತೆ ಹಿಂಬರಹ ನೀಡಿರುತ್ತದೆ. "Proposal of Administrative Department has been examined. As it was suggested during the preparation of the budget itself that new Hostels or Schools cannot be sanctioned this year due to fiscal stress. Finance Department regrets to the proposal of AD."

ಸಕಇ 579 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 437
ಮಾನ್ಯ ಸದಸ್ಯರ ಹೆಸರು : ಶ್ರೀ ಕುಮಾರ್ ಬಂಗಾರಪ್ಪ ಎಸ್
ಉತ್ತರಿಸುವ ದಿನಾಂಕ : 14-09-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ 18 ವಸತಿ ನಿಲಯಗಳಿದ್ದು, ಸದರಿ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 16 ಪರಿಶಿಷ್ಟ ಜಾತಿಯ ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ ಪೈಕಿ 14 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳಲ್ಲಿ ಹಾಗೂ 02 ವಿದ್ಯಾರ್ಥಿ ನಿಲಯಗಳು ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸದರಿ 02 ವಿದ್ಯಾರ್ಥಿ ನಿಲಯಗಳಿಗೆ 2018-19ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೈಗೊಳ್ಳಲು ಈ ಕೆಳಕಂಡಂತೆ ಮಂಜೂರಾತಿ ನೀಡಲಾಗಿರುತ್ತದೆ. 1. ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕರ ವಿದ್ಯಾರ್ಥಿ ನಿಲಯ, ಸೊರಬ ಟೌನ್ – ರೂ.475.00 ಲಕ್ಷಗಳ ಅಂದಾಜು ಮೊತ್ತ. 2. ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಸೊರಬ ಟೌನ್ – ರೂ.625.00 ಲಕ್ಷಗಳ ಅಂದಾಜು ಮೊತ್ತ.
ಆ)	ಹಾಗಿದ್ದಲ್ಲಿ, ಸುರಕ್ಷತೆಯ ದೃಷ್ಟಿಯಿಂದ ಕಾಂಪೌಂಡ್ ನಿರ್ಮಾಣ, ಮಳೆಗಾಲದಲ್ಲಿ ವಿದ್ಯಾರ್ಥಿಗಳಿಗೆ ಸ್ನಾನಕ್ಕೆ ಬಿಸಿ ನೀರು ಒದಗಿಸಲು ವಿದ್ಯುತ್ ಗೀಜ್ಜರ್ ಹಾಗೂ ಇನ್ನಿತರ ವ್ಯವಸ್ಥೆ ಕಲ್ಪಿಸಲು ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸೊರಬ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ 16 ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳ ಪೈಕಿ 03 ವಿದ್ಯಾರ್ಥಿ ನಿಲಯಗಳಿಗೆ ಕಾಂಪೌಂಡ್ ಗೋಡೆಯನ್ನು ನಿರ್ಮಾಣ ಮಾಡಬೇಕಾಗಿದ್ದು, ಈ ಸಂಬಂಧವಾಗಿ, ಜಿಲ್ಲೆಯಿಂದ ಸೂಕ್ತ ಪ್ರಸ್ತಾವನೆ ಪಡೆದು ಅನುದಾನದ ಲಭ್ಯತೆಗೆ ಅನುಗುಣವಾಗಿ ನಿಯಮಾನುಸಾರ ಕ್ರಮವಹಿಸಲಾಗುವುದು. ಮುಂದುವರೆದು, ಬಿಸಿ ನೀರು ವ್ಯವಸ್ಥೆ ಕಲ್ಪಿಸುವ ಸಂಬಂಧವಾಗಿ ಸೋಲಾರ್ ವಾಟರ್ ಹೀಟರ್ ಹಾಗೂ ಗೀಜ್ಜರ್‌ಗಳನ್ನು ಒದಗಿಸಲಾಗಿರುತ್ತದೆ.
ಇ)	ಸಮಾಜ ಕಲ್ಯಾಣ ಇಲಾಖೆಗೆ ಸ್ವಂತ ಕಟ್ಟಡಕ್ಕೆ ಅನುದಾನ, ಕ್ಷೇತ್ರದಲ್ಲಿ ಅಂಬೇಡ್ಕರ್ ಭವನಗಳ ನಿರ್ಮಾಣಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಸರ್ಕಾರದ ಯಾವ ಹಂತದಲ್ಲಿದೆಯೇ;	ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಸೊರಬ ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ರೂ.5.00 ಕೋಟಿಗಳ ಅನುದಾನ ಬಿಡುಗಡೆ ಮಾಡುವಂತೆ ಮಾನ್ಯ ಶಾಸಕರು, ಸೊರಬ ವಿಧಾನಸಭಾ ಕ್ಷೇತ್ರರವರು ಕೋರಿರುತ್ತಾರೆ. ಈ ಸಂಬಂಧವಾಗಿ, 2022-23ನೇ ಸಾಲಿನಲ್ಲಿ ಇಲಾಖೆಯ ಕಛೇರಿಗಳ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಒದಗಿಸಿರುವುದಿಲ್ಲ. ಮುಂದುವರೆದು, ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇದುವರೆವಿಗೂ 34 ಡಾ|| ಬಿ.ಆರ್.ಅಂಬೇಡ್ಕರ್/ ಡಾ|| ಬಾಬು ಜಗಜೀವನ ರಾಂ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ರೂ.382.00 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.322.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳ ಪ್ರಗತಿಯನ್ನು ಆಧರಿಸಿ ಅನುದಾನ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

ಈ)	ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನರಿರುವ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಅವಶ್ಯವಿರುವ ಅನುದಾನ ಬಿಡುಗಡೆ ಮಾಡಲಾಗುವುದೇ?	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಠಾನ ಮಾಡುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಹೊರಡಿಸಲಾಗುವ ಮಂಜೂರಾತಿ ಆದೇಶಗಳಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

ಸಕಇ 509 ಪಕವಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 438

ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ ಎಸ್.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿರುವ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿ ಕೊಡುವ ದೃಷ್ಟಿಯಿಂದ ಬಸ್ ಘಟಕ (ಡಿಪೋ) ಮಂಜೂರಾತಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ;	ಸೊರಬದಲ್ಲಿ ಬಸ್ ಘಟಕ ನಿರ್ಮಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗಾಗಿ ಸೊರಬದಲ್ಲಿ ಬಸ್ ಡಿಪೋ ಹಾಗೂ ಸಾರಿಗೆ ನೌಕರರ ವಸತಿ ಗೃಹ ನಿರ್ಮಿಸಲು ಕ.ರಾ.ರ.ಸಾ.ನಿಗಮವು 9 ಎಕರೆ ನಿವೇಶನವನ್ನು ಹೊಂದಿರುತ್ತದೆ. ಸದರಿ ನಿವೇಶನಕ್ಕೆ ರೂ.75.00 ಲಕ್ಷಗಳ ವೆಚ್ಚದಲ್ಲಿ ಸುತ್ತುಗೋಡೆ ನಿರ್ಮಿಸುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.
ಆ.	ಬಸ್ ಡಿಪೋ ಹಾಗೂ ಸಾರಿಗೆ ನೌಕರರ ವಸತಿ ಗೃಹ ನಿರ್ಮಿಸಲು 9 ಎಕರೆ ಮಂಜೂರಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ.	ಆನವಟ್ಟಿಯಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸಲು 3 ಕೋಟಿ ರೂ. ಹಾಗೂ ಸೊರಬ ಬಸ್ ಘಟಕ (ಡಿಪೋ) ನಿರ್ಮಿಸುವ ಭೂಮಿಗೆ ಕಾಂಪೌಂಡ್ ನಿರ್ಮಿಸಲು 75 ಲಕ್ಷ ರೂಪಾಯಿ ಮಂಜೂರಾತಿಯಾಗಿ ಕಳೆದ ಒಂದು ವರ್ಷದಿಂದ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಅನವಟ್ಟಿಯಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು ಹಾಗೂ ಸೊರಬ ಬಸ್ ಘಟಕ ನಿರ್ಮಿಸುವ ನಿವೇಶನಕ್ಕೆ ಸುತ್ತುಗೋಡೆ ನಿರ್ಮಿಸಲು ಮರುಟೆಂಡರ್ ಆಹ್ವಾನಿಸಲಾಗಿರುತ್ತದೆ ಹಾಗೂ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಯಲ್ಲಿರುತ್ತದೆ.
ಈ.	ಸೊರಬ ತಾಲ್ಲೂಕಿನಲ್ಲಿ ಸಾರ್ವಜನಿಕರು ಗ್ರಾಮಾಂತರ ಪ್ರದೇಶದಲ್ಲಿ ಬಸ್‌ಗಳನ್ನು ಪ್ರಾರಂಭಿಸಲು ತೀವ್ರವಾಗಿ ಬೇಡಿಕೆಯನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸೊರಬ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ 275 ಗ್ರಾಮಗಳ ಪೈಕಿ, 229 ಗ್ರಾಮಗಳಿಗೆ ನಿಗಮದ ವತಿಯಿಂದ ಒಟ್ಟು 114 ಏಕಸುತ್ತುವಳಿಗಳಲ್ಲಿ ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಅಲ್ಲದೇ, ಖಾಸಗಿ ಪ್ರವರ್ತಕರ

		ಸಾರಿಗೆಗಳೂ ಸಹ ಈ ಭಾಗದಲ್ಲಿ ಆಚರಣೆಯಲ್ಲಿರುತ್ತವೆ. ಪ್ರಸ್ತುತ ಕಲ್ಪಿಸಲಾಗಿರುವ ಸಾರಿಗೆ ಸೌಲಭ್ಯವನ್ನು ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿರುತ್ತಾರೆ. ಸೊರಬ ತಾಲ್ಲೂಕಿನಲ್ಲಿ ಸಾರಿಗೆ ಸೌಲಭ್ಯ ಕೋರಿ 2021-22 ನೇ ಸಾಲಿನಿಂದ ಈವರೆಗೆ 15 ಬೇಡಿಕೆಗಳನ್ನು ಸ್ವೀಕರಿಸಲಾಗಿದ್ದು, 03 ಬೇಡಿಕೆಗಳ ಬಗ್ಗೆ ಕ್ರಮವಹಿಸಲಾಗಿದೆ. ವಿವರಗಳನ್ನು **ಅನುಬಂಧ- "ಅ"**ರಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 181 ಟಿಸಿಕ್ಯೂ 2022

(ಬಿ. ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು

ಅನುಬಂಧ-"ಅ"

2021-22 ನೇ ಸಾಲಿನಿಂದ ಇಲ್ಲಿಯವರೆಗೂ ಮಾನ್ಯ ಶಾಸಕರು, ಸೊರಬ ತಾಲ್ಲೂಕು ರವರು ಸೊರಬ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಬಂದಿರುವ ಬೇಡಿಕೆಗಳ ವಿವರ

ಕ್ರ. ಸಂ	ಜನಪ್ರತಿನಿಧಿಗಳ ಹೆಸರು	ಕೋರಿಕೆ ಬಂದಿರುವ ದಿನಾಂಕ	ಸಾರಿಗೆ ಸೌಲಭ್ಯ ಕೋರಿರುವ ಮಾರ್ಗ	ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ/ಇಲ್ಲ	ಷರಾ
1	ಶ್ರೀ ಎಸ್ .ಕುಮಾರ ಬಂಗಾರಪ್ಪ . ಮಾನ್ಯ ಶಾಸಕರು	23.07.2022	ಸೊರಬ ಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನದ ಬಳಿ ವಾಹನಗಳನ್ನು 5 ನಿಮಿಷ ನಿಲುಗಡೆ ಮಾಡುವ ಬಗ್ಗೆ	ವಿಭಾಗದ ವಾಹನಗಳು ನಿಲುಗಡೆ ನೀಡುವಂತೆ ಸೂಚನೆ ನೀಡಲಾಗಿದೆ.	
2		23.07.2022	ಶಿರಸಿ-ಸೊರಬ ಮಾರ್ಗವಾಗಿ ಮೈಸೂರಿಗೆ ಸಾರಿಗೆ ಸೌಲಭ್ಯ	ವಾಕರಸಾ ಸಂಸ್ಥೆಯ ಯಲ್ಲಾಪುರ ಘಟಕದ ಯಲ್ಲಾಪುರ-ಶಿರಸಿ-ಸೊರಬ-ಮೈಸೂರು ಮಾರ್ಗದ ಸಾರಿಗೆಯನ್ನು ಪ್ರಾರಂಭಿಸಿ ಹಾಲಿ ರದ್ದುಗೊಳಿಸಲಾಗಿದೆ.	
3		23.07.2022	ಆನವಟ್ಟಿ-ಹಿರೇಮಾಗಡಿ ಮಾರ್ಗವಾಗಿ ಚಿಕ್ಕೇರಿಗೆ ಸಾರಿಗೆ	ಶಿವಮೊಗ್ಗದಿಂದ ಶಿಕಾರಿಪುರ-ಶಿರಾಳಕೊಪ್ಪ-ತೊಗರ್ಸಿ-ಹಿರೇಮಾಗಡಿ ಮಾರ್ಗವಾಗಿ ಚಿಕ್ಕೇರಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.	
4		27.07.2022	ಆನವಟ್ಟಿ ಕಾಲೇಜು ಅವಧಿಗೆ ಸೊರಬಯಿಂದ, ಸಾಗರದಿಂದ , ಜಡೆಯಿಂದ ಸಾರಿಗೆ ಸೌಲಭ್ಯ	ಇಲ್ಲ	ಸಾಗರ-ಆನವಟ್ಟಿ-ಜಡೆ-ಆನವಟ್ಟಿ, ಸೊರಬ-ಆನವಟ್ಟಿ-ಜಡೆ, ಆನವಟ್ಟಿ-ಸಾಗರ ಮಾರ್ಗವಾಗಿ ಸಾಗರ ಘಟಕದಿಂದ ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತವೆ.ಹೆಚ್ಚುವರಿಯಾಗಿ ಸರತಿಗಳ ಸಾರಿಗೆ ಸೌಲಭ್ಯ ನೀಡುವಂತೆ ಕೋರಿರುತ್ತಾರೆ
5		04.08.2022	ಸೊರಬದಿಂದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಬಸ್ ಸೌಲಭ್ಯ	ಇಲ್ಲ	ಸೊರಬ-ಶಿರಾಳಕೊಪ್ಪ-ಶಿವಮೊಗ್ಗ ಮಾರ್ಗದಲ್ಲಿ 05 ದುಂಡು ಸುತ್ತುವಳಿಗಳು, ಸೊರಬ-ಸಾಗರ ಹಾಗೂ ಶಿರಾಳಕೊಪ್ಪ-ಶಿಕಾರಿಪುರ ಮಾರ್ಗವಾಗಿ ಶಿವಮೊಗ್ಗಕ್ಕೆ ಪ್ರತಿ 30 ನಿಮಿಷಕ್ಕೆ ನಿಗಮದ ಸಾರಿಗೆಗಳು ಕಾರ್ಯಾಚರಣೆಯಲ್ಲಿದ್ದು, ಶಿವಮೊಗ್ಗದಿಂದ ಮಣಿಪಾಲ್ -ಸುಬ್ರಮಣ್ಯ-ಮಂಗಳೂರಿಗೆ ಸಾಕಷ್ಟು ಸಾರಿಗೆಗಳು ಕಾರ್ಯಾಚರಣೆಯಾಗುತ್ತಿವೆ. ಹೆಚ್ಚುವರಿಯಾಗಿ ಸರತಿಗಳ ಸಾರಿಗೆ ಸೌಲಭ್ಯ ನೀಡುವಂತೆ ಕೋರಿರುತ್ತಾರೆ

2021-22 ನೇ ಸಾಲಿನಿಂದ ಇಲ್ಲಿಯವರೆಗೂ ಸಾರ್ವಜನಿಕರಿಂದ ಸೊರಬ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಬಂದಿರುವ ಬೇಡಿಕೆಗಳ ವಿವರ

ಕ್ರ. ಸಂ	ಜನಪ್ರತಿನಿಧಿಗಳು/ ಸಾರ್ವಜನಿಕರು	ಕೋರಿಕೆ ಬಂದಿರುವ ದಿನಾಂಕ	ಸಾರಿಗೆ ಸೌಲಭ್ಯ ಕೋರಿರುವ ಮಾರ್ಗ	ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ/ಇಲ್ಲ	ಷರಾ
1	ಹಿರಿಯ ಸಿವಿಲ್ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ	16.06.2021	ಶಿವಮೊಗ್ಗದಿಂದ ಸೊರಬ ಮುಖಾಂತರ ಹಾವೇರಿ, ಬ್ಯಾಡಗಿ ಹಾಗೂ ರಾಣೆಬೆನ್ನೂರು ಮಾರ್ಗವಾಗಿ ಸಾರಿಗೆ	ಇಲ್ಲ	ವಾಕರಸಾ ಸಂಸ್ಥೆಯ ಸಾರಿಗೆಗಳು ಕಾರ್ಯಾಚರಣೆಯಾಗುತ್ತವೆ.
2	ಗ್ರಾಮ ಪಂಚಾಯಿತಿ ಕಾರ್ಯಾಲಯ, ಶಿಗ್ಗಾ	23.03.2021	ಸೊರಬದಿಂದ ಇಂಡುವಳ್ಳಿ ಕ್ರಾಸ್‌ವರೆಗೆ ಸಾರಿಗೆ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ
3	ಶಿವಾನಂದಪ್ಪ ಸದಸ್ಯರು , ಜಿಲ್ಲಾ ಪಂಚಾಯಿತಿ, ಶಿವಮೊಗ್ಗ, ಉಳವಿ ಕ್ಷೇತ್ರ	23.03.2021	ಸೊರಬದಿಂದ ಇಂಡುವಳ್ಳಿ ಕ್ರಾಸ್‌ವರೆಗೆ ಸಾರಿಗೆ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ
4	ಹಾಲಗಳಲೆ ಹೆಗ್ಗೋಡು ಗ್ರಾಮಸ್ಥರು	23.03.2021	ಕುಂಭತ್ತಿಹಳ್ಳಿ-ಶಿಗ್ಗಾ-ಕುಂದಗಸವಿ-ಇಂಡುವಳ್ಳಿ ಕ್ರಾಸ್ ವರೆಗೆ ಸಾರಿಗೆ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ
5	ಗೋಪಾಲಕೃಷ್ಣ , ಚಿಟ್ಟೂರು	10.02.2022	ಸಾಗರ-ಉಳವಿ-ಇಂಡುವಳ್ಳಿ-ಚಿಟ್ಟೂರು-ಶಿಕಾರಿಪುರ ಮಾರ್ಗವಾಗಿ ಸಾರಿಗೆ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ
6	ಗ್ರಾಮಸ್ಥರು , ಚಿತ್ರಟ್ಟೆಹಳ್ಳಿ, ಓಟೂರು, ಮಳಗಿ ಕೂರ್ಲಿ, ಮಳಲಿಕೊಪ್ಪ	05.05.2022	ಸೊರಬದಿಂದ ಮಾಳೆಕೊಪ್ಪ, ಬೆಟ್ಟದ ಕೂರ್ಲಿ ಮಾರ್ಗವಾಗಿ ಆನವಟ್ಟಿಗೆ ಸಾರಿಗೆ	ಇಲ್ಲ	ಸಾಗರ ಘಟಕದಿಂದ 04 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಹೆಚ್ಚುವರಿಯಾಗಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿರುತ್ತಾರೆ.
7	ಗ್ರಾಮಸ್ಥರು , ಶಿಡ್ಡಿಹಳ್ಳಿ & ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗೆಂಡ	05.05.2022	ಶಿಡ್ಡಿಹಳ್ಳಿ ಗ್ರಾಮಕ್ಕೆ ಸಾರಿಗೆ	ಇಲ್ಲ	ಪರವಾನಗಿಗಾಗಿ ಅರ್ಜಿ ಆರ್.ಟಿ.ಎ ಗೆ ಸಲ್ಲಿಸಲಾಗಿದೆ.
8	ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸೊರಬ	14.06.2022	ಜಡೆ ಗ್ರಾಮಕ್ಕೆ ಸೂರಣಗಿ, ಮೇಲಿನ ಗೋಮಾಳ, ಕಮರೂರು, ಕಲ್ಕೊಪ್ಪ, ಬಂಕವಳ್ಳಿ ತಲಗಡ್ಡೆ ಮಾರ್ಗವಾಗಿ ಸಾರಿಗೆ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ
9	ಉಪ ಪ್ರಾಚಾರ್ಯರು, ಕರ್ನಾಟಕ ಪಬ್ಲಿಕ್ ಸ್ಕೂಲ್ , ಅನವಟ್ಟಿ	27.06.2022	ಆನವಟ್ಟಿಯಿಂದ ತಿಳುವಳ್ಳಿಗೆ ಸಾರಿಗೆ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ
10	ವೈಶಾಲಿ ಎಂ. ಎಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್	07.07.2022	ಹರೀಶಿಯಿಂದ ಬನವಾಸಿಗೆ ಸಾರಿಗೆ ಸೌಲಭ್ಯ	ಇಲ್ಲ	ಖಾಸಗಿ ವಾಹನಗಳ ಕಾರ್ಯಾಚರಣೆಯಾಗುತ್ತವೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**439**
ಮಾನ್ಯ ಸದಸ್ಯರ ಹೆಸರು	ಶ್ರೀ ಕುಮಾರ ಬಂಗಾರಪ್ಪ ಎಸ್ (ಸೊರಬ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಡಾ: ನಂಜುಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕು ಹಾಗೂ ತಾಳಗುಪ್ಪ ಹೋಬಳಿಯಲ್ಲಿ ಇಲಾಖೆಯ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ಕಟ್ಟಡಗಳು ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಮಳೆಗಾಲದಲ್ಲಿ ವಿದ್ಯಾರ್ಥಿಗಳು ತಣ್ಣೀರು ಸ್ನಾನ ಮಾಡುತ್ತಿರುವುದು, ಶೌಚಾಲಯಗಳ ಕೊರತೆ ಮಂಚ ಮತ್ತು ಹಾಸಿಗೆಗಳ ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಸೊರಬ ತಾಲ್ಲೂಕು ಮತ್ತು ತಾಳಗುಪ್ಪ ಹೋಬಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 24 ನಿಲಯಗಳ ಪೈಕಿ 16 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ, 3 ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡಗಳಲ್ಲಿ ಹಾಗೂ 5 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೆಲವೊಂದು ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುತ್ತದೆ. 24 ವಿದ್ಯಾರ್ಥಿನಿಲಯಗಳ ಪೈಕಿ 9 ವಿದ್ಯಾರ್ಥಿನಿಲಯಗಳ ಮೇಲ್ಛಾವಣಿಗೆ ಶೀಟ್ ಅಳವಡಿಸಲಾಗಿರುತ್ತದೆ.22 ವಿದ್ಯಾರ್ಥಿನಿಲಯಗಳಲ್ಲಿ ಸೋಲಾರ್ ವಾಟರ್ ಹೀಟರ್ ಲಭ್ಯತೆಯಿದ್ದು, ಮಳೆಗಾಲದಲ್ಲಿ ಬಿಸಿ ನೀರಿನ ವ್ಯವಸ್ಥೆಗೆ 5 ವಿದ್ಯಾರ್ಥಿನಿಲಯಗಳಲ್ಲಿ ಗೀಸರ್ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಮೂಲಭೂತ ಸೌಕರ್ಯಗಳ ಕೊರತೆಯಿರುವ ವಿದ್ಯಾರ್ಥಿನಿಲಯಗಳಿಗೆ ಆಯಾ ಆರ್ಥಿಕ ವರ್ಷದ ಅಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಗನುಗುಣವಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು.
ಇ)	ಬಂದಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು;	

ಈ)	ಕ್ಷೇತ್ರದ ಅನವಟ್ಟಿಯಲ್ಲಿ ಹತ್ತು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವಿಧ್ಯಾಭ್ಯಾಸ ಮಾಡುತ್ತಿದ್ದು, ವಸತಿ ನಿಲಯಗಳ ತೀವ್ರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಸೊರಬ ಕ್ಷೇತ್ರದ ಅನವಟ್ಟಿಯಲ್ಲಿ ಹಿಂದುಳಿದ ವರ್ಗಗಳ 6 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 540 ಮಂಜೂರಾತಿ ಸಂಖ್ಯೆ ಇದ್ದು, ಪ್ರಸಕ್ತ ಸಾಲಿಗೆ 930 ಅರ್ಜಿಗಳು ಸ್ವೀಕೃತವಾಗಿರುತ್ತವೆ ಹಾಗೂ 390 ಅರ್ಜಿಗಳು ಉಳಿಕೆಯಾಗಿರುತ್ತವೆ. ಪ್ರಸ್ತುತ ಪದವಿ ಕೋರ್ಸಿನ ವಿದ್ಯಾರ್ಥಿಗಳ ಪ್ರವೇಶಕ್ಕೆ ಆನ್ ಲೈನ್ ಅರ್ಜಿ ಅಹ್ವಾನ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.
ಉ)	ಬಂದಿದ್ದಲ್ಲಿ, ನೂತನ ವಸತಿ ನಿಲಯಗಳ ಮಂಜೂರಾತಿಗೆ ಕ್ರಮ ವಹಿಸಲಾಗುವುದೇ?	ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಭಿಸಿರುತ್ತದೆ.

ಸಂಖ್ಯೆ: ಹಿಂವಕ 537 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	509
ಸದಸ್ಯರ ಹೆಸರು	:	ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಲಾಖಾ ವತಿಯಿಂದ ಮಂಜೂರಾಗಿರುವ ವಿವಿಧ ಸಮುದಾಯ ಭವನಗಳ ನಿರ್ಮಾಣ ಕಾರ್ಯ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2009-10 ರಿಂದ ಇದುವರೆವಿಗೂ ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 92 ಡಾ|| ಬಿ.ಆರ್. ಅಂಬೇಡ್ಕರ್ ಭವನ ಹಾಗೂ ಡಾ|| ಬಾಬು ಜಗಜೀವನ್ ರಾಂ ಭವನಗಳ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ಈ ಪೈಕಿ 59 ಭವನಗಳ ಕಾಮಗಾರಿ ಪೂರ್ಣಗೊಂಡಿರುತ್ತದೆ. 32 ಭವನಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, 01 ಭವನದ ಕಾಮಗಾರಿಯನ್ನು ಪ್ರಾರಂಭಿಸುವುದು ಬಾಕಿ ಇರುತ್ತದೆ.
ಆ)	ಬಂದಿದ್ದರೆ ಕುಂಠಿತಗೊಳ್ಳಲು ಕಾರಣವೇನು; ಯಾವಾಗ ಭವನ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗುವುದು;	ಈ ಸಂಬಂಧವಾಗಿ ರೂ.1627.00 ಲಕ್ಷಗಳಿಗೆ ಮಂಜೂರಾತಿ ನೀಡಿ, ರೂ.1574.20 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.52.80 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಆಧರಿಸಿ ಜಿಲ್ಲೆಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ.

ಇ)	ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ವಿವಿಧ ಭವನಗಳೆಷ್ಟು? (ಗ್ರಾಮವಾರು, ಪ್ರಗತಿವಾರು ಸಂಪೂರ್ಣ ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಿಂದ ಅರಸೀಕೆರೆ ವಿಧಾನಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಭವನಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿರುವುದಿಲ್ಲ.

ಸಕಇ 578 ಎಸ್ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	510
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಲಿಂಗೇಗೌಡ ಕೆ.ಎಂ, (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಪ್ರಸಕ್ತ ಸಾಲಿನ ವಿದ್ಯಾರ್ಥಿ ನಿಲಯಗಳಲ್ಲಿ ಬಯೋಮೆಟ್ರಿಕ್ ವಿಧಾನವನ್ನು ಜಾರಿಗೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಬಯೋಮೆಟ್ರಿಕ್ ಅಳವಡಿಸಲು ಕಾರಣವೇನು;	ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿನ ಸಮರ್ಪಕ ನಿರ್ವಹಣೆ ಹಾಗೂ ನಿಲಯಗಳಲ್ಲಿನ ನಿಲಯಾರ್ಥಿಗಳ ಹಾಜರಾತಿಯನ್ನು ಪಡೆಯುವ ದೃಷ್ಟಿಯಿಂದ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿರುತ್ತದೆ.
ಇ)	ಪ್ರಸಕ್ತ ಸಾಲಿನಲ್ಲಿ ಹಾಸ್ಟೆಲ್ ಪ್ರವೇಶಾತಿ ಆಯ್ಕೆಗೆ ಸಂಬಂಧಿಸಿದಂತೆ ಸ್ಥಳೀಯ ಶಾಸಕರನ್ನು ಕೈ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಶಾಸಕರನ್ನು ಕೈ ಬಿಡಲು ಕಾರಣವೇನು? (ಮಾಹಿತಿ ನೀಡುವುದು)	ಹೌದು. ಪ್ರಸಕ್ತ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್ ಲೈನ್ ಮೂಲಕ ಸಿ.ಇ.ಟಿ ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 230 ಬಿಎಂಎಸ್ 2022 ದಿನಾಂಕ:21-06-2022 ರಲ್ಲಿ ಪರಿಷ್ಕೃತ ಪ್ರವೇಶ ನಿಯಮಾವಳಿಗಳನ್ನು ಹೊರಡಿಸಲಾಗಿದ್ದು, ಸದರಿ ನಿಯಮಾವಳಿಗಳ ಪ್ರಕಾರ ತಾಲ್ಲೂಕುವಾರು ಆನ್-ಲೈನ್ ಅರ್ಜಿಗಳನ್ನು ಆಹ್ವಾನಿಸಿ, ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ ಕೌನ್ಸಿಲಿಂಗ್ ಮೂಲಕ ಪ್ರವೇಶ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸಂಖ್ಯೆ: ಬಿಸಿಡಬ್ಲ್ಯೂ 518 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	511
ಸದಸ್ಯರ ಹೆಸರು	ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ)
ಉತ್ತರಿಸುವ ದಿನಾಂಕ	14-09-2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಪ್ರಸಕ್ತ ಸಾಲಿನಲ್ಲಿ ಅರಸೀಕೆರೆ ಕ್ಷೇತ್ರದಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ಬೆಳೆ ಎಷ್ಟು: (ಹೋಬಳಿವಾರು, ಹೆಕ್ಟೇರ್‌ವಾರು, ಬೆಳೆವಾರು ಸಂಪೂರ್ಣ ಮಾಹಿತಿ ನೀಡುವುದು)	2022-23 ನೇ ಸಾಲಿನಲ್ಲಿ ಅರಸೀಕೆರೆ ಕ್ಷೇತ್ರದಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ಬೆಳೆವಾರು, ಹೋಬಳಿವಾರು, ಹೆಕ್ಟೇರ್‌ವಾರು, ಸಂಪೂರ್ಣ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ
ಆ)	ಕಳೆದ ಮೂರು ತಿಂಗಳುಗಳಿಂದ ಸುರಿದ ಮಳೆಗೆ ಎಷ್ಟು ಪ್ರಮಾಣದ ಬೆಳೆ ನಷ್ಟವಾಗಿದೆ: (ಹೋಬಳಿವಾರು ಮಾಹಿತಿ ನೀಡುವುದು)	ಕಳೆದ ಮೂರು ತಿಂಗಳುಗಳಿಂದ ಸುರಿದ ಮಳೆಯಿಂದ ಆದ ಬೆಳೆನಷ್ಟದ ವಿವರವನ್ನು ಹೋಬಳಿವಾರು ಅನುಬಂದ-2 ರಲ್ಲಿ ನೀಡಲಾಗಿದೆ.
ಇ)	ಬೆಳೆ ನಷ್ಟವಾದ ಎಲ್ಲಾ ರೈತರುಗಳಿಗೆ ಪರಿಹಾರ ಅಥವಾ ವಿಮಾ ಹಣ ದೊರೆತಿದೆಯೇ (ಮಾಹಿತಿ ನೀಡುವುದು)	ಬೆಳೆ ನಷ್ಟವಾದ ಎಲ್ಲಾ ರೈತರುಗಳಿಗೆ ಪರಿಹಾರವನ್ನು ಕಂದಾಯ ಇಲಾಖೆಯ ವತಿಯಿಂದ ನೀಡಲಾಗುತ್ತದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ 2022ರ ಮುಂಗಾರು ಹಂಗಾಮಿನಲ್ಲಿ ಅರಸೀಕೆರೆ ಕ್ಷೇತ್ರದಲ್ಲಿ ದಿನಾಂಕ:16.09.2022 ರಂದು ನೋಂದಣಿ ಕಾರ್ಯ ಮುಕ್ತಾಯವಾಗಿದ್ದು, ಬೆಳೆ ನಷ್ಟದ ಕುರಿತು ರೈತರಿಂದ ಯಾವುದೇ ಮಾಹಿತಿಯನ್ನು ವಿಮಾ ಸಂಸ್ಥೆಯವರಿಗ ಸಲ್ಲಿಸಿರುವುದಿಲ್ಲ.

ಸಂಖ್ಯೆ: AGRI-ACT/192/ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1 (ಎಲ್.ಎ.ಕ್ಯೂ-511)

2022-23 ನೇ ಸಾಲಿನ ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಮುಂಗಾರು ಹಂಗಾಮಿನ ಹೋಬಳಿವಾರು, ಹೆಕ್ಟೇರ್ ವಾರು ಹಾಗೂ ಬೆಳೆವಾರು ಬಿತ್ತನೆಯಾದ ವಿಸ್ತೀರ್ಣದ ವಿವರ
(ದಿ:08.09.2022 ರವರೆಗೆ)

ಕ್ರ.ಸಂ	ಹೋಬಳಿ	ಅರಸೀಕೆರೆ ತಾಲ್ಲೂಕು				ಒಟ್ಟು ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)
		ಕಸಬಾ	ಬಾಣಾವರ	ಗಂಡಸಿ	ಕಣಕಟ್ಟೆ	
1	ಜೋಳ	15	25	10	5	55
2	ರಾಗಿ	5050	5150	5110	5830	21140
3	ಕಿರುಧಾನ್ಯಗಳು	0	0	0	105	105
4	ಮು. ಜೋಳ	900	350	3780	0	5030
ಒಟ್ಟು ಏಕದಳ ಧಾನ್ಯಗಳು		**5965**	**5525**	**8900**	**5940**	**26330**
5	ಹೆಸರು	1110	1150	235	3220	5715
6	ಉದ್ದು	200	125	80	140	545
7	ಅಲಸಂದೆ	875	491	757	276	2399
8	ತೊಗರಿ	75	85	45	70	275
9	ಅವರೆ	55	55	50	135	295
10	ಹುರಳಿ	10	0	5	68	83
ಒಟ್ಟು ದ್ವಿದಳ ಧಾನ್ಯಗಳು		**2325**	**1906**	**1172**	**3909**	**9312**
11	ಸೂರ್ಯ ಕಾಂತಿ	40	15	0	0	55
12	ಹರಳು	40	40	5	50	135
13	ಎಳ್ಳು	180	185	25	153	543
14	ಹುಚ್ಚೆಳ್ಳು					0
15	ನೆಲಗಡಲೆ	5	5		5	15
ಒಟ್ಟು ಎಣ್ಣೆಕಾಳುಗಳು		**265**	**245**	**30**	**208**	**748**
16	ಹತ್ತಿ	10	22	3	5	40
ಒಟ್ಟು ವಾಣಿಜ್ಯ ಬೆಳೆಗಳು		10	22	3	5	40
ಎಲ್ಲಾ ಒಟ್ಟು		**8565**	**7698**	**10105**	**10062**	**36430**

ಅನುಬಂಧ-2 (ಎಲ್.ಎ.ಕ್ಯೂ-511)

2022-23 ನೇ ಸಾಲಿನಲ್ಲಿ ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ತಿಂಗಳುಗಳಿಂದ ಸುರಿದ ಮಳೆಯಿಂದ ಸಂಭವಿಸಿದ ಬೆಳೆ ನಷ್ಟದ ವಿವರ (ದಿ.08.09.2022 ರವರೆಗೆ)

ಕ್ರ.ಸಂ	ತಾಲ್ಲೂಕು	ಹೋಬಳಿ	ಬೆಳೆ ನಷ್ಟ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)										ಒಟ್ಟು ವಿಸ್ತೀರ್ಣ
			ಉದ್ದು	ರಾಗಿ	ಮು. ಜೋಳ	ಹೆಸರು	ಎಳ್ಳು	ಸೂರ್ಯ ಕಾಂತಿ	ಅಲಸಂದೆ	ಹುರಳಿ	ಹತ್ತಿ	ನೆಲಗಡಲೆ	
1	ಅರಸೀಕೆರೆ	ಕಸಬಾ	2.2	0	0	5.0	0	0	2.2	0	0	0	9.40
2		ಗಂಡಸಿ	0	5	40	7.0	0	0	13.0	0	0	0	65.00
3		ಬಾಣಾವರ	0	471.2	6.8	5.0	0	0	0	2	5		490.00
4		ಕಣಕಟ್ಟೆ	0	5	0	0	0	0	0	0	0	0	5.00
ಒಟ್ಟು			**2**	**481**	**47**	**17**	**0**	**0**	**15**	**2**	**5**	**0**	**569.40**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	512
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಲಿಂಗೇಗೌಡ ಕೆ.ಎಂ, (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅರಸೀಕೆರೆ ನಗರದ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಕ್ಕಾಗಿ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ್ದರೂ ಪ್ರವೇಶ ದೊರೆಯದಿದ್ದರಿಂದ ಆಗುತ್ತಿರುವ ಅನಾನುಕೂಲ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಅರಸೀಕೆರೆ ನಗರದಲ್ಲಿ ಪ್ರಸ್ತುತ ಹಿಂದುಳಿದ ವರ್ಗಗಳ 170 ಸಂಖ್ಯಾಬಲದ ಒಂದು ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿರುತ್ತದೆ.
ಆ)	ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಿದ್ದಾರೆ; ಎಷ್ಟು ವಿದ್ಯಾರ್ಥಿನಿಯರಿಗೆ ಪ್ರವೇಶ ನೀಡಲಾಗಿದೆ; ಎಷ್ಟು ವಿದ್ಯಾರ್ಥಿನಿಯರಿಗೆ ಪ್ರವೇಶ ದೊರೆತಿರುವುದಿಲ್ಲ; ವರ್ಗವಾರು ಸಂಪೂರ್ಣ ಮಾಹಿತಿ ನೀಡುವುದು)	ಈ ವಿದ್ಯಾರ್ಥಿನಿಲಯಕ್ಕೆ ಪ್ರಸಕ್ತ ಸಾಲಿನಲ್ಲಿ 95 ನವೀಕರಣ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಹೊಸದಾಗಿ 217 ಅರ್ಜಿಗಳು ಸ್ವೀಕೃತವಾಗಿದ್ದು, ಹೊಸದಾಗಿ 75 ವಿದ್ಯಾರ್ಥಿನಿಯರಿಗೆ ಪ್ರವೇಶವನ್ನು ಕಲ್ಪಿಸಲಾಗಿರುತ್ತದೆ. 142 ಅರ್ಜಿಗಳು ಬಾಕಿ ಉಳಿದಿರುತ್ತದೆ. ವರ್ಗವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಹಾಸ್ಟೆಲ್ ಪ್ರವೇಶದಿಂದ ವಂಚಿತರಾದ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?	ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಬಿಸಿರುತ್ತದೆ.

ಸಂಖ್ಯೆ: ಬಿಸಿಡಬ್ಲ್ಯೂ 517 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.512ಕ್ಕೆ ಅನುಬಂಧ

***

ಹಾಸನ ಜಿಲ್ಲೆ ಅರಸೀಕೆರೆ ನಗರದಲ್ಲಿನ ಹಿಂದುಳಿದ ವರ್ಗಗಳ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಪ್ರವೇಶದ ಪ್ರವರ್ಗವಾರು ವಿವರ

ವರ್ಗ	ಪ್ರವೇಶಕ್ಕೆ ನಿಗಧಿಪಡಿಸಿರುವ ಮೀಸಲಾತಿ ಅನುಪಾತ	2022-23ನೇ ಸಾಲಿನಲ್ಲಿ ನವೀಕರಣ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ಸ್ವೀಕೃತ ಗೊಂಡ ಅರ್ಜಿಗಳ ಸಂಖ್ಯೆ	ಪ್ರವೇಶ ನೀಡಿರುವ ಅರ್ಜಿಗಳ ಸಂಖ್ಯೆ	ಪ್ರವೇಶ ದೊರಕದೇ ಉಳಿದ ಅರ್ಜಿಗಳ ಸಂಖ್ಯೆ	ಒಟ್ಟು ಪ್ರವೇಶ ನೀಡಿರುವುದು
ವರ್ಗ-1	17	32	51	10	41	42
2-ಎ	60	21	46	15	31	36
2-ಬಿ	15	0	5	5	0	5
3-ಎ	15	5	11	11	0	16
3-ಬಿ	20	34	85	26	59	60
ಪ.ಜಾ.	36	1	15	6	9	7
ಪ.ಪಂ.	7	2	4	2	2	4
ಒಟ್ಟು	170	95	217	75	142	170

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

FA/890122

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	513
ಸದಸ್ಯರ ಹೆಸರು	:	ಶ್ರೀ ಖಾದರ್ ಯು.ಟಿ.
ಉತ್ತರಿಸುವ ದಿನಾಂಕ	:	14.09.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಮೂಲ ನಿವಾಸಿಗಳಾದ ಆದಿವಾಸಿ ಕೊರಗ ಜನಾಂಗದವರಿಗೆ ಕಳೆದ ಕೆಲವು ವರ್ಷಗಳಿಂದ ಲಭ್ಯವಿದ್ದ "ಆರೋಗ್ಯನಿಧಿ" ವೈದ್ಯಕೀಯ ವೆಚ್ಚ ಮರುಪಾವತಿ ಅವಕಾಶವನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಜನಾಂಗದವರಿಗೆ "ಆರೋಗ್ಯನಿಧಿ" ಎಂಬ ಕಾರ್ಯಕ್ರಮವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದ ನೈಜ ದುರ್ಬಲ ಬುಡಕಟ್ಟು ಸಮುದಾಯವಾದ ಕೊರಗ ಸಮುದಾಯದವರಿಗೆ ಈವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿಸಲು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಅವಶ್ಯಕವಾಗಿರುವ ರೂ.125.03 ಲಕ್ಷಗಳ ಅನುದಾನವನ್ನು 2022-23ನೇ ಸಾಲಿನ ಪರಿಶಿಷ್ಟ ಪಂಗಡಗಳ ವಿವಿಧ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆ:2225-02-794-0-05(059) ರಡಿ ಇತರ ವೆಚ್ಚಗಳಿಗಾಗಿ ನಿಗಧಿಪಡಿಸುವ ಅನುದಾನದಲ್ಲಿ ಇನ್ನು ಮುಂದೆ ಯಾವುದೇ ವೈದ್ಯಕೀಯ ವೆಚ್ಚ ಮರುಪಾವತಿಗೆ ಅವಕಾಶವಿರುವುದಿಲ್ಲ ಹಾಗೂ ಇದೊಂದು ಬಾರಿಗೆ ಮಾತ್ರ ಎಂಬ ಷರತ್ತಿಗೊಳಪಟ್ಟು ಮಂಜೂರಾತಿ ನೀಡಿ ಆದೇಶಿಸಲಾಗಿದೆ.
ಆ)	ಹಾಗಿದ್ದಲ್ಲಿ, ತೀರಾ ಹಿಂದುಳಿದ ಬಡಕೊರಗ ಕುಟುಂಬಗಳು ಸಮಸ್ಯೆಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಅಳಿವಿನಂಚಿನಲ್ಲಿರುವ ಈ ಜನಾಂಗದ ರಕ್ಷಣೆಗಾಗಿ "ಆರೋಗ್ಯನಿಧಿ"ಯನ್ನು ಪುನರಾರಂಭಿಸಲಾಗುವುದೇ?	ಕೊರಗ ಜನಾಂಗದವರಿಗೆ "ಆರೋಗ್ಯನಿಧಿ" ಎಂಬ ಕಾರ್ಯಕ್ರಮವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಕಾರ್ಯಕ್ರಮಗಳಾದ ಪ್ರಸ್ತುತ ಜಾರಿಯಲ್ಲಿರುವ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ/ ಮುಖ್ಯಮಂತ್ರಿಗಳ ಪರಿಹಾರ ನಿಧಿ/ಯಶಸ್ವಿನಿ ಹಾಗೂ ಇತರೆ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮಗಳಿಂದ ಸೌಲಭ್ಯ ಪಡೆದುಕೊಳ್ಳಲು ಕ್ರಮವಹಿಸಲಾಗಿದೆ ಹಾಗೂ ಕೊರಗರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುವ ಕುರಿತು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ರವರ ಅಭಿಪ್ರಾಯ ಪಡೆದು ಕ್ರಮವಹಿಸಲಾಗುವುದು.

ಸಕಇ 412 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 514
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ
ಉತ್ತರಿಸುವ ದಿನಾಂಕ : 14.09.2022.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 2022-23ನೇ ಸಾಲಿನಲ್ಲಿ ಉದ್ಯಮ ಶೀಲತಾ ಯೋಜನೆ (ಸಹಾಯಧನ ಗರಿಷ್ಟ 2.00 ಲಕ್ಷ ಹಾಗೂ ಗರಿಷ್ಟ 3.50 ಲಕ್ಷ) ಹಾಗೂ ಗಂಗಾ ಕಲ್ಯಾಣ ಯೋಜನೆಗೆ ನಿಗಮವು ಅರ್ಜಿ ಆಹ್ವಾನಿಸಿರುವುದು ನಿಜವೇ;	ಹೌದು.
ಆ)	ಹಾಗಿದ್ದಲ್ಲಿ, ಮಂಗಳೂರು ಕ್ಷೇತ್ರಕ್ಕೆ ಗುರಿ ನಿಗದಿಪಡಿಸಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ; ಅರ್ಜಿ ಸಲ್ಲಿಸಿದವರಲ್ಲಿ ಅರ್ಹರನ್ನು ಗುರುತಿಸಿ ಸೌಲಭ್ಯವನ್ನು ಒದಗಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ?	ಬಂದಿದೆ. 2022-23ನೇ ಸಾಲಿಗೆ ಹಂಚಿಕೆಯಾಗಿರುವ ಅನುದಾನಕ್ಕೆ ಅನುಗುಣವಾಗಿ ನಿಗಮದ ವ್ಯಾಪ್ತಿಗೆ ಒಳಪಡುವ ಉಪ ಜಾತಿಗಳಿಗೆ ಸೇರಿದ ಜನಸಂಖ್ಯಾ ಆಧಾರದ ಮೇಲೆ ಗುರಿಯನ್ನು ನಿಗಧಿಪಡಿಸಲಾಗಿರುತ್ತದೆ. 2022-23ನೇ ಸಾಲಿಗೆ ಹೆಚ್ಚುವರಿ ಅನುದಾನ ರೂ.100.00 ಕೋಟಿಗಳನ್ನು ನಿಗಧಿಪಡಿಸಿದ್ದು, ಸದರಿ ಅನುದಾನದಲ್ಲಿ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಆದ್ಯತೆ ಮೇಲೆ ಗುರಿಯನ್ನು ನಿಗಧಿಪಡಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಸಕಇ 490 ಎಸ್‌ಡಿಸಿ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**515**
ಸದಸ್ಯರ ಹೆಸರು	:	ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸಬೇಕಾದ ದಿನಾಂಕ	:	14.09.2022
ಉತ್ತರಿಸುವ ಸಚಿವರು	:	ಕೃಷಿ ಸಚಿವರು

ಪ್ರಶ್ನೆ	ಉತ್ತರ
(ಅ) ಮಣ್ಣಿನ ಫಲವತ್ತತೆ ಹೆಚ್ಚಿಸಲು ಕೃಷಿ ಇಲಾಖೆ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ (ವಿವರ ಒದಗಿಸುವುದು);	ಮಣ್ಣಿನ ಫಲವತ್ತತೆ ಹೆಚ್ಚಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆಯು ಕೆಳಕಂಡ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. • ಮಣ್ಣಿನ ಫಲವತ್ತತೆ ಹೆಚ್ಚಿಸಲು ಕೃಷಿಯಲ್ಲಿ ಗೊಬ್ಬರಗಳನ್ನು ವೈಜ್ಞಾನಿಕ ರೀತಿಯಲ್ಲಿ ಬಳಕೆಮಾಡುವುದು ಪ್ರಮುಖವಾಗಿದ್ದು, ಸಾವಯವ ಗೊಬ್ಬರ ಮತ್ತು ಜೈವಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನಲ್ಲಿ ಇಂಗಾಲ ಅಂಶವು ಹೆಚ್ಚಳವಾಗಲಿದೆ. ಇದರಿಂದ ಮಣ್ಣಿಗೆ ಹೆಚ್ಚಿನ ನೀರನ್ನು ಹಿಡಿದಿಟ್ಟುಕೊಳ್ಳಲು ಅನುಕೂಲಕರವಾಗಲಿದ್ದು, ಲಭ್ಯವಿರುವ ಪೋಷಕಾಂಶಗಳು ಪರಿಣಾಮಕಾರಿಯಾಗಿ ಸದ್ಬಳಕೆಯಾಗಲಿದೆ. ಆದ್ದರಿಂದ, ಸಮಗ್ರ ಪೋಷಕಾಂಶಗಳ ನಿರ್ವಹಣೆ ಕಾರ್ಯಕ್ರಮದಡಿ ಸಾವಯವ ಗೊಬ್ಬರ ಮತ್ತು ಜೈವಿಕ ಗೊಬ್ಬರಗಳ ಬಳಕೆಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. • ಕೃಷಿಯಲ್ಲಿ ಬೆಳೆಗಳಿಗೆ ಬೇಕಾಗುವ ಅವಶ್ಯಕ ಪೋಷಕಾಂಶಗಳ ಬಳಕೆಗೆ ಗೊಬ್ಬರಗಳನ್ನು ವೈಜ್ಞಾನಿಕ ರೀತಿಯಲ್ಲಿ ಬಳಕೆ ಮಾಡಲು ಒತ್ತು ನೀಡಿ ವಿವಿಧ ಪ್ರಾತ್ಯಕ್ಷಿಕೆ ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ. • ಕೃಷಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಇಲಾಖೆಯಿಂದ ಹಸಿರೆಲೆ ಗೊಬ್ಬರ, ಬೀಜಗಳು, ಜಿಪ್ಸಂ, ಕೃಷಿ ಸುಣ್ಣ, ಜೈವಿಕ ಗೊಬ್ಬರಗಳು, ಲಘು ಪೋಷಕಾಂಶಗಳು ಹಾಗೂ ಸಾವಯವ ಗೊಬ್ಬರಗಳನ್ನು ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಸಹಾಯಧನದಲ್ಲಿ ವಿತರಣೆ ಮಾಡಲಾಗುತ್ತಿದೆ. • ಸಾವಯವ ಕೃಷಿ ಕಾರ್ಯಕ್ರಮಗಳಡಿ ರೈತರಿಗೆ ಬಯೋಡೈಜೆಸ್ಟರ್ ಘಟಕ ನಿರ್ಮಾಣ ಮತ್ತು ಎರೆಹುಳು ತೊಟ್ಟಿ ಘಟಕ ನಿರ್ಮಾಣ, ಗೋಬರ್ ಗ್ಯಾಸ್ ಘಟಕ ನಿರ್ಮಾಣ ಮತ್ತು ಸಾವಯವ ಗೊಬ್ಬರ ಉತ್ಪಾದನೆಗೆ ರೈತರಿಗೆ ತಾಂತ್ರಿಕ ಸಲಹೆ ನೀಡಲಾಗುತ್ತಿದೆ.

(ಆ) ಈ ಸಾಲಿನಲ್ಲಿ ಸುರಿದ ಮಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ಕೃಷಿ ಹಾನಿ ಮತ್ತು ನಷ್ಟದ ಅಂದಾಜು ಎಷ್ಟು; ಹಾಗೂ ಪರಿಹಾರ ನೀಡಲಾಗಿದೆಯೇ? (ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಒದಗಿಸುವುದು)	2022ನೇ ಮುಂಗಾರು ಹಂಗಾಮಿನಲ್ಲಿ ಸುರಿದ ಮಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ಕೃಷಿ ಬೆಳೆ ಹಾನಿಯ ವಿಧಾನಸಭಾ ಕ್ಷೇತ್ರವಾರು ವಿವರವನ್ನು **ಅನುಬಂಧ** ದಲ್ಲಿ ಒದಗಿಸಿದೆ. ಅತಿವೃಷ್ಟಿಯಿಂದ ಸಂಭವಿಸಿದ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ಪಾವತಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಕೃಇ 60 ಕೃಉಇ 2022

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ವಿಧಾನ ಸಭೆಯ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 515 ಕ್ಕೆ ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯ ವಿಧಾನ ಸಭಾ ಕ್ಷೇತ್ರವಾರು ಕೃಷಿ ಬೆಳೆ ಹಾನಿ ವಿವರ			
ಜಿಲ್ಲೆ	**ವಿಧಾನ ಸಭಾ ಕ್ಷೇತ್ರ**	**ಬೆಳೆ**	**ಹಾನಿಗೊಳಗಾದ ಪ್ರದೇಶ (ಹೆ)**
ದಕ್ಷಿಣ ಕನ್ನಡ	ಮಂಗಳೂರು	ಭತ್ತ	0.000
	ಮಂಗಳೂರು ಉತ್ತರ		4.240
	ಮಂಗಳೂರು ದಕ್ಷಿಣ		1.104
	ಮುಲ್ಕಿ ಮೂಡಬಿದ್ರೆ		219.774
	ಬಂಟ್ವಾಳ		0.000
	ಪುತ್ತೂರು		0.800
	ಬೆಳ್ತಂಗಡಿ		3.632
	ಕಡಬ		0.000
	ಸುಳ್ಯ		0.000
ಒಟ್ಟು			**229.550**
2020-21 ರ Cost of Cultivation ಪ್ರಕಾರ ಅಂದಾಜು ನಷ್ಟ(ರೂ ಕೋಟಿಗಳಲ್ಲಿ)			**1.87**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	516
ಮಾನ್ಯ ಸದಸ್ಯರ ಹೆಸರು	ಶ್ರೀ ಖಾದರ್ ಯು. ಟಿ. (ಮಂಗಳೂರು)
ಉತ್ತರಿಸಬೇಕಾದ ದಿನಾಂಕ	14/09/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ದುಡಿಯುವ ಟೈಲರ್ ವೃತ್ತಿಯವರಿಗೆ ಹಾಗೂ ಆಟೋ ಚಾಲಕರಿಗೆ ಕಾರ್ಮಿಕ ಇಲಾಖೆಯಿಂದ ಸಿಗುವ ಸೌಲಭ್ಯಗಳಾವುವು? (ಮಾಹಿತಿ ಒದಗಿಸುವುದು)	ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿದ್ದು, ಅದರಲ್ಲಿ ಟೈಲರ್ ವೃತ್ತಿಯವರು ಹಾಗೂ ಆಟೋ ಚಾಲಕರು ಸಹ ಸೇರಿರುತ್ತಾರೆ. ಪ್ರಸ್ತುತ ಈ ವರ್ಗದ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. (1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಈ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ಊರ್ಜಿತ ವಾಹನ ಚಾಲನಾ ಪರವಾನಗಿ ಹೊಂದಿದ ಚಾಲಕರಿಗೆ (ಆಟೋ ಚಾಲಕರು ಸೇರಿದಂತೆ) ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. (ಅ) **ಅಪಘಾತ ಪರಿಹಾರ ಸೌಲಭ್ಯ:** ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೂ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ. (ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ. (2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-** ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಟೈಲರ್, ಕ್ಷೌರಿಕರು, ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದ್ದು, ಪ್ರಸ್ತುತ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಒದಗಿಸುತ್ತಿಲ್ಲ.

		(3) ಕೋವಿಡ್–19 ರ ಎರಡನೆ ಅಲೆಯ ವಿಶೇಷ ಪ್ಯಾಕೇಜ್: ಕೋವಿಡ್–19ರ ಎರಡನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ಟೈಲರ್‌ಗಳು ಸೇರಿದಂತೆ 11 ವರ್ಗಗಳ ಅಸಂಘಟಿತ ಕಾರ್ಮಿಕರಾದ ಅಗಸರು, ಕ್ಷೌರಿಕರು, ಗೃಹಕಾರ್ಮಿಕರು, ಟೈಲರ್‌ಗಳು, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿಕಾರ್ಮಿಕರಿಗೆ ರೂ.2,000/–ಗಳ ಒಂದು ಬಾರಿ ವಿಶೇಷ ಪ್ಯಾಕೇಜ್ ನೆರವನ್ನು ವಿತರಿಸಿದ್ದು, 6,07,723 ಟೈಲರ್ಸ್‌ಗಳಿಗೆ ತಲಾ ರೂ. 2000/–ಗಳಂತೆ ಒಟ್ಟು ರೂ. 121.54 ಕೋಟಿ ನೆರವನ್ನು ವಿತರಿಸಲಾಗಿದೆ. (4) ಇ–ಶ್ರಮ್ ಕಾರ್ಯಕ್ರಮ (ಅಸಂಘಟಿತ ಕಾರ್ಮಿಕರ ನೋಂದಣಿ):– ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಇ–ಶ್ರಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದ್ದು, ಯೋಜನೆಯಡಿ 18–59 ವಯೋಮಾನದ ಇ.ಎಸ್.ಐ ಹಾಗೂ ಇ.ಪಿ.ಎಫ್ ಸೌಲಭ್ಯವನ್ನು ಹೊಂದಿರದ ಹಾಗೂ ಆದಾಯ ತೆರಿಗೆ ಪಾವತಿ ಮಾಡದ ಎಲ್ಲಾ ಅಸಂಘಟಿತ ಕಾರ್ಮಿಕರು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಅಥವಾ ಸ್ವಯಂ ಆಗಿ ಇ–ಶ್ರಮ್ ಪೋರ್ಟಲ್‌ನಲ್ಲಿ (eshram.gov.in) ಉಚಿತವಾಗಿ ನೋಂದಾಯಿಸಬಹುದಾಗಿದ್ದು, ಗುರುತಿನ ಚೀಟಿಯನ್ನು ನೋಂದಾಯಿತ ಸ್ಥಳದಲ್ಲೆ ವಿತರಿಸಲಾಗುತ್ತದೆ. ನೋಂದಣಿಗಾಗಿ ಕೇಂದ್ರ ಸರ್ಕಾರವು 379 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಗುರುತಿಸಿದ್ದು, ಟೈಲರ್ ವೃತ್ತಿಯವರು ಹಾಗೂ ಆಟೋ ಚಾಲಕರು ಸಹ ಒಳಗೊಂಡಿರುತ್ತಾರೆ. ಸದರಿ ಕಾರ್ಮಿಕರು ಒಂದು ವರ್ಷಕ್ಕೆ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PM-SBY) ಪ್ರಯೋಜನ ಪಡೆಯಬಹುದು (ಅಪಘಾತ ವಿಮೆಯಾಗಿದ್ದು, ಅಪಘಾತದಿಂದ ಮರಣ ಹೊಂದಿದಲ್ಲಿ ಅಥವಾ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2 ಲಕ್ಷ ಹಾಗೂ ಭಾಗಶಃ ಅಂಗವೈಕಲ್ಯಕ್ಕೆ ರೂ.1 ಲಕ್ಷ ಪರಿಹಾರ).

ಕಾಇ 483 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

DFA/890141

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	517
ಸದಸ್ಯರ ಹೆಸರು	:	ಡಾ॥ ದೇವಾನಂದ್ ಫುಲಸಿಂಗ್ ಚವಾಣ್
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ತಳವಾರ ಹಾಗೂ ಪರಿವಾರ ಸಮಾಜಗಳನ್ನು ಪರಿಶಿಷ್ಟ ಪಂಗಡಕ್ಕೆ(ST) ಸೇರಿಸಿ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ರಾಜ್ಯ ಸರ್ಕಾರ ದಿನಾಂಕ:28.05.2020 ರಂದು ಅಧಿಸೂಚನೆ ಹೊರಡಿಸುವ ಮೂಲಕ ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿನ ಕ್ರ.ಸಂ. 38 ರಲ್ಲಿರುವ Naikda, Nayaka ,Cholivala Nayaka, Kapadia Nayaka, Mota Nayaka, Nana Nayaka, Naik, Nayak, Beda, Bedar and Valmiki ಸಮುದಾಯಗಳ ಜೊತೆಗೆ ರಾಜ್ಯದಲ್ಲಿನ ಪರಿವಾರ ಮತ್ತು ತಳವಾರ Naikda, Nayaka (including Parivara and Talawara) ಗಳನ್ನು ಪರಿಗಣಿಸಿ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ನೀಡಲು ಆದೇಶಿಸಿರುತ್ತದೆ ಮತ್ತು ದಿನಾಂಕ: 29-01-2022 ರಂದು ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆ ಸಂಖ್ಯೆ : ಸಕಇ 180 ಎಸ್‌ಎಡಿ 2020(P) ರಲ್ಲಿ ಪರಿವಾರ ಮತ್ತು ತಳವಾರ ಜಾತಿಗೆ ಸೇರಿದ ಅರ್ಹರಿಗೆ ಸದರಿ ಸುತ್ತೋಲೆಯಂತೆ ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರ ನೀಡಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು/ ತಹಸೀಲ್ದಾರರಿಗೆ ಸೂಚಿಸಿದೆ.
ಆ)	ಪರಿಶಿಷ್ಟ ಪಂಗಡಕ್ಕೆ ಪ್ರಸ್ತುತವಿರುವ ಶೇಕಡಾ 3.5 ರಷ್ಟು ಮೀಸಲಾತಿಯನ್ನು ಶೇಕಡಾ 7.5 ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದ ಕುರಿತು ಬೇಡಿಕೆಯನ್ನು ಈಡೇರಿಸಲು ಸರ್ಕಾರ ತೆಗೆದುಕೊಂಡ ನಿರ್ಧಾರಗಳೇನು; (ಸ್ಪಷ್ಟವಾದ ವಿವರಣೆ ನೀಡುವುದು)	ಪರಿಶಿಷ್ಟ ಪಂಗಡದ ಜನರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಹೆಚ್ಚಿಸುವ ಕುರಿತಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಹೆಚ್.ಎನ್.ನಾಗಮೋಹನದಾಸ್ ಇವರ ಅಧ್ಯಕ್ಷತೆಯಲ್ಲಿ ಏಕಸದಸ್ಯ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.
ಇ)	ಪರಿಶಿಷ್ಟ ಪಂಗಡಕ್ಕಿರುವ ಶೇಕಡ 3.5 ರಷ್ಟು ಮೀಸಲಾತಿಯನ್ನು ಶೇಕಡ 7.5 ರಷ್ಟು ಹೆಚ್ಚಿಸಲು ಸರ್ಕಾರಕ್ಕಿರುವ ಅಡೆತಡೆಗಳೇನು? (ವಿವರವಾದ ಸ್ಪಷ್ಟ ಮಾಹಿತಿ ನೀಡುವುದು)	ಈ ಮಧ್ಯೆ, ಕುರುಬ ಸಮುದಾಯದವರು ಪ್ರಸ್ತುತ ಹಿಂದುಳಿದ ವರ್ಗಗಳ ಪ್ರವರ್ಗ 2 ಎ ದಿಂದ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೋರಿರುತ್ತಾರೆ. ಪಂಚಮಸಾಲಿ ಲಿಂಗಾಯಿತ ಸಮುದಾಯದವರು ಹಿಂದುಳಿದ ವರ್ಗಗಳ ಪ್ರವರ್ಗ 3 ಬಿ ಯಿಂದ ಪ್ರವರ್ಗ 2 ಎಗೆ ವರ್ಗಾಯಿಸಲು ಒತ್ತಾಯಿಸುತ್ತಿದ್ದಾರೆ. ಅದೇ ರೀತಿ ವೀರಶೈವ ಲಿಂಗಾಯಿತರು ಮತ್ತು ಒಕ್ಕಲಿಗ ಸಮುದಾಯದವರು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ ಪಟ್ಟಿ (OBC) ಗೆ ಸೇರಿಸಲು ಕೋರಿರುತ್ತಾರೆ. ವಿವಿಧ ಸಮುದಾಯಗಳ ಬೇಡಿಕೆಗಳ ಬಗ್ಗೆ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಹೆಚ್. ಎನ್. ನಾಗಮೋಹನ್‌ದಾಸ್ ರವರು ಸಲ್ಲಿಸಿರುವ ವರದಿಯನ್ನು ಅನುಷ್ಠಾನ ಮಾಡುವ ವಿಧಿ-ವಿಧಾನದ ಬಗ್ಗೆ ಪರಾಮರ್ಶಿಸಿ ಸರ್ಕಾರಕ್ಕೆ ವರದಿ ನೀಡಲು ದಿನಾಂಕ:10.03.2021 ರಂದು

		ಮೀಸಲಾತಿಯನ್ನು ಪರಾಮರ್ಶಿಸುವ ಕುರಿತು ಉನ್ನತ ಮಟ್ಟದ ಸಮಿತಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಸುಭಾಷ್ ಆಡಿ ರವರ ಅಧ್ಯಕ್ಷತೆಯಲ್ಲಿ ತ್ರಿಸದಸ್ಯ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ. ಸದರಿ ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು.

ಸಕಇ 116 ಎಸ್‌ಎಡಿ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	518
ಸದಸ್ಯರ ಹೆಸರು	:	ಡಾ॥ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಇಲಾಖೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಎಸ್.ಎಂ.ಎ.ಎಂ, ಕೃಷಿ ಯಾಂತ್ರಿಕರಣ, ಪಿ.ಎಂ.ಕೆ.ಎಸ್.ವೈ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲ್ಲಿ ನೀಡಲಾದ ಅನುದಾನವೆಷ್ಟು;	ಪ್ರಸಕ್ತ ಸಾಲಿನಲ್ಲಿ ಕೃಷಿ ಇಲಾಖೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಒದಗಿಸಲಾದ/ನೀಡಲಾದ ಅನುದಾನ ವಿವರ ಈ ಕೆಳಕಂಡಂತಿದೆ; 1. **ಎಸ್.ಎಂ.ಎ.ಎಂ-** 2022-23ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರೂ.280.00 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. 2. **ಕೃಷಿ ಯಾಂತ್ರೀಕರಣ-** 2022-23ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರೂ.126.42 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಮೊದಲ ತ್ರೈಮಾಸಿಕದ ಅಂತ್ಯಕ್ಕೆ ರೂ.31.98 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. 3. **ಪಿ.ಎಂ.ಕೆ.ಎಸ್.ವೈ ಪಿ.ಡಿ.ಎಂ.ಸಿ-** 2022-23ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ತೋಟಗಾರಿಕೆ,ಕೃಷಿ, ಜಲಾನಯನ ಇಲಾಖೆಯ(ಒ.ಐ) ಮತ್ತು ರೇಷ್ಮ ಇಲಾಖೆಗಳಿಗೆ ಒಟ್ಟು ರೂ.891.26 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ರೂ.500.00 ಕೋಟಿಗಳ ಕೇಂದ್ರದ ಪಾಲಿನ ಅನುದಾನವನ್ನು ಹಂಚಿಕೆ ಮಾಡಿದ್ದು ಇಲ್ಲಿಯವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. 4. **ಪಿ.ಎಂ.ಕೆ.ಎಸ್.ವೈ ಆರ್.ಐ.ಡಿ.ಎಫ್-** ಯೋಜನೆಯಡಿ 2022-23ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರೂ.11.38 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಮೊದಲ ತ್ರೈಮಾಸಿಕದ ಅಂತ್ಯಕ್ಕೆ ರೂ.2.85 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. 5. **ಎನ್.ಎಫ್.ಎಸ್.ಎಂ-** 2022-23ನೇ ಸಾಲಿಗೆ ಆಯವ್ಯಯದಲ್ಲಿ ರೂ.166.67 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮೊದಲ ಕಂತಿನ

<table>
<tr>
<td></td>
<td></td>
<td>ಅನುದಾನವಾಗಿ ರೂ.28.91 ಕೋಟಿಗಳ ಕೇಂದ್ರದ ಪಾಲಿನ ಅನುದಾನವನ್ನು ಬಿಡುಗಡೆ ಯಾಗಿರುತ್ತದೆ.
ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಪ್ರಸ್ತುತ ವರ್ಷ ಜಲಾನಯನ ಅಭಿವೃದ್ಧಿ ಇಲಾಖೆಗೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ(ಪಿ.ಎಂ.ಕೆ.ಎಸ್.ವೈ.) ಯಡಿ ಇಲ್ಲಿಯವರೆಗೆ ನೀಡಲಾದ (ಬಿಡುಗಡೆ) ಅನುದಾನ ವಿವರ ಕೆಳಕಂಡಂತೆ ಇರುತ್ತದೆ.
(ರೂ. ಲಕ್ಷಗಳಲ್ಲಿ)
<table>
<tr><th rowspan="2">ಕ್ರ. ಸಂ</th><th rowspan="2">ಯೋಜನೆಯ ಹೆಸರು</th><th colspan="3">ನೀಡಲಾದ (ಬಿಡುಗಡೆ) ಅನುದಾನ</th></tr>
<tr><th>ಕೇಂದ್ರ</th><th>ರಾಜ್ಯ</th><th>ಒಟ್ಟು</th></tr>
<tr><td>1.</td><td>ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ 2.0</td><td>8929.40</td><td>5952.93</td><td>14882.33</td></tr>
<tr><td>2.</td><td>ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು</td><td>2254.55</td><td>1502.83</td><td>3757.38</td></tr>
<tr><td></td><td>ಒಟ್ಟು</td><td>11183.95</td><td>7455.76</td><td>18639.71</td></tr>
</table>
</td>
</tr>
<tr>
<td>ಆ)</td>
<td>ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹಾಗೂ ಇನ್ನಿತರ ಯೋಜನೆಯಡಿಯಲ್ಲಿ ಕಳೆದ ಜುಲೈ 2019 ರಿಂದ ಪ್ರಸ್ತುತ ಈ ದಿನಾಂಕದವರೆಗೆ ನೀಡಿರುವ ಹಾಗೂ ಖರ್ಚು ಮಾಡಿರುವ ಅನುದಾನವೆಷ್ಟು; (ಜಿಲ್ಲಾ ಮತ್ತು ತಾಲ್ಲೂಕುವಾರು ಅಂಕಿ-ಸಂಖ್ಯೆಯೊಂದಿಗೆ ವಿವರವಾದ ಮಾಹಿತಿ ನೀಡುವುದು)</td>
<td>ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹಾಗೂ ಯೋಜನೆಯಡಿಯಲ್ಲಿ ಜುಲೈ 2019 ರಿಂದ ಪ್ರಸ್ತುತ ಈ ದಿನಾಂಕದವರೆಗೆ ನೀಡಿರುವ ಹಾಗೂ ಖರ್ಚು ಮಾಡಿರುವ ಅನುದಾನದ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ-ಸಂಖ್ಯೆಯೊಂದಿಗೆ ವಿವರವಾದ ಮಾಹಿತಿ CD ಯಲ್ಲಿ ಒದಗಿಸಲಾಗಿದೆ.</td>
</tr>
<tr>
<td>ಇ)</td>
<td>ಕೃಷಿ ಇಲಾಖೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಜಲಾನಯನ ಯೋಜನೆಯಡಿ ಯಲ್ಲಿ ಹಾಗೂ P.M.K.S.Y-O.Y.R.K.V.Y. ನಲ್ಲಿ ಚೆಕ್ ಡ್ಯಾಂ, ಗೋಕಟ್ಟೆ, ಕೃಷಿ ಹೊಂಡ, ನಾಲಾಬದು ಹಾಗೂ ಇತರೆ ಯೋಜನೆಯಡಿ ಜುಲೈ 2019 ರಿಂದ ಪ್ರಸ್ತುತ ದಿನಾಂಕದವರೆಗೆ ನೀಡಿರುವ ಹಾಗೂ ಖರ್ಚು</td>
<td>ಕೃಷಿ ಇಲಾಖೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜುಲೈ 2019 ರಿಂದ ಪ್ರಸ್ತುತ ದಿನಾಂಕದವರೆಗೆ ನೀಡಿರುವ ಹಾಗೂ ಖರ್ಚು ಮಾಡಿರುವ ಅನುದಾನ ವಿವರಗಳನ್ನು CD ಯಲ್ಲಿ ಒದಗಿಸಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಜುಲೈ 2019 ರಿಂದ ಪ್ರಸ್ತುತ ದಿನಾಂಕದವರೆಗೆ ನೀಡಿರುವ ಹಾಗೂ ಖರ್ಚು ಮಾಡಿರುವ</td>
</tr>
</table>

	ಮಾಡಿರುವ ಅನುದಾನವೆಷ್ಟು; (ದಾಖಲೆಯೊಂದಿಗೆ ವಾರ್ಷಿಕವಾರು, ಯೋಜನೆವಾರು ಅಂಕಿ-ಸಂಖ್ಯೆಗಳ ವಿವರವಾದ ಮಾಹಿತಿ ನೀಡುವುದು)	ಅನುದಾನದ ವಾರ್ಷಿಕವಾರು, ಯೋಜನೆವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಈ)	ರೈತರಿಂದ ಬೆಳೆ ವಿಮೆ ಪಾವತಿಸಿಕೊಂಡ ವಿಮಾ ಕಂಪನಿಗಳು ರೈತರಿಗೆ ಸರಿಯಾದ ಸಮಯಕ್ಕೆ ಮತ್ತು ಸೂಕ್ತ ವಿಮಾ ಪರಿಹಾರವನ್ನು ವಿತರಿಸದೆ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ರೀತಿಯ ವಂಚನೆಯನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಆಯಾ ವರ್ಷ ಹಂಗಾಮುವಾರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಬೆಳೆ ಇಳುವರಿ ವಿವರವನ್ನು ಅಂತಿಮಗೊಳಿಸಿದ ನಂತರ ಕೃಷಿ ಇಲಾಖೆಯ ವತಿಯಿಂದ ಅರ್ಹ ರೈತರಿಗೆ ವಿಮಾ ಪರಿಹಾರವನ್ನು ಲೆಕ್ಕಾಚಾರ ಮಾಡಲಾಗುತ್ತದೆ. ಲೆಕ್ಕಾಚಾರ ಮಾಡಲಾದ ಪರಿಹಾರ ಮೊತ್ತದ ವಿವರಗಳಿಗೆ ಅನುಗುಣವಾದ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲು ವಿಮಾ ಸಂಸ್ಥೆಗಳಿಗೆ ಸೂಚನೆ ನೀಡಲಾಗುತ್ತದೆ. ಲೆಕ್ಕಾಚಾರ ಮಾಡಲಾದ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರು ಇತ್ಯರ್ಥಪಡಿಸುತ್ತಾರೆ. ಕೆಲವೊಂದು ಪ್ರಕರಣಗಳಲ್ಲಿ ರೈತರ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಆಗದ ಕಾರಣ ಪರಿಹಾರ ಮೊತ್ತ ಇತ್ಯರ್ಥ ವಿಳಂಬವಾಗಿರುತ್ತದೆ. ರೈತರಿಂದ ಬೆಳೆ ವಿಮೆ ಪಾವತಿಸಿಕೊಂಡ ವಿಮಾ ಸಂಸ್ಥೆಯವರು ರೈತರಿಗೆ ಸೂಕ್ತ ವಿಮಾ ಪರಿಹಾರ ವಿತರಣೆಯ ಕಾರ್ಯ ಪ್ರಗತಿಯಲ್ಲಿದೆ.
ಉ)	ವಿಜಯಪುರ ಜಿಲ್ಲೆಯಲ್ಲಿ ಬೆಳೆ ವಿಮೆ ಪಾವತಿಸಿಕೊಳ್ಳಲು ಯಾವ ಯಾವ ಕಂಪನಿಗಳಿಗೆ ಅನುಮತಿ ನೀಡಲಾಗಿದೆ? (ಕಂಪನಿಗಳ ವಿವರವಾದ ಮಾಹಿತಿ ನೀಡುವುದು)	ವಿಜಯಪುರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ರವರಿಗೆ ವಿಜಯಪುರ ಜಿಲ್ಲೆಯಲ್ಲಿ ನೋಂದಣಿ ಸಮಯದಲ್ಲಿ ಬೆಳೆ ವಿಮೆಯನ್ನು ಪಾವತಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಸಂಖ್ಯೆ: AGRI-AML/206/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಡಿ 2019 ಜುಲೈ ರಿಂದ ಇಲ್ಲಿಯವರೆಗೆ ವರ್ಷವಾರು, ಯೋಜನಾವಾರು ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನದ ವಿವರಗಳು

(ರೂ ಲಕ್ಷಗಳಲ್ಲಿ)

(LAQ 518)

ಕ್ರ ಸಂ	ಯೋಜನೆ ಹೆಸರು	2019-20				2020-21			
		ಬಿಡುಗಡೆಯಾದ ಅನುದಾನ			ವೆಚ್ಚ	ಬಿಡುಗಡೆಯಾದ ಅನುದಾನ			ವೆಚ್ಚ
		ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು		ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು	
1	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ(ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ)+ಇತರ ಉಪಚಾರ *	9960.00	6640.00	16600.00	16080.68	7122.05	4748.03	11870.08	11787.30
2	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ 2.0	-	-	-	-	-	-	-	-
3	ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶಾಭಿವೃದ್ಧಿ	680.20	453.47	1133.67	1062.41	996.00	664.00	1660.00	1550.75
4	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-3)	0.00	3925.78	3925.78	3907.85	-	-	-	-
5	ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಯೋಜನೆ	0.00	2500.00	2500.00	2368.79	0.00	2500.00	2500.00	2472.89
6	ಸುಜಲ-Exit Strategy	-	-	-	-	0.00	986.00	986.00	793.52
7	ರೈತ ಉತ್ಪಾದಕರ ಸಂಸ್ಥೆ ಉತ್ತೇಜನ ಯೋಜನೆ (ರಾಜ್ಯ ವಲಯ)	-	-	-	-	0.00	50.00	50.00	49.25
8	REWARD ಯೋಜನೆ	-	-	-	-	0.00	500.00	500.00	0.00
9	ಅಮೃತ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ ಯೋಜನೆ	-	-	-	-	-	-	-	-
8	NABARD RIDF TRANCHE XXVII ಯೋಜನೆ	-	-	-	-	-	-	-	-
10	Formation and promotion of 10000 Farmer Producer Organizations ಯೋಜನೆ	-	-	-	-	550.00	0.00	550.00	0.00
11	ಅಟಲ್ ಭೂಜಲ ಯೋಜನೆ	-	-	-	-	-	-	-	-
	ಒಟ್ಟು ಮೊತ್ತ	**10640.20**	**13519.25**	**24159.45**	**23419.73**	**8668.05**	**9448.03**	**18116.08**	**16653.71**
12	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ								
	(i) ತಡೆಅಣೆ ನಿರ್ಮಾಣ ಕಾರ್ಯಕ್ರಮ	1320.97	880.65	2201.61	2197.11	2201.95	1467.96	3669.91	3669.31
	(ii) ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮ	129.09	86.06	215.15	215.15	0.00	0.00	0.00	0.00
	(iii) ರೈತ ಉತ್ಪಾದಕ ಸಂಸ್ಥೆಗಳ ರಚನೆ	121.20	80.80	202.00	175.01	396.53	264.36	660.89	567.29
	(iv) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮ	469.39	312.93	782.32	754.28	421.25	280.83	702.08	613.55
	RKVY ಒಟ್ಟು ಮೊತ್ತ	**2040.65**	**1360.43**	**3401.08**	**3341.55**	**3019.73**	**2013.15**	**5032.88**	**4850.15**
	ಮಹಾ ಮೊತ್ತ	**12680.85**	**14879.68**	**27560.53**	**26761.28**	**11687.78**	**11461.18**	**23148.96**	**21503.86**

(*) ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಸೇರಿರುತ್ತದೆ.

(ಮುಂದುವರೆದಿದೆ....)

(LAQ 518)

(ರೂ ಲ[illegible]ಳಲ್ಲಿ)

ಕ್ರ ಸಂ	ಯೋಜನೆ ಹೆಸರು	2021–22				2022–23 (ಇಲ್ಲಿಯವರೆಗೆ)			
		ಬಿಡುಗಡೆಯಾದ ಅನುದಾನ			ವೆಚ್ಚ	ಬಿಡುಗಡೆಯಾದ ಅನುದಾನ			ವೆಚ್ಚ
		ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು		ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು	
1	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ(ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ)+ಇತರ ಉಪಚಾರ *	3812.00	2541.33	6353.33	7242.50	2254.55	1503.03	3757.58	3325.48
2	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ 2.0	2408.48	1605.65	4014.13	2298.81	8929.40	5952.93	14882.33	6720.17
3	ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶಾಭಿವೃದ್ಧಿ	766.37	510.91	1277.28	1124.08	375.00	250.00	625.00	674.46
4	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-3)	-		-	-	-		-	-
5	ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಯೋಜನೆ	0.00	4000.00	4000.00	3997.57	0.00	1000.00	1000.00	892.14
6	ಸುಜಲ–Exit Strategy	0.00	315.42	315.42	271.96	-	-	-	-
7	ರೈತ ಉತ್ಪಾದಕರ ಸಂಸ್ಥೆ ಉತ್ತೇಜನ ಯೋಜನೆ (ರಾಜ್ಯ ವಲಯ)	0.00	500.00	500.00	499.99	0.00	250.00	250.00	247.25
8	REWARD ಯೋಜನೆ	0.00	3750.00	3750.00	0.00	0.00	2500.00	2500.00	93.03
9	ಅಮೃತ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ ಯೋಜನೆ	0.00	1035.00	1035.00	1033.60	0.00	1761.50	1761.50	372.67
8	NABARD RIDF TRANCHE XXVII ಯೋಜನೆ	0.00	480.00	480.00	477.90	-	-	-	-
10	Formation and promotion of 10000 Farmer Producer Organizations ಯೋಜನೆ	550.00	0.00	550.00	402.36	0.00	0.00	0.00	176.35
11	ಅಟಲ್ ಭೂಜಲ ಯೋಜನೆ	-	-	-	-	599.00	0.00	599.00	0.00
	ಒಟ್ಟು ಮೊತ್ತ	**7536.84**	**14738.32**	**22275.16**	**17348.77**	**12157.94**	**13217.46**	**25375.41**	**12501.55**
12	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ								
	(i) ತಡೆಅಣೆ ನಿರ್ಮಾಣ ಕಾರ್ಯಕ್ರಮ	1033.98	689.32	1723.30	1719.17	777.00	518.00	1295.00	0.00
	(ii) ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮ	167.40	111.60	279.00	279.00	0.00	0.00	0.00	0.00
	(iii) ರೈತ ಉತ್ಪಾದಕ ಸಂಸ್ಥೆಗಳ ರಚನೆ	636.58	424.38	1060.96	978.79	0.00	0.00	0.00	0.00
	(iv) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮ	95.06	63.37	158.43	158.40	0.00	0.00	0.00	0.00
	RKVY ಒಟ್ಟು ಮೊತ್ತ	**1933.01**	**1288.68**	**3221.69**	**3135.36**	**777.00**	**518.00**	**1295.00**	**0.00**
	ಮಹಾ ಮೊತ್ತ	**9469.86**	**16026.99**	**25496.85**	**20484.13**	**12934.94**	**13735.46**	**26670.41**	**12501.55**

(*) ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಸೇರಿರುತ್ತದೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	519
ಸದಸ್ಯರ ಹೆಸರು	ಶ್ರೀ ಡಾ|| ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸಬೇಕಾದ ದಿನಾಂಕ	14.9.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ನಾಗಠಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತಾಂಡಾಗಳಲ್ಲಿ ಕೋವಿಡ್ ಸಂದರ್ಭದಲ್ಲಿ ಕುಟುಂಬಗಳಿಗೆ ಆಸರೆಯಾಗಿದ್ದ ಅವಲಂಬಿತರನ್ನು ಕಳೆದುಕೊಂಡು ನಿರ್ಗತಿಕರಾದಂತಹ ಬಡ ಕುಟುಂಬಗಳಿಗೆ ಆರ್ಥಿಕ ಚೇತರಿಕೆಗಾಗಿ ನೆರವಾಗಲು ಸ್ವಯಂ ಉದ್ಯೋಗ ಕೈಗೊಂಡ ಆರ್ಥಿಕ ಸ್ವಾವಲಂಬಿಗಳಾಗಲು ಪ್ರೋತ್ಸಾಹಿಸಲು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ನಾಗಠಾಣ ಕ್ಷೇತ್ರಕ್ಕೆ 2020-21 ನೇ ಸಾಲಿನಲ್ಲಿ ವೈಯಕ್ತಿಕ ಧನ ಸಹಾಯ ಯೋಜನೆಯಡಿ ನೀಡಲಾದ ಗುರಿಗಳನ್ನು ಆಯ್ಕೆ ಮಾಡಿದ ಫಲಾನುಭವಿಗಳಲ್ಲಿ ಶೇ.50 ರಷ್ಟು ಅನುದಾನವನ್ನು ಕಡಿತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	2020-21 ನೇ ಸಾಲಿಗೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಹಂಚಿಕೆಯಾಗಿದ್ದ ಅನುದಾನದಲ್ಲಿ ಶೇ.50 ರಷ್ಟು ಅನುದಾನವನ್ನು ಆರ್ಥಿಕ ಇಲಾಖೆಯ ಸಂಖ್ಯೆ : ಆಇ 164 ವೆಚ್ಚ-3/2020 ದಿನಾಂಕ 2.12.2020 ರಂತೆ ಕಡಿತಗೊಳಿಸಲಾಗಿರುತ್ತದೆ. ಸದರಿ ವಿಷಯವಾಗಿ ಅನುದಾನ ಕೋರಿದ್ದು, 2019-20 ಮತ್ತು 2020-21 ನೇ ಸಾಲಿನ ಆರ್ಥಿಕ ವರ್ಷಗಳು ಮುಕ್ತಾಯಗೊಂಡಿರುವುದರಿಂದ ಈ ಸಾಲುಗಳಲ್ಲಿ ಕಡಿತಗೊಳಿಸಿರುವ ಅನುದಾನ ವನ್ನು ನಿಗಮಕ್ಕೆ ಬಿಡುಗಡೆಗೊಳಿಸಲು ಅವಕಾಶ ವಿರುವುದಿಲ್ಲವೆಂದು ತಿಳಿಸಲಾಗಿದೆ.
ಆ.	ಬಂದಿದಲ್ಲಿ, ಫಲಾನುಭವಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಿಸಿದೆಯೇ; ಈ ಬಗ್ಗೆ ಕೈಗೊಂಡ ಕ್ರಮವೇನು; (ಪೂರ್ಣ ವಿವರಣೆ ನೀಡುವುದು)	
ಇ.	ಹಾಗಿದ್ದಲ್ಲಿ ಇದನ್ನು ಸರಿಪಡಿಸಿ ಕಡಿತ ಮಾಡಲಾದ ಶೇ.50% ರಷ್ಟು ಅನುದಾನವನ್ನು ಮರಳಿ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರಣೆ ನೀಡುವುದು)	
ಈ.	ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ಫಲಾನುಭವಿಗಳು ದಾಖಲಾತಿಗಳ ಸಲ್ಲಿಕೆಗಾಗಿ ಮತ್ತಷ್ಟು ಧನವ್ಯಯ ಮಾಡಿರುವುದರಿಂದ ಕಡಿತ ಮಾಡಲಾದ ಶೇ.50% ರಷ್ಟು ಅನುದಾನವನ್ನು ಯಾವ ಕಾಲಮಿತಿಯಲ್ಲಿ	ಆರ್ಥಿಕ ಇಲಾಖೆಯು ಅನುದಾನವನ್ನು ಬಿಡುಗಡೆ ಮಾಡಲು ಸಹಮತಿ ನೀಡಿರುವುದಿಲ್ಲ.

	ಬಿಡುಗಡೆ ಮಾಡಲಾಗುವುದು? (ಸ್ಪಷ್ಟವಾದ ವಿವರಣೆ ನೀಡುವುದು)	

ಸಕಇ 484 ಎಸ್ ಡಿಸಿ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

DFA/. .422

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 520
ಸದಸ್ಯರ ಹೆಸರು : ಡಾ|| ದೇವಾನಂದ್ ಫುಲಸಿಂಗ್ ಚವಾಣ್
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ವಿಜಯಪುರ ಜಿಲ್ಲೆಯ ನಾಗಠಾಣ ಮತಕ್ಷೇತ್ರ ವ್ಯಾಪ್ತಿಯ ವಿಜಯಪುರ ಹಾಗೂ ಚಡಚಣ ತಾಲ್ಲೂಕಿನ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಸರಿಯಾದ ಬಸ್ ಸಂಚಾರದ ವ್ಯವಸ್ಥೆ ಇಲ್ಲದಿರುವುದರಿಂದ ಮತ್ತು ಕೆಲವಡೆ ಸಕಾಲಕ್ಕೆ ಬಸ್ ಸಂಚಾರದ ಕೊರತೆಯಿಂದಾಗಿ ವಿದ್ಯಾರ್ಥಿಗಳು, ನೌಕರರು, ವ್ಯಾಪಾರಸ್ಥರು, ಆಸ್ಪತ್ರೆಗಳಿಗೆ ಸಂಚರಿಸುವ ರೋಗಿಗಳು ತುಂಬಾ ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಜಯಪುರ ಜಿಲ್ಲೆಯ ನಾಗಠಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿ 19 ಗ್ರಾಮಗಳು, ವಿಜಯಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ 40 ಗ್ರಾಮಗಳು ಹಾಗೂ ಚಡಚಣ ತಾಲೂಕಿನ ವ್ಯಾಪ್ತಿಯಲ್ಲಿ 42 ಗ್ರಾಮಗಳಿದ್ದು, ಸದರಿ ಎಲ್ಲಾ ಗ್ರಾಮಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯಂತೆ ಅನುಸೂಚಿ/ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
ಆ.	ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಸಾರಿಗೆ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)	ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗಳನ್ನು ಪರಿಗಣಿಸಿ ಅವಶ್ಯಕತೆಗನುಗುಣವಾಗಿ ಅನುಸೂಚಿ/ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ.	ಮಹಾರಾಷ್ಟ್ರ ಗಡಿಭಾಗಕ್ಕೆ ಹೊಂದಿಕೊಂಡಿರುವ ನೂತನ ಚಡಚಣ ತಾಲ್ಲೂಕಿನಲ್ಲಿ ಅನುಮೋದನೆಗೊಂಡ ಹೊಸ ಬಸ್ ಘಟಕ ನಿರ್ಮಾಣ ಕಾಮಗಾರಿಯನ್ನು ಆರಂಭಿಸಲು ಆದ ವಿಳಂಭಕ್ಕೆ ಇರುವ ಕಾರಣಗಳೇನು; ಹೊಸ ಬಸ್ ಘಟಕ ಆರಂಭವಾಗದೆ ಇರುವುದರಿಂದ ಚಡಚಣ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಬಸ್ ಸಂಚಾರವಿಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ವಿಷಯ ಸರ್	ಚಡಚಣ ಬಸ್ ಘಟಕ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದ್ದ ಸಂದರ್ಭದಲ್ಲಿ ಕೋವಿಡ್-19ರ ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ತಡೆಯಲು ಲಾಕ್‌ಡೌನ್ ವಿಧಿಸಿದ್ದರಿಂದ, ಬಸ್‌ಗಳ ಸಂಚಾರ ಕಡಿಮೆಯಾಗಿರುತ್ತದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಹಾಗೂ ಡೀಸಲ್ ದರದ ಹೆಚ್ಚಳದಿಂದಾಗಿ ನಿಗಮವು ಪ್ರಸ್ತುತ ಆರ್ಥಿಕ ಸಂಕಷ್ಟದಲ್ಲಿರುತ್ತದೆ. 2022-23ನೇ ಸಾಲಿನಲ್ಲಿ ಮಂಜೂರಾಗಿರುವ ಸರ್ಕಾರದ ಅನುದಾನದಿಂದ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

<table>
<tr><td></td><td>ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ವಿಳಂಬವಾಗಿರುವ ಚಡಚಣ ಬಸ್ ಘಟಕ ನಿರ್ಮಾಣ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಆರಂಭಿಸಲಾಗುವುದು? (ವಿವರಣೆ ನೀಡುವುದು)</td><td>ಆದ್ದರಿಂದ, ಸದರಿ ಘಟಕದ ಕಾಮಗಾರಿಯನ್ನು ಅನುದಾನದ ಲಭ್ಯತೆಯನುಸಾರ ಮುಂದಿನ ದಿನಗಳಲ್ಲಿ ಕೈಗೊಳ್ಳಲು ಪರಿಶೀಲಿಸಲಾಗುವುದು.</td></tr>
<tr><td>ಈ.</td><td>ವಿಜಯಪುರ ವಿಭಾಗದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಬಸ್‌ಗಳ ಸುಗಮ ಸಂಚಾರಕ್ಕೆ ಅಡಚಣೆಯಾಗಿರುವುದಾಗಿ ಅಧಿಕಾರಿಗಳು ಹೇಳಿಕೆ ನೀಡುತ್ತಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆ ಗರಿಷ್ಠಮೂರು ವರ್ಷಗಳಿಗೆ ಹಾಗೂಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷರೂ. 25,000 (ಯೂಜಿಸಿಯ ಜೂನಿಯರ್‌ರಿಸರ್ಚ್ ಪೆಲೋಶಿಫ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಯೂಜಿಸಿ ನಿಯಮಗಳನ್ವಯ ವೇತನ ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
16	ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್ /ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	ಪಾವತಿಸಿದ ಬೋದನಾ ಶುಲ್ಕ

12. ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆರೂ.300/- ರಿಂದರೂ.20,000/-ವರೆಗೆ

13. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ ರೂ.2,00,000/- ಮತ್ತುಭಾಗಶಃ ಶಾಶ್ವತದುರ್ಬಲತೆಯಾದಲ್ಲಿ ರೂ.1,00,000/-

14. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ): ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ
15. ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.60,000/-
16. ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪಾರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠೀತ ಸಂಸ್ಥೆಗಳಿಂದ ತರಬೇತಿ ಮತ್ತು ಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.
17. ಬಿಎಂಟಿಸಿ ಬಸ್ ಪಾಸ್ ಸೌಲಭ್ಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ
18. ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ: ನೋಂದಾಯಿತ ಫಲಾನುಭವಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ
19. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ.
20. ಇಮ್ಯುನಿಟಿ ಬೂಸ್ಟರ್‌ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್‌ಯೋಜನೆ
22. ಮೊಬೈಲ್ ಮೆಡಿಕಲ್ ಕೇರ್ ಯುನಿಟ್
23. ಪೈಲಟ್‌ಟ್ರೈನಿಂಗ್: ಫಲಾನುಭವಿಯ ಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ
25. ನ್ಯೂಟ್ರೀಸನ್ ಕಿಟ್ಸ್:

ಅನುಬಂಧ-4

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:556

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು – ಕಾರ್ಮಿಕ ಕಲ್ಯಾಣ ಯೋಜನೆಗಳ ವಿವರ ;

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಾದ ಕಾರ್ಖಾನೆಗಳು/ಸಂಸ್ಥೆಗಳು/ಪ್ಲಾಂಟೇಶನ್/ಸಾರಿಗೆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ.

1. ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ವರ್ಷ ಜನವರಿ 15 ರೊಳಗೆ ಕಾರ್ಮಿಕರು, ಮಾಲೀಕರು ರೂ. 20 : 40 ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಒಟ್ಟು ರೂ. 60/- ಗಳಂತೆ ವಂತಿಕೆಯನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸತಕ್ಕದ್ದು.
2. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಪಡೆಯಲು ವಿದ್ಯಾರ್ಥಿಗಳು, ಶೈಕ್ಷಣಿಕ ಸಂಸ್ಥೆಗಳು, ಕಾರ್ಖಾನೆಗಳು/ಸಂಸ್ಥೆಗಳು klwb.karnataka.gov.in ಇಲ್ಲಿ ನೊಂದಾಯಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
3. ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳು klwb.karnataka.gov.in ಇಲ್ಲಿ ತಮ್ಮ ಸಂಸ್ಥೆಗಳನ್ನು ನೊಂದಾಯಿಸಿ ವಂತಿಕೆ ಪಾವತಿ ಮಾಡಬೇಕಾಗಿರುತ್ತದೆ.

ಕೆಳಗಿನ ಯೋಜನೆಗಳಿಗೆ ಮಾಸಿಕ ವೇತನ ರೂ. 21,000/- ಗಿಂತ ಮೀರಿರಬಾರದು. ವಯೋಮಿತಿ 18- 60 ವರ್ಷ

1. **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ:** ಪ್ರೌಢ ಶಾಲೆ, (8 ರಿಂದ 10ನೇ ತರಗತಿವರೆಗೆ) ರೂ.3,000/ ಪಿಯುಸಿ/ಡಿಪ್ಲೊಮಾ/ಐಟಿಐ/ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.4,000/-ಪದವಿ ಶಿಕ್ಷಣಕ್ಕಾಗಿ ರೂ.5,000/ ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.6,000/-ಇಂಜಿನೀಯರಿಂಗ್/ವೈದ್ಯಕೀಯ ಶಿಕ್ಷಣಕ್ಕಾಗಿ ರೂ.10,000/-ಗಳ ಪ್ರೋತ್ಸಾಹ ಧನ ನೀಡಲಾಗುವುದು.(ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50 ಹಾಗೂ ಪ.ಜಾ / ಪ.ಪಂಗಡದ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು)
2. **ಕಾರ್ಮಿಕರಿಗೆ ವೈದ್ಯಕೀಯ ನೆರವು :** ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್, ಕ್ಯಾನ್ಸರ್, ಆಂಜಿಯೋಪ್ಲಾಸ್ಟಿ, ಕಣ್ಣು, ಆರ್ಥೋಪೆಡಿಕ್, ಗರ್ಭಕೋಶದ ಶಸ್ತ್ರ ಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ ಚಿಕಿತ್ಸೆಗೆ ಕನಿಷ್ಠ ರೂ. 1,000/-ದಿಂದ ಗರಿಷ್ಠ ರೂ,25,000/-ವರೆಗೆ ಮತ್ತು ಆರೋಗ್ಯ ತಪಾಸಣೆಗೆ ರೂ. 500/-ರಿಂದ ರೂ, 1000/-ವರೆಗೆ ಧನ ಸಹಾಯ ನೀಡಲಾಗುವುದು.
3. **ಕಾರ್ಮಿಕರಿಗೆ ಅಪಘಾತ ಧನ ಸಹಾಯ :** ಕಾರ್ಮಿಕರಿಗೆ ಕೆಲಸದ ವೇಳೆಯಲ್ಲಿ ಅಪಘಾತವಾದಲ್ಲಿ ಕನಿಷ್ಠ ರೂ. 1,000/- ಗರಿಷ್ಠ ರೂ. 10,000/- ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.
4. **ಹೆರಿಗೆ ಭತ್ಯೆ ಸೌಲಭ್ಯ :** ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ತಲಾ ರೂ. 10,000/- ಧನ ಸಹಾಯ ನೀಡಲಾಗುವುದು. ಮಗು ಜನಿಸಿದ 6 ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

ಈ ಕೆಳಗಿನ ಯೋಜನೆಗಳಿಗೆ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18- 60

5. ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ :ಈ ಯೋಜನೆಯ ಸೌಲಭ್ಯ ಪಡೆಯಲು ಮೃತರ ಕುಟುಂಬದ ಅವಲಂಬಿತರು ಕಾರ್ಮಿಕ ಮೃತಪಟ್ಟ ಆರು ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, ರೂ. 10,000/- ಧನ ಸಹಾಯ ನೀಡಲಾಗುವುದು.

6. **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು/ಸರ್ಕಾರೇತರ ಸಂಸ್ಥೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ ರೂ. 1,00,000/- ಧನ ಸಹಾಯ ನೀಡಲಾಗುವುದು.

7. **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ ರೂ. 1,00,000/- ಧನ ಸಹಾಯ ನೀಡಲಾಗುವುದು.

ಧನ ಸಹಾಯವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್ ಮೂಲಕ ಜಮಾ ಮಾಡಲಾಗುವುದು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	557
ಮಾನ್ಯ ಸದಸ್ಯರ ಹೆಸರು	ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿನಿಲಯಗಳೆಷ್ಟು; ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿನಿಲಯಗಳೆಷ್ಟು; ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು; ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳೆಷ್ಟು;(ಸಂಖ್ಯಾಬಲ ಸಹಿತ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ ಇಲಾಖೆಯ ಒಟ್ಟು 116 ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ 84 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ, 07 ಉಚಿತ ಕಟ್ಟಡಗಳಲ್ಲಿ ಹಾಗೂ 25 ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ತಾಲ್ಲೂಕುವಾರು ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
ಆ)	ಹಾಸನ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿನಿಲಯಗಳೆಷ್ಟು; ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿನಿಲಯಗಳೆಷ್ಟು; ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು; ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳೆಷ್ಟು;(ಸಂಖ್ಯಾಬಲ ಸಹಿತ ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದಲ್ಲಿ ಇಲಾಖೆಯ ಒಟ್ಟು 19 ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ 08 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ, 03 ಉಚಿತ ಕಟ್ಟಡಗಳಲ್ಲಿ ಹಾಗೂ 08 ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
ಇ)	ನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿನಿಲಯಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಕೋರಿ ಬಂದಿರುವ ಅರ್ಜಿಗಳೆಷ್ಟು; ಅದರಲ್ಲಿ ಈವರೆಗೆ ಪಡೆದಿರುವ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳೆಷ್ಟು; ಖಾಲಿ ಇರುವು ಸೀಟುಗಳೆಷ್ಟು; ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಕೋರಿ ಬಂದಿರುವ ಅರ್ಜಿಗಳು, ಈವರೆಗೆ ಪ್ರವೇಶ ಪಡೆದಿರುವ ಹಾಗೂ ಖಾಲಿ ಇರುವ ಸೀಟುಗಳ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.

ಈ)	ಹಾಸನ ನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ನೀಡಲು ಅನುಸರಿಸಲಾಗಿರುವ ಮಾನದಂಡಗಳೇನು?(ಸಂಪೂರ್ಣ ಮಾಹಿತಿ ನೀಡುವುದು)	ಪ್ರಸಕ್ತ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್ ಲೈನ್ ಮೂಲಕ ಸಿ.ಇ.ಟಿ ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 230 ಬಿಎಂಎಸ್ 2022 ಬೆಂಗಳೂರು ದಿನಾಂಕ:21-06-2022ರಲ್ಲಿ ಪರಿಷ್ಕೃತ ಪ್ರವೇಶ ನಿಯಮಾವಳಿಗಳನ್ನು ಹೊರಡಿಸಲಾಗಿದ್ದು, ಸದರಿ ನಿಯಮಾವಳಿಗಳ ಪ್ರಕಾರ ತಾಲ್ಲೂಕುವಾರು ಆನ್-ಲೈನ್ ಅರ್ಜಿಗಳನ್ನು ಆಹ್ವಾನಿಸಿ, ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ ಕೌನ್ಸಿಲಿಂಗ್ ಮೂಲಕ ಪ್ರವೇಶ ಕಲ್ಪಿಸಲಾಗುತ್ತಿದೆ.

ಸಂಖ್ಯೆ: ಹಿಂವಕ 532 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ -1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.557ಕ್ಕೆ ~~ಅನುಬಂಧ-1~~

ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಹಾಗೂ ಕಟ್ಟಡಗಳ ವಿವರ.

ಕ್ರ. ಸಂ.	ತಾಲ್ಲೂಕು	ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ			ಮಂಜೂರಾತಿ ಸಂಖ್ಯೆ			ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ			ಬಾಡಿಗೆ ಕಟ್ಟಡದಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ			ಉಚಿತ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ		
		ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು
1	ಆಲೂರು	2	1	3	110	100	210	1	0	1	1	1	2	0	0	0
2	ಅರಕಲಗೂಡು	7	3	10	320	300	620	6	1	7	1	2	3	0	0	0
3	ಅರಸೀಕೆರೆ	11	2	13	560	340	900	10	2	12	1	0	1	0	0	[illegible]
4	ಬೇಲೂರು	2	3	5	95	300	395	1	1	2	1	2	3	0	0	0
5	ಚನ್ನರಾಯಪಟ್ಟಣ	15	7	22	865	810	1675	13	5	18	1	0	1	1	2	[illegible]
6	ಹಾಸನ	12	19	31	580	2100	2680	12	7	19	0	9	9	0	3	[illegible]
7	ಹೊಳೆನರಸೀಪುರ	12	13	25	600	1565	2165	12	10	22	1	1	2	0	1	1
8	ಸಕಲೇಶಪುರ	3	4	7	160	350	510	2	1	3	1	3	4	0	0	0
ಒಟ್ಟು		64	52	116	3290	5865	9155	57	27	84	7	18	25	1	6	7

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಅನುಬಂಧ - 2

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.557ಕ್ಕೆ ~~ಅನುಬಂಧ-2~~

ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ			ಮಂಜೂರಾತಿ ಸಂಖ್ಯೆ			ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ			ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ			ಉಚಿತ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ		
ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು	ಮೆ.ಪೂ.	ಮೆ.ನಂ.	ಒಟ್ಟು
2	17	19	95	2320	2415	2	6	8	0	8	8	0	3	3

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಅನುಬಂಧ - 3

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.557ಕ್ಕೆ ~~ಅನುಬಂಧ~~-3

ವಿದ್ಯಾರ್ಥಿ ನಿಲಯಗಳ ವಿವರ	ಬಾಲಕ/ ಬಾಲಕಿ	ವಿದ್ಯಾರ್ಥಿ ನಿಲಯ ಗಳ ಸಂಖ್ಯೆ	ವಿದ್ಯಾರ್ಥಿ ನಿಲಯದ ಮಂಜೂರಾತಿ ಸಂಖ್ಯೆ	ಪ್ರಸಕ್ತ ಸಾಲಿನಲ್ಲಿ ನವೀಕರಣ ವಿದ್ಯಾರ್ಥಿಗಳ ಸಂಖ್ಯೆ	ಖಾಲಿ ಉಳಿದಿದ್ದ ಸೀಟುಗಳ ಸಂಖ್ಯೆ	ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ	ಪ್ರವೇಶ ನೀಡಿರುವ ಅರ್ಜಿಗಳ ಸಂಖ್ಯೆ	ಪ್ರವೇಶ ದೊರಕದೇ ಉಳಿದ ಅರ್ಜಿಗಳ ಸಂಖ್ಯೆ	ಷರಾ
ಮೆಟ್ರಿಕ್ ಪೂರ್ವ	ಬಾಲಕಿ	1	45	7	38	28	28	0	ಪ್ರಸ್ತುತ ಪಿ.ಯು.ಸಿ ವಿದ್ಯಾರ್ಥಿಗಳಿಗೆ [illegible] ಕಲ್ಪಿಸಲಾಗು[illegible] ವಿದ್ಯಾರ್ಥಿಗ[illegible] ಬರು[illegible] ಖಾಲಿಯು[illegible]
ಮೆಟ್ರಿಕ್ ನಂತರ	ಬಾಲಕಿ	9	1260	1177	83	297	83	214	
ಮೆಟ್ರಿಕ್ ಪೂರ್ವ	ಬಾಲಕ	1	50	6	44	42	42	0	
ಮೆಟ್ರಿಕ್ ನಂತರ	ಬಾಲಕ	8	1060	1003	57	176	57	119	
ಒಟ್ಟು		19	2415	2193	222	543	210	333	

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

DFA/890181

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 558
ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಜಮಖಂಡಿ ನಗರದಲ್ಲಿ ನಿರ್ಮಾಣವಾಗಿರುವ ಬಸ್ ನಿಲ್ದಾಣದ 2ನೇ ಹಂತದ ಕಾಮಗಾರಿಗಳಾದ ಸಿ.ಸಿ. ರಸ್ತೆ ಮತ್ತು ಇನ್ನಿತರೆ ಮೂಲ ಸೌಕರ್ಯಗಳಿಗೆ 5 ಕೋಟಿ ಅನುದಾನಕ್ಕೆ ಯಾವಾಗ ಮಂಜೂರಾತಿ ನೀಡಲಾಗುತ್ತಿದೆ;	ಬಸ್ ನಿಲ್ದಾಣದ ಸಿ.ಸಿ. ರಸ್ತೆ ಮತ್ತು ಇನ್ನಿತರೆ ಮೂಲ ಸೌಕರ್ಯಗಳಿಗೆ 5 ಕೋಟಿ ಅನುದಾನ ಮಂಜೂರಾತಿ ಪ್ರಸ್ತಾವನೆ ಇರುವುದಿಲ್ಲ. ಮುಂದುವರೆದು, ಈಗಾಗಲೇ 2019-20ನೇ ಸಾಲಿನಲ್ಲಿ ಬಸ್ ನಿಲ್ದಾಣದ ಪಶ್ಚಿಮ ದಿಕ್ಕಿನ ಆವರಣವನ್ನು ರೂ.50.00 ಲಕ್ಷಗಳ ವೆಚ್ಚದಲ್ಲಿ ಡಾಂಬರೀಕರಣ ಮಾಡಲಾಗಿದೆ.
ಆ	1ನೇ ಹಂತದ ಕಾಮಗಾರಿ ಮುಗಿದು ಸುಮಾರು ವರ್ಷಗಳಾದರೂ, ಎರಡನೇ ಹಂತದ ಕಾಮಗಾರಿ ವಿಳಂಬವಾಗಲು ಕಾರಣವೇನು;	
ಇ	ಎರಡನೇ ಹಂತದ ಕಾಮಗಾರಿ ಮಾಡದಿರುವುದರಿಂದ ಮಳೆ ಬಂದಾಗ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಸ್ ನಿಲ್ದಾಣದ ಮುಂಭಾಗದಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುತ್ತಿದ್ದು, ಇದಕ್ಕೆ ಮುಂಭಾಗದಲ್ಲಿರುವ ನಗರ ಸಭೆಗೆ ಸೇರಿದ ತೆರೆದ ಚರಂಡಿ ಮೇಲೆ ಡಬ್ಬಾ ಅಂಗಡಿಗಳಿರುತ್ತವೆ. ಅವುಗಳನ್ನು ತೆರವುಗೊಳಿಸಿ ಚರಂಡಿಯನ್ನು ನಿಯಮಿತವಾಗಿ ಸ್ವಚ್ಛಗೊಳಿಸುವಂತೆ ಸ್ಥಳೀಯ ನಗರ ಸಭೆಯನ್ನು ಕೋರಲಾಗಿರುತ್ತದೆ. ಆದಾಗ್ಯೂ ಮುಂದಿನ ಆರ್ಥಿಕ ವರ್ಷದಲ್ಲಿ ವಾ.ಕ.ರ.ಸಾ.ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಬಸ್ ನಿಲ್ದಾಣದ ಮುಂಭಾಗವನ್ನು ಎತ್ತರಿಸಿ ಕಾಂಕ್ರೀಟೀಕರಣ ಮಾಡಲು ಅಗತ್ಯ ಪ್ರಸ್ತಾವನೆಯನ್ನು ಅಳವಡಿಸಿಕೊಳ್ಳಲಾಗುವುದು.
ಈ	ಬಂದಿದ್ದಲ್ಲಿ, ಜಮಖಂಡಿ ಮತಕ್ಷೇತ್ರದ ಸಾವಳಗಿ ಹೋಬಳಿಯಲ್ಲಿ ಮಂಜೂರಾಗಿರುವ ಬಸ್ ನಿಲ್ದಾಣವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವ ಕಾಲಮಿತಿಯಲ್ಲಿ ಮುಕ್ತಾಯಗೊಳಿಸಲಾಗುವುದು?	ಗುತ್ತಿಗೆದಾರರಿಗೆ ಕೆಲಸದ ಆದೇಶವನ್ನು ದಿನಾಂಕ: 06-09-2022 ರಂದು ನೀಡಲಾಗಿದೆ. ಭೂಮಿ ಪೂಜೆಯನ್ನು ನೆರವೇರಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಟೆಂಡರ್ ಷರತ್ತಿನಂತೆ 09 ತಿಂಗಳ ಕಾಲಾವಕಾಶ ನೀಡಲಾಗಿದೆ.

ಸಂಖ್ಯೆ: ಟಿಡಿ 186 ಟಿಸಿಕ್ಯೂ 2022

(ಬಿ. ಶ್ರೀರಾಮುಲು)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	559
ಮಾನ್ಯ ಸದಸ್ಯರ ಹೆಸರು	:	ಶ್ರೀ ಆನಂದ್ ಸಿದ್ದು ನ್ಯಾಮಗೌಡ
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಜಮಖಂಡಿ ಮತಕ್ಷೇತ್ರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸಂಖ್ಯಾಬಲ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ.
ಆ)	ಜಮಖಂಡಿ ಮತಕ್ಷೇತ್ರಕ್ಕೆ ಹೊಸದಾಗಿ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೊಸದಾಗಿ ವಿದ್ಯಾರ್ಥಿನಿಲಯ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಹೌದು. ಸಮಾಜ ಕಲ್ಯಾಣ ಇಲಾಖೆಯ 27 ಮೆಟ್ರಿಕ್ ಪೂರ್ವ ಮತ್ತು 81 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಈ ಕೆಳಕಂಡಂತೆ ಹಿಂಬರಹ ನೀಡಿರುತ್ತದೆ. "Proposal of Administrative Department has been examined. As it was suggested during the preparation of the budget itself that new hostels or Schools cannot be sanctioned this year due to fiscal stress, Finance Department regrets to the proposal of AD."

ಸಕಇ 504 ಪಕವಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 560

ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)

ಉತ್ತರಿಸುವ ದಿನಾಂಕ : 14-09-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಾಗಲಕೋಟೆ ಜಿಲ್ಲೆಯಲ್ಲಿ ಕೃಷಿ ಯಂತ್ರೋಪಕರಣಗಳಿಗಾಗಿ ಪ್ರಸಕ್ತ ವರ್ಷ ಮಂಜೂರು ಮಾಡಿರುವ ಅನುದಾನವೆಷ್ಟು; (ಮತ ಕ್ಷೇತ್ರವಾರು ವಿವರ ನೀಡುವುದು)</td><td>2022-23ನೇ ಸಾಲಿನಲ್ಲಿ ಆಗಸ್ಟ ಅಂತ್ಯದವರೆಗೆ ಬಾಗಲಕೋಟೆ ಜಿಲ್ಲೆಯ ಮತಕ್ಷೇತ್ರವಾರು ಕೃಷಿ ಯಂತ್ರೋಪಕರಣಗಳಿಗೆ ಒದಗಿಸಲಾದ ಅನುದಾನದ ವಿವರ ಈ ಕೆಳಕಂಡಂತಿವೆ;

ಆರ್ಥಿಕ: ರೂ.ಲಕ್ಷಗಳಲ್ಲಿ

<table>
<tr><th>ಕ್ರ. ಸಂ</th><th>ಮತಕ್ಷೇತ್ರ</th><th>ಒಟ್ಟು</th></tr>
<tr><td>1.</td><td>ಬಾದಾಮಿ</td><td>4.848</td></tr>
<tr><td>2.</td><td>ಬಾಗಲಕೋಟೆ</td><td>3.732</td></tr>
<tr><td>3.</td><td>ಹುನಗುಂದ</td><td>14.928</td></tr>
<tr><td>4.</td><td>ಬೀಳಗಿ</td><td>6.852</td></tr>
<tr><td>5.</td><td>ಜಮಖಂಡಿ</td><td>8.200</td></tr>
<tr><td>6.</td><td>ಮುಧೋಳ</td><td>1.5700</td></tr>
<tr><td>7.</td><td>ತೇರದಾಳ</td><td>4.500</td></tr>
<tr><td colspan="2">ಒಟ್ಟು</td><td>44.630</td></tr>
</table></td></tr>
<tr><td>ಆ)</td><td>ಸಾಮಾನ್ಯ ವರ್ಗದವರಿಗೆ ಕೃಷಿ ಯಂತ್ರೋಪಕರಣಗಳ ರಿಯಾಯಿತಿ ದರವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ; ಹಾಗಿದ್ದಲ್ಲಿ, ಯಾವಾಗ ರಿಯಾಯಿತಿ ದರವನ್ನು ಹೆಚ್ಚಿಸಲಾಗುವುದು;</td><td>ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.1.00 ಲಕ್ಷದವರೆಗೆ ಸರ್ಕಾರದ ಆದೇಶ ಸಂಖ್ಯೆ: ಕೃಇ/63/ ಕೃಮಸ/2015/ ದಿನಾಂಕ:16.05.2015 ಮತ್ತು 05.09.2015ರನ್ವಯ ಒದಗಿಸಲಾಗಿದೆ.
ಸಾಮಾನ್ಯ ವರ್ಗದವರಿಗೆ ಕೃಷಿ ಯಂತ್ರೋಪಕರಣಗಳ ರಿಯಾಯಿತಿ ದರವನ್ನು ಹೆಚ್ಚಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
</table>

ಇ)	ಸುಮಾರು 3 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಕಬ್ಬು ಕಟಾವು ಮೆಷಿನ್‌ಗಳಿಗೆ ಸಬ್ಸಿಡಿ ಎಷ್ಟು ನೀಡಲಾಗಿದೆ; ಇನ್ನು ಬಾಕಿ ಉಳಿದ ಪ್ರಕರಣಗಳೆಷ್ಟು?	2020-21 ಮತ್ತು 2021-22ನೇ ಸಾಲಿನಲ್ಲಿ ರಾಜ್ಯದಲ್ಲಿ ಕಬ್ಬು ಕಟಾವು ಮೆಷಿನ್‌ಗಳಿಗೆ ಸಬ್ಸಿಡಿ ನೀಡಲಾಗಿರುವುದಿಲ್ಲ. 2019-20ನೇ ಸಾಲಿನಲ್ಲಿ 110 ಯಂತ್ರಗಳಿಗೆ ಸಹಾಯಧನ ಒದಗಿಸಲಾಗಿದೆ. ರಾಜ್ಯದಲ್ಲಿ ಇಲಾಖೆಗೆ ನಿಯಮಾನುಸಾರ ಅರ್ಜಿ ಸಲ್ಲಿಸಿ, ನೀಡಿದ ಮಾರ್ಗಸೂಚಿಯನ್ವಯ ದಾಖಲಾತಿಗಳನ್ನು ಸಲ್ಲಿಸಿ ಇಲಾಖೆಯಿಂದ ಅನುಮತಿ ಪಡೆದು ಖರೀದಿಸಿದ ಯಂತ್ರಗಳಿಗೆ "Credit linked" ಸಹಾಯಧನವನ್ನು ಒದಗಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಇಲಾಖೆಗೆ ನಿಯಮಾನುಸಾರ ಅರ್ಜಿ ಸಲ್ಲಿಸಿದ, ಮಾರ್ಗಸೂಚಿ ಅನುಸರಿಸಿದ ಯಾವುದೇ ಬಾಕಿ ಪ್ರಕರಣಗಳು ಇರುವುದಿಲ್ಲ.

ಸಂಖ್ಯೆ: AGRI-ASC/71/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	561
ಉತ್ತರಿಸಬೇಕಾದ ದಿನಾಂಕ	:	14.09.2022
ಸದಸ್ಯರ ಹೆಸರು	:	ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	"ಅಟಲ್ ಬಿಹಾರಿ ಕ್ರೀಡಾ ಸಂಕುಲ" ವನ್ನು ಯಳ್ಳೂರು ಗ್ರಾಮದ ಸರ್ವೆ ನಂ.1142 ರಲ್ಲಿನ ಎಷ್ಟು ಎಕರೆ ಪ್ರದೇಶದಲ್ಲಿ ನಿರ್ಮಿಸುವ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆ ಹಾಗೂ ಎಷ್ಟು ದಿನಗಳಾಗಿವೆ; ಇದರ ಪ್ರಸ್ತಾವನೆಯ ಅನುಮೋದನೆಗೆ ಇನ್ನೂ ಎಷ್ಟು ಕಾಲಾವಕಾಶದ ಅವಶ್ಯಕತೆ ಇರುತ್ತದೆ ಇಷ್ಟೊಂದು ಕಾಲಾವಕಾಶದ ಅವಶ್ಯಕತೆ ಇದೆಯೇ; ಇದ್ದಲ್ಲಿ ಕಾರಣವೇನು?	ಬೆಳಗಾವಿ ತಾಲೂಕಿನ ಯಳ್ಳೂರ ಗ್ರಾಮದ ಸರ್ಕಾರಿ ಗಾಯರಾಣಾ ಸರ್ವೆ ನಂ. 1142 ರಲ್ಲಿನ ಕ್ಷೇತ್ರ 66ಎ-17ಗುಂ ಪೈಕಿ 40ಎ-00ಗುಂ ಜಮೀನನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ ಉಚಿತವಾಗಿ ಮಂಜೂರು ಮಾಡಲು ಜಿಲ್ಲಾಧಿಕಾರಿಗಳು, ಬೆಳಗಾವಿ ರವರ ಪತ್ರ ಸಂಖ್ಯೆ.ಕಂಶಾ/ ಎಲ್.ಜಿ.ಎಲ್/ವಿವ-50/2021-22, ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ದಿನಾಂಕ 07/02/2022 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಬೆಳಗಾವಿ ತಾಲ್ಲೂಕಿನ ಸರ್ಕಾರಿ ಗಾಯರಾಣಾ ಸರ್ವೆ ನಂ. 1142 ರಲ್ಲಿನ ಕ್ಷೇತ್ರ 66 ಎ- 17 ಗುಂ ಪೈಕಿ 40ಎ-00 ಗುಂ ಜಮೀನನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ -97(4) ರಡಿ ನಿಯಮ-22ಎ(3)(i)ರಡಿ "ಅಟಲ್ ಬಿಹಾರಿ ವಾಜಪೇಯಿ ಕ್ರೀಡಾ ಸಂಕುಲ" ನಿರ್ಮಿಸಲು ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಗೆ ಉಚಿತವಾಗಿ ಮಂಜೂರು ಮಾಡಲು ಕಂದಾಯ ಇಲಾಖೆಯಿಂದ ದಿನಾಂಕ: 07.02.2022ರಂದು ಪೂರ್ವಾನುಮೋದನೆ ನೀಡಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್ ಡಿ74ಎಲ್ ಜಿಪಿ 2012 ದಿನಾಂಕ: 12.03.2012ರಡಿ ಬಿ ಖರಾಬ್ ಜಮೀನುಗಳನ್ನು 'ಬ' ಶೀರ್ಷಿಕೆಯಿಂದ ರದ್ದುಗೊಳಿಸುವ ಮುನ್ನ ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಆಕ್ಷೇಪಣೆ ಕರೆದು ಅವುಗಳನ್ನು ಪರಿಶೀಲಿಸಿ, ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಕಂಡುಬಂದಲ್ಲಿ, 'ಬಿ' ಖರಾಬ್ ಜಮೀನುಗಳನ್ನು ಶೀರ್ಷಿಕೆಯಿಂದ ರದ್ದುಪಡಿಸಲು ಅವಕಾಶ ಕಲ್ಪಿಸಿದ್ದು, ಅದರಂತೆ ಸರ್ವಾಜನಿಕರ ಆಕ್ಷೇಪಣೆ ಕೋರಿ 1 ತಿಂಗಳ ಕಾಲಾವಧಿ ನೀಡಿ, ಅಧಿಸೂಚನೆಯನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ದಿನಾಂಕ: 07-02-2022 ರಂದು ಹೊರಡಿಸಿರುತ್ತಾರೆ. ಯಳ್ಳೂರು ಗ್ರಾಮ ಪಂಚಾಯತ ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ದಿನಾಂಕ 10/03/2022 ರಂತೆ ಸದರಿ ಜಮೀನನ್ನು ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ ಉಚಿತವಾಗಿ ಮಂಜೂರು ಮಾಡುವ ಕುರಿತು ಜಿಲ್ಲಾಧಿಕಾರಿಗಳಿಗೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

		ಆದ್ದರಿಂದ ಸದರಿ ಪ್ರಕರಣವು ಇನ್ನೂ ಜಿಲ್ಲಾಧಿಕಾರಿಗಳು, ಬೆಳಗಾವಿ ರವರ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಇಲಾಖೆಗೆ ಹಸ್ತಾಂತರವಾಗಿರುವುದಿಲ್ಲ.
ಆ)	ಬೆಳಗಾವಿ ದಕ್ಷಿಣ ಮತಕ್ಷೇತ್ರದ ಯಳ್ಳೂರು ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಿಸುವ ಉದ್ದೇಶವು ಸರ್ಕಾರಕ್ಕೆ ಇದೆಯೇ; ಈ ಕ್ರೀಡಾಂಗಣದ ನಿರ್ಮಾಣಕ್ಕೆ ಹಾಕಿಕೊಂಡಿರುವ ಸರ್ಕಾರದ ರೂಪುರೇಷೆಗಳೇನು; (ವಿವರ ನೀಡುವುದು)	ನಿವೇಶನ ಲಭ್ಯವಾದ ನಂತರ ಪರಿಶೀಲಿಸಲಾಗುವುದು. ನಿವೇಶನವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರ ಆಗದೇ ಇರುವುದರಿಂದ, ಯಾವುದೇ ರೂಪುರೇಷೆಗಳನ್ನು ರಚಿಸಿರುವುದಿಲ್ಲ.
ಇ)	ಅನುಮೋದನೆಗೆ ಅನಗತ್ಯ ವಿಳಂಬವಾಗಿಲ್ಲವೇ; ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣರಾದವರ ಮೇಲೆ ಯಾವ ಕ್ರಮಗಳನ್ನು ಕೈಕೊಳ್ಳಲಾಗಿದೆ;	ಅಗತ್ಯ ಜಮೀನು ಹಸ್ತಾಂತರವಾಗದೇ ಇರುವುದರಿಂದ ವಿಳಂಬದ ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ಈ ಕ್ರೀಡಾ ಸಂಕುಲವನ್ನು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಮಾಡಲು ಕೋರಲಾಗಿದೆಯೇ; ಹಾಗಿದ್ದಲ್ಲಿ ಅಂದಾಜು ಮೊತ್ತವೆಷ್ಟು;	ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಮಾಡಲು ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಇಲಾಖೆಯನ್ನು ಕೋರಲಾಗಿದೆ. ಅಂದಾಜು ರೂ 50.00 ಕೋಟಿಗಳು.
ಉ)	ರಾಜ್ಯದಲ್ಲಿ ಯಾವ ಯಾವ ನಗರ, ಪಟ್ಟಣ, ಗ್ರಾಮಗಳಲ್ಲಿ ನೂತನ ಕ್ರೀಡಾಂಗಣಗಳನ್ನು ನಿರ್ಮಿಸುವ ಉದ್ದೇಶವನ್ನು ಹೊಂದಲಾಗಿದೆ; ಈ ಕುರಿತು ಯಾವ ಪ್ರದೇಶಗಳಿಂದ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ?	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಪ್ರಸ್ತುತ ಅನುದಾನ ಲಭ್ಯತೆಗನುಗುಣವಾಗಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಾತ್ರ ಕ್ರೀಡಾಂಗಣಗಳನ್ನು ನಿರ್ಮಿಸುವ ಯೋಜನೆ ಇರುತ್ತದೆ. ಗ್ರಾಮ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ತಲಾ ರೂ.10.00 ಲಕ್ಷದಲ್ಲಿ ಕ್ರೀಡಾ ಅಂಕಣಗಳನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದ್ದು, ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ.504 ಕೋಟಿ ಕಾಯ್ದಿರಿಸಲಾಗಿದೆ.

ವೈಎಸ್‌ಡಿ-ಇಬಿಬಿ/**120/2022**

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು

ಕರ್ನಾಟಕ ವಿಧಾನ ಸಭೆ

1 ಮಾನ್ಯ ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ)

2 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 562

3 ಉತ್ತರಿಸಬೇಕಾದ ದಿನಾಂಕ : 14-09-2022

4 ಉತ್ತರಿಸುವ ಸಚಿವರು : ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	100 ಹಾಸಿಗೆಗಳ ಕಾರ್ಮಿಕ ರಾಜ್ಯ ಆಸ್ಪತ್ರೆಯನ್ನು ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮಚ್ಛೆ ಗ್ರಾಮದಲ್ಲಿ ನಿರ್ಮಿಸುವ ಉದ್ದೇಶವು ಸರ್ಕಾರಕ್ಕಿದೆಯೇ ಇದ್ದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗುವುದು. ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ. ನಿರ್ಮಾಣಕ್ಕಾಗಿ ಸರ್ಕಾರವು ಅನುಸರಿಸುವ ಕ್ರಮಗಳೇನು? (ವಿವರ ಒದಗಿಸುವುದು)	ಹೌದು. 100 ಹಾಸಿಗೆಗಳ ಕಾರ್ಮಿಕ ರಾಜ್ಯ ಆಸ್ಪತ್ರೆಯನ್ನು ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮಚ್ಛೆ ಗ್ರಾಮದಲ್ಲಿ 05 ಎಕರೆ ಜಮೀನಿನಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಸರ್ಕಾರದ ಪತ್ರ ಸಂಖ್ಯೆ.ಎಲ್‌ಡಿ 294 ಎಲ್ ಎಸ್ ಐ 2021, ದಿನಾಂಕ.17.05.2022 ರಂದು ಕಾರ್ಮಿಕರ ರಾಜ್ಯ ವಿಮಾ ನಿಗಮ, ನವದೆಹಲಿ ಇವರಿಗೆ Proforma-A ನಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕಾರಾವಿ ನಿಗಮದ ಅನುಮತಿ ದೊರೆತ ನಂತರ ಇ.ಎಸ್.ಐ ಆಸ್ಪತ್ರೆಯನ್ನು ಕಾರಾವಿ ನಿಗಮದ ನಾರ್ಮ್ಸ್ ಪ್ರಕಾರ ಪ್ರಾರಂಭಿಸಲು ಕ್ರಮವಹಿಸಲಾಗುತ್ತದೆ.
(ಆ)	ಪ್ರಸ್ತುತ ಬೆಳಗಾವಿ ನಗರದ ಅಶೋಕನಗರದಲ್ಲಿರುವ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯು ಶಿಥಿಲಾವಸ್ಥೆಯಲ್ಲಿದ್ದು ಕಾರ್ಮಿಕರ ಹಿತದೃಷ್ಟಿಯಿಂದ ಈ ಆಸ್ಪತ್ರೆಯನ್ನು ಕೂಡಲೇ ಸ್ಥಳಾಂತರಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸ್ಥಳಾಂತರ ಮಾಡಲು ಕೈಗೊಂಡಿರುವ ಕ್ರಮಗಳೇನು;	ಹೌದು. ಬೆಳಗಾವಿ ನಗರದ ಅಶೋಕನಗರದಲ್ಲಿರುವ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಲು ಸೂಕ್ತವಾದ ಕಟ್ಟಡವನ್ನು ಗುರುತಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿರುತ್ತದೆ.
(ಇ)	ತಾತ್ಕಾಲಿಕವಾಗಿ ಆಸ್ಪತ್ರೆಯನ್ನು ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮಚ್ಛೆ ಗ್ರಾಮದಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಆರಂಭಿಸಲು ಏನಾದರೂ ಅನಾನುಕೂಲತೆ ಇದೆಯೇ;	ಪರಿಶೀಲನೆಯಲ್ಲಿರುತ್ತದೆ.

(ಈ)	ಸಮಾಜ ಕಲ್ಯಾಣ ಇಲಾಖೆಯ ಜಾಗವನ್ನು ಕೊಡಲು ಒಪ್ಪಿಕೊಂಡು ಜಿಲ್ಲಾಧಿಕಾರಿಗಳು ಪ್ರಸ್ತಾವನೆ ಹಾಗೂ ನಿರಾಕ್ಷೇಪಣೆಯನ್ನು ಸಲ್ಲಿಸಿರುವುದು ನಿಜವೆ; ವಿನಾಕಾರಣ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಮುಂಬರುವ ದಿನಗಳಲ್ಲಿ ಕೂಡಲೇ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ;	ಬೆಳಗಾವಿ ಜಿಲ್ಲಾಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆಯ ಅಧೀನಕ್ಕೆ ಬರುವ ನಿರಾಶ್ರಿತರ ಪರಿಹಾರ ಕೇಂದ್ರ, ಮಚ್ಚೆ ಗ್ರಾಮ, ಬೆಳಗಾವಿಯ 5 ಎಕರೆ ಜಮೀನನ್ನು ಕಾರ್ಮಿಕ ಇಲಾಖೆಯ 100 ಹಾಸಿಗೆಯುಳ್ಳ ಆಸ್ಪತ್ರೆ ನಿರ್ಮಾಣಕ್ಕಾಗಿ ಮಂಜೂರು ಮಾಡಲು ನಿರ್ಣಯಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ನೀಡಿರುತ್ತಾರೆ. ಕಾರಾವಿ ನಿಗಮದ ಪತ್ರ ಸಂಖ್ಯೆ.53.W.17.66.V.2011.PMD.Belgaum, ದಿನಾಂಕ.01.09.2022 ರಂದು ಕಾರಾವಿ ನಿಗಮದ ನಾಮ್ಸ್ ಪ್ರಕಾರ ಸದರಿ ಪ್ರದೇಶದಲ್ಲಿ 5.00 ಎಕರೆ ಜಮೀನನ್ನು ಮಂಜೂರು ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರನ್ನು ಕೋರಿ ಪತ್ರ ಬರೆಯಲಾಗಿರುತ್ತದೆ. ಮಂಜೂರಾದ ಜಮೀನನ್ನು ಪ್ರಾದೇಶಿಕ ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ನಿಗಮ, ಬೆಂಗಳೂರು ಇವರ ಹೆಸರಿಗೆ ನೋಂದಾಯಿಸಿಕೊಳ್ಳಲು ಕ್ರಮವಹಿಸಲಾಗುತ್ತದೆ.
ಉ)	ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮದಲ್ಲಿ ಕಾರ್ಮಿಕ ರಾಜ್ಯ ಆಸ್ಪತ್ರೆಯನ್ನು ಆರಂಭಿಸುವ ಕುರಿತು ಇಎಸ್ಐ ಗೆ ಪ್ರಸ್ತಾನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿದ್ದಲ್ಲಿ ಯಾವಾಗ ಸಲ್ಲಿಸಲಾಗಿದೆ? (ವಿವರ ನೀಡುವುದು)	ಸರ್ಕಾರದ ಪತ್ರ ಸಂಖ್ಯೆ.ಎಲ್‌ಡಿ 294 ಎಲ್ ಎಸ್ ಐ 2021, ದಿನಾಂಕ.17.05.2022 ರಂದು ಕಾರ್ಮಿಕರ ರಾಜ್ಯ ವಿಮಾ ನಿಗಮ, ನವದೆಹಲಿ ಇವರಿಗೆ Proforma-A ನಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. [ಪ್ರತಿ ಲಗತ್ತಿಸಿದೆ]

ಕಡತ ಸಂಖ್ಯೆ: LD-LSI/128/2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

67

GOVERNMENT OF KARNATAKA

No. LD 294 LSI 2021

Karnataka Government Secretariat
Vikasa soudha
Bengaluru, Dated:17-05-2022.

From,

Secretary to Government,
Labour Department,
Vikasa soudha, Bengaluru,

To

The Director General,
ESI Corporation,
Panchadeep Bhavan,
New Delhi – 110002.

Sir,

Sub:- Commissioning of new 100 bedded ESI Hospital in Mache Grama, Belagavi District, Karnataka State regarding.

Ref:- 1) Letter No.53.Kar.Inspn.Misc.2017-18, Dated:04-05-2021 From Regional Director ESIC, Binnipet, Bangalore.

2) Letter No. ESIS/ಅಭಿವೃದ್ಧಿ/190/20-21, Dated: 16-05-2022. From Director, ESIS Medical Service.

*****

With reference to the above subject, I am directed to enclose here with copy of letter dated: 16-05-2022 & Proforma-A for proposal of setting up of New 100 bedded ESI Hospital in Mache, Belagavi District for the State of Karnataka in the prescribed format for taking further needful action in the matter.

(Approved by Hon'ble Labour Minister)

Yours faithfully

Vijaya N 17/5/2022

(Vijaya.N)
Desk officer-05(ESI)
Labour Department
(ESIS Medical Services)

O/C

17/5/22

Copy to:

Director, ESIS Medical Services, Rajajinagar, Bengaluru.

Proforma-A

Proforma for proposal of setting up of new ESI Hospital by the State Government of Karnataka.

<table>
<tr><th>Sl No</th><th>Subject</th><th>Reply</th></tr>
<tr><td>1.</td><td>Location of the new proposed Hospital</td><td>Machhe Belagavi Dist.</td></tr>
<tr><td>2.</td><td>(a) Existing ESIC/ESIS Hospital services in the area:
(b) Distance from the nearest ESIC/ESIS hospital</td><td>ESI Hospital Belgaum

13.4 Kms</td></tr>
<tr><td>3.</td><td>Have you enclosed diagram/site map showing location of Hospital?</td><td>No</td></tr>
<tr><td>4.</td><td>Existing No. of IP's in the catchment area (within 25kms of radius of proposed hospital).</td><td>35840</td></tr>
<tr><td>5.</td><td>Proposed no. of beds (for hospital) based on ESIC Norms.</td><td>100 Bedded</td></tr>
<tr><td>6.</td><td>Consent for offer of land free of cost.
<table>
<tr><th>No of beds</th><th>Area requirement</th></tr>
<tr><td>30-100</td><td>5 Acres</td></tr>
<tr><td>200
300</td><td>8 Acres</td></tr>
</table></td><td>Yes</td></tr>
<tr><td>7.</td><td>Comments on connectivity by road/rail and approachability from the main road</td><td>Connected by Road/Rail</td></tr>
<tr><td>8.</td><td>Consent of the state to provide the medical/para-medical / ministerial / support staff for the proposed ESIS hospital- As per Annexure-1.</td><td>Yes</td></tr>
<tr><td>9.</td><td>Consent for providing Equipments & Instruments as per ESIC Norms-Annexure-II</td><td>Yes</td></tr>
<tr><td>10.</td><td>Consent for making provision of essential drugs- Annexure-III</td><td>Yes</td></tr>
<tr><td>11.</td><td>Do you need staff quarters for the hospital?</td><td>Yes</td></tr>
</table>

Date:

Signature of the Competant Authority of the State Govt.

MANOJ JAIN I.A.S.
Secretary to Government
Labour Department

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	563
ಉತ್ತರಿಸಬೇಕಾದ ದಿನಾಂಕ	:	14.09.2022
ಸದಸ್ಯರ ಹೆಸರು	:	ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ. ಸಂ.	ಪ್ರಶ್ನೆ	ವಿವರ
ಅ)	ಬೆಳಗಾವಿಯ ಪವನಾಂಜನೇಯ ಎಂಬ ಬಿರುದು ಪಡೆದ ದಿ: ಪಡೆಪ್ಪಾ ದರೆಪ್ಪಾ ಚೌಗಲೆ ಇವರು ಸನ್ 1900ರಲ್ಲಿ ನಡೆದ ಒಲಿಂಪಿಕ್ಸ್ ನಲ್ಲಿ ಭಾರತದ ಪರವಾಗಿ ಸ್ಪರ್ಧಿಸಿದ್ದ ಮೊದಲ Athletic ಕ್ರೀಡಾಪಟುವಾಗಿದ್ದು, ಅವರ ಹೆಸರನ್ನು ಅಂತರಾಷ್ಟ್ರೀಯ ಒಲಂಪಿಕ್ಸ್ ಇತಿಹಾಸಕಾರರ ಸಂಘಟನೆ ಸ್ಮರಣಿಕೆಯಲ್ಲಿ ದಾಖಲಿಸುವ ಕುರಿತು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಬೆಳಗಾವಿಯ ಪವನಾಂಜನೇಯ ಎಂಬ ಬಿರುದು ಪಡೆದ ದಿ: ಪಡೆಪ್ಪಾ ದರೆಪ್ಪಾ ಚೌಗಲೆ ಇವರು ಸನ್ 1920 ರಲ್ಲಿ ನಡೆದ ಒಲಿಂಪಿಕ್ಸ್ ನಲ್ಲಿ ಭಾರತದ ಪರವಾಗಿ ಸ್ಪರ್ಧಿಸಿದ್ದ ಮೊದಲ Athletic ಕ್ರೀಡಾಪಟುವಾಗಿದ್ದು ಅವರ ಹೆಸರನ್ನು ಅಂತರಾಷ್ಟ್ರೀಯ ಒಲಂಪಿಕ್ಸ್ ಇತಿಹಾಸಕಾರರ ಸಂಘಟನೆ ಸ್ಮರಣಿಕೆಯಲ್ಲಿ ದಾಖಲಿಸುವ ಕುರಿತು ಭಾರತೀಯ ಒಲಂಪಿಕ್ ಸಂಸ್ಥೆಯು ಕ್ರಮವಹಿಸಬೇಕಾಗಿರುತ್ತದೆ
ಆ)	ದಿ: ಪಡೆಪ್ಪಾ ಧರೆಪ್ಪಾ ಚೌಗಲೆ ಇವರ ಸಾಧನೆಗೆ 100 ವರ್ಷಗಳು ತುಂಬಿದೆ, ಈ ಕುರಿತು ಶತಮಾನದ ಸಂಭ್ರಮೋತ್ಸವ ಆಚರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಆಚರಿಸಲಾಗುವುದು;	ದಿ|| ಪಡೆಪ್ಪಾ ಧರೆಪ್ಪಾ ಚೌಗುಲೆ ರವರ ಸಾಧನೆಗೆ 2020ಕ್ಕೆ 100 ವರ್ಷಗಳು ಗತಿಸಿದ್ದು, ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಶತಮಾನ ಸಂಭ್ರಮೋತ್ಸವವನ್ನು ಆಚರಿಸಿರುವುದಿಲ್ಲ. ಶತಮಾನದ ಸಂಭ್ರಮೋತ್ಸವ ಆಚರಿಸುವ ಯಾವುದೇ ಯೋಜನೆಯು ಸರ್ಕಾರದ ಮುಂದಿರುವುದಿಲ್ಲ.
ಇ)	ಅಂತರಾಷ್ಟ್ರೀಯ ಹಾಕಿ ಪಟುವಾಗಿರುವ ಬಂಡು ಪಾಟೀಲ ಇವರು ಬೆಳಗಾವಿಯವರಾಗಿದ್ದು, ಇವರೂ ಕೂಡಾ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಹಾಕಿ ಕ್ರೀಡೆಗಳಲ್ಲಿ ಭಾಗವಹಿಸಿದ್ದು, ಅವರ ಸ್ಮರಣಾರ್ಥವಾಗಿ ವಿವಿಧ ಕ್ರಮ ಕೈಗೊಳ್ಳುವಂತೆ ಕೋರಲಾಗಿರುವುದೇ;	ಈ ಬಗ್ಗೆ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.
ಈ)	ದಿ; ಪಡೆಪ್ಪಾ ಧರೆಪ್ಪಾ ಚೌಗುಲೆ ಹಾಗೂ ಬಂಡು ಪಾಟೀಲ ಇವರುಗಳ ಕುರಿತು ಈವರೆಗೆ ಸರ್ಕಾರವು ಕೈಗೊಂಡಿರುವ ಮತ್ತು ಕೈಗೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಹೊರತಂದಿರುವ HALL OF FAME, Sporting Legends of Karnataka ಪುಸ್ತಕದಲ್ಲಿ ದಿ: ಪಡೆಪ್ಪಾ ಚೌಗಲೆ ಇವರ ಹೆಸರನ್ನು ಸೇರಿಸಿ ಅವರಿಗೆ ಗೌರವವನ್ನು ನೀಡಲಾಗಿದೆ (ಅನುಬಂಧದಲ್ಲಿ ನೀಡಲಾಗಿದೆ).

ವೈಎಸ್‌ಡಿ-ಇಬಿಬಿ/121/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು



'hadeppa Dareppa Chaugule (1902-1958) was India's First Olympic Marathon Runner. He hailed fro
:he town of Belgaum in Karnataka. He represented India in the 1920 Summer Olympics in Antwer
3elgium. He was called Pavananjaya.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	566
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ(ಹೊಳೆನರಸೀಪುರ)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	14.09.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ತೋಟಗಾರಿಕೆ ಬೆಳೆಗಾರರ ಹಿತದೃಷ್ಟಿಯಿಂದ ಈ ಹಿಂದೆ ಹಾಸನ ಜಿಲ್ಲೆ ಸೋಮನಹಳ್ಳಿ ಕಾವಲ ತೋಟಗಾರಿಕೆ ಕ್ಷೇತ್ರದ ಸುಮಾರು 400 ಎಕರೆ ಪ್ರದೇಶದಲ್ಲಿ ಹೊಸದಾಗಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಸ್ಥಾಪನೆಗೆ ಸರ್ಕಾರ ದಿನಾಂಕ:18.07.2019 ರಂದು ಆದೇಶ ಹೊರಡಿಸಿರುವುದು ನಿಜವೇ;(ಸಂಪೂರ್ಣ ಮಾಹಿತಿ ನೀಡುವುದು).	ಹೌದು,
ಆ)	ಹಾಸನ ಜಿಲ್ಲೆ ಹಾಗೂ ವಿಜಯಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ರೈತ ಸಮುದಾಯ ಮತ್ತು ತೋಟಗಾರಿಕಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೋಟಗಾರಿಕೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಉತ್ತೇಜನವನ್ನು ನೀಡುವ ಸಲುವಾಗಿ ಪ್ರಸಕ್ತ ಸಾಲಿನಿಂದಲೇ ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲು ಮತ್ತು ವಿಜಯಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಆಲಮೇಲದಲ್ಲಿ 2019-20ನೇ ಸಾಲಿನಿಂದಲೇ ಲಭ್ಯವಿರುವ ಸಿಬ್ಬಂದಿಗಳು ಹಾಗೂ ಮೂಲಭೂತ ಸೌಲಭ್ಯಗಳೊಂದಿಗೆ ತಲಾ ರೂ. 84.00 ಕೋಟಿಗಳಂತೆ ಒಟ್ಟು ರೂ.168.00 ಕೋಟಿಗಳ ಅನುದಾನದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶ ಹೊರಡಿಸಿರುವುದು ನಿಜವೇ;	

	(ಸಂಪೂರ್ಣ ಮಾಹಿತಿ ನೀಡುವುದು)	
ಇ)	2019-20ನೇ ಸಾಲಿಗೆ ಅನುದಾನವಾಗಿ ರೂ. 63.00 ಕೋಟಿಗಳಷ್ಟು ಮೀಸಲಿಟ್ಟಿರುವುದು ನಿಜವೇ; ಈಗಾಗಲೇ ಹಾಸನದ ಲೋಕೋಪಯೋಗಿ ಇಲಾಖೆಯ ಅಂದಾಜು ತಯಾರು ಮಾಡಿ ರೂ. 63.00 ಕೋಟಿಗಳಿಗೆ ಅಂದಾಜು ಪಟ್ಟಿ ತಯಾರು ಮಾಡಿ ತಾಂತ್ರಿಕ ಮಂಡಳಿ ಅನುಮೋದನೆಯೊಂದಿಗೆ ಆಡಳಿತಾತ್ಮಕ ಅನುಮೋದನೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರಿಗೆ ಕಳುಹಿಸಿರವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಅನುಮೋದನೆಯನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು; (ಸಂಪೂರ್ಣ ವಿವರ ನೀಡುವುದು)	2019-20ನೇ ಸಾಲಿಗೆ ಅನುದಾನವಾಗಿ ರೂ.63.00 ಕೋಟಿಗಳನ್ನು ಮೀಸಲು ಇರಿಸಿಲ್ಲ. ಈ ಎರಡು ತೋಟಗಾರಿಕೆ ಮಹಾವಿದ್ಯಾಲಯ ಸ್ಥಾಪನೆಗೆ ಸಂಬಂಧಿಸಿದ ಅನುಮೋದನೆ ನೀಡುವುದನ್ನು ಸರ್ಕಾರವು ಅನಿರ್ದಿಷ್ಟ ಕಾಲಾವಧಿಗೆ ಮುಂದೂಡಿದೆ.
ಈ)	ಉದ್ದೇಶಿತ ತೋಟಗಾರಿಕೆ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಇದುವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	

No.HORTI 411 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 567

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಹಾಸನ ಜಿಲ್ಲೆಯ ಹಾಸನ ನಗರದಲ್ಲಿ ಸುಮಾರು 100 ವರ್ಷಗಳ ಹಳೆಯದಾದ ಕರ್ನಾಟಕ ಇಮ್ಲಿಮೆಂಟೇಶನ್ ಫ್ಯಾಕ್ಟರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಾದೇಶಿಕ ಕಾರ್ಯಾಗಾರವಾಗಿ (ಬಸ್ಸುಗಳ ಬಾಡಿ ನಿರ್ಮಾಣ ಮಾಡುವ) ರೀಜನಲ್ ವರ್ಕ್‌ಶಾಪ್ ನವೀಕರಣ ಮಾಡುವ ಕಾಮಗಾರಿಗೆ ಅಂದಾಜು ಮೊತ್ತ ರೂ.42.00 ಕೋಟಿಗಳ ಅನುದಾನ ಮಂಜೂರಾಗಿದ್ದು, ರೂ.31.00 ಕೋಟಿಗಳಿಗೆ ಟೆಂಡರ್ ಕರೆದಿರುವುದು ನಿಜವೇ (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಹಾಸನ ನಗರದಲ್ಲಿರುವ ಪ್ರಾದೇಶಿಕ ಕಾರ್ಯಾಗಾರವನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಕೆಲಸಗಳನ್ನು ಮತ್ತು ನೂತನ ಯಂತ್ರೋಪಕರಣಗಳನ್ನು ಅಳವಡಿಸುವ ಒಟ್ಟಾರೆ ಯೋಜನೆಯ ಮೊತ್ತವಾದ ರೂ.42.00 ಕೋಟಿಗಳಲ್ಲಿ ರೂ.10.00 ಕೋಟಿಗಳನ್ನು ಆಧುನಿಕ ಯಂತ್ರೋಪಕರಣ ಒದಗಿಸಲು ಮೀಸಲಿರಿಸಲಾಗಿತ್ತು. ರೂ.31.00 ಕೋಟಿಗಳ ಕಾಮಗಾರಿ ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು.
ಆ.	ಸದರಿ ನವೀಕರಣ ಕಾಮಗಾರಿಯನ್ನು ಇ-ಪ್ರೋಕ್ಯೂರ್‌ಮೆಂಟ್‌ಗಳ ಮೂಲಕ ರೂ.31.00 ಕೋಟಿಗಳಿಗೆ ಟೆಂಡರ್ ಕರೆದಿರುವುದು ನಿಜವೇ ಎಷ್ಟು ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದರು ; ಟೆಂಡರ್ ಯಾವ ಹಂತದಲ್ಲಿದೆ ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಸದರಿ ಟೆಂಡರ್‌ನಲ್ಲಿ ಒಟ್ಟು 6 ಜನ ಗುತ್ತಿಗೆದಾರರು ಭಾಗವಹಿಸಿದ್ದರು. ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ 5 ಜನ ಗುತ್ತಿಗೆದಾರರು ಅನರ್ಹಗೊಂಡ ಒಬ್ಬರೇ ಗುತ್ತಿಗೆದಾರರು ಅರ್ಹಗೊಂಡ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿರುತ್ತದೆ.
ಇ.	ಕೆಲವು ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಸರಿಯಾಗಿ ದಾಖಲಾತಿಗಳನ್ನು ಸಲ್ಲಿಸದೆ ಮತ್ತು ಅರ್ಹತೆ ಇಲ್ಲದಿದ್ದರೂ ಸಹ ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಈಗಾಗಲೇ ಪ್ರಾರಂಭಿಸಿರುವ	ಸದರಿ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್‌ಗಳ ಮೂಲಕ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಎಲ್ಲಾ ಗುತ್ತಿಗೆದಾರರು ಮುಕ್ತ ಅವಕಾಶ ಹೊಂದಿರುತ್ತಾರೆ. ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರವೇ ಎಲ್ಲಾ ಗುತ್ತಿಗೆದಾರರು ದಾಖಲಾತಿಗಳನ್ನು ದಾಖಲಿಸಿರುತ್ತಾರೆ. ಗುತ್ತಿಗೆದಾರರು

	ಟೆಂಡರ್ ಪ್ರಕ್ರಿಯೆಗಳನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ ; (ಸಂಪೂರ್ಣ ಮಾಹಿತಿ ನೀಡುವುದು)	ದಾಖಲಿಸುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಟೆಂಡರ್ ನಿಬಂಧನೆಗಳ ಪ್ರಕಾರ ಕ್ರಮಬದ್ಧವಾಗಿದ್ದಲ್ಲಿ ಮಾತ್ರ ತಾಂತ್ರಿಕವಾಗಿ ಅರ್ಹಗೊಳಿಸಲಾಗುತ್ತದೆ. ಅರ್ಹಗೊಂಡ ಗುತ್ತಿಗೆದಾರರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುತ್ತದೆ.
ಈ.	ಪ್ರಸ್ತುತ ಹಾಸನದ ರೀಜನಲ್ ವರ್ಕ್‌ಶಾಪ್ ನವೀಕರಣ ಕಾಮಗಾರಿ ಯಾವ ಹಂತದಲ್ಲಿರುತ್ತದೆ (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಟೆಂಡರ್‌ನಲ್ಲಿ ಒಬ್ಬರೇ ಗುತ್ತಿಗೆದಾರರು ಅರ್ಹಗೊಂಡ ಕಾರಣ, ಟೆಂಡರ್‌ನ್ನು ರದ್ದುಪಡಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಈಗಾಗಲೇ ಬಿಡುಗಡೆಗೊಳಿಸಿರುವ ರೂ.10.00 ಕೋಟಿಗಳ ಅನುದಾನದಲ್ಲಿಯೇ ಕಾಮಗಾರಿಯನ್ನು ಕೈಗೊಳ್ಳುವಂತೆ ಆರ್ಥಿಕ ಇಲಾಖೆಯ ಅಭಿಪ್ರಾಯದನ್ವಯ ನಿಗಮಕ್ಕೆ ತಿಳಿಸಿರುವ ಹಿನ್ನೆಲೆಯಲ್ಲಿ, ರೂ.6.00 ಕೋಟಿಗಳಿಗೆ ಕಾಮಗಾರಿ ಕೆಲಸಗಳನ್ನು ಹಾಗೂ ರೂ.4.00 ಕೋಟಿಗಳಿಗೆ ಯಂತ್ರೋಪಕರಣಗಳನ್ನು ಅಳವಡಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ, ರೂ.6.00 ಕೋಟಿಗಳ ಕಾಮಗಾರಿ ಕೆಲಸಗಳಿಗೆ ಹೊಸದಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಟಿಡಿ 204 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	568
ಉತ್ತರಿಸಬೇಕಾದ ದಿನಾಂಕ	:	14.09.2022
ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಹೊಳೆನರಸೀಪುರ ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜು ಆವರಣದಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣದ ಕಾಮಗಾರಿಗೆ ರೂ 450.00 ಲಕ್ಷಗಳ ಅನುದಾನ ಮಂಜೂರಾಗಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಹಾಸನ ಜಿಲ್ಲೆ ಹೊಳೇನರಸೀಪುರ ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜು ಆವರಣದಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣದ ಕಾಮಗಾರಿಗೆ ಸರ್ಕಾರಿ ಆದೇಶ ಸಂಖ್ಯೆ: ಯುಸೇಇ/378/ಯುಸೇಕ್ರೀ 2016, ಬೆಂಗಳೂರು, ದಿನಾಂಕ: 29.08.2017ರಲ್ಲಿ ರೂ 450.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಮುಖ್ಯ ವಾಸ್ತುಶಿಲ್ಪಿ, ಬೆಂಗಳೂರು ರವರ ನಕ್ಷೆಯಂತೆ ಹೊಳೆನರಸೀಪುರ ಪಟ್ಟಣದ ಒಳಾಂಗಣ ಕ್ರೀಡಾಂಗಣದ ಉಳಿಕೆ ಕಾಮಗಾರಿಗಳಾದ ಆಫೀಸ್ ರೂಂ, ಜನರೇಟರ್ ರೂಂ, ಸ್ಟೋರ್ ರೂಂ ಗ್ಯಾಲರಿ ಮತ್ತು ಬ್ಯಾಸ್ಕೆಟ್ ಬಾಲ್ ಹಾಗೂ ಬ್ಯಾಟ್ ಮಿಂಟನ್ ಕೋರ್ಟ್‌ಗಳಿಗೆ ವುಡನ್ ಫ್ಲೋರಿಂಗ್ ಅಳವಡಿಕೆ ಹಾಗೂ ಕೆಲವು ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ನಿರ್ವಹಿಸಲು ಹೆಚ್ಚುವರಿಯಾಗಿ ರೂ· 298.00 ಲಕ್ಷಗಳ ಅನುದಾನದ ಅವಶ್ಯಕತೆ ಇರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಅನುಮೋದಿತ ಮೂಲ ಅಂದಾಜು ಪಟ್ಟಿಯಲ್ಲಿ ಇಲ್ಲದೇ ಇರುವ ಹೆಚ್ಚುವರಿ ಕಾಮಗಾರಿಗಳಾದ ಆಫೀಸ್ ರೂಂ, ಜನರೇಟರ್ ರೂಂ, ಸ್ಟೋರ್ ರೂಂ ಗ್ಯಾಲರಿ ಮತ್ತು ಬ್ಯಾಸ್ಕೆಟ್ ಬಾಲ್ ಹಾಗೂ ಬ್ಯಾಡ್ಮಿಂಟನ್ ಕೋರ್ಟ್‌ಗಳಿಗೆ ವುಡನ್ ಫ್ಲೋರಿಂಗ್ ಅಳವಡಿಕೆ ಹಾಗೂ ವಿದ್ಯುತ್ ಸರಬರಾಜು ಕಾಮಗಾರಿಗಳನ್ನು ಹೆಚ್ಚುವರಿಯಾಗಿ ನಿರ್ಮಿಸಲು ಲೋಕೋಪಯೋಗಿ ಇಲಾಖೆಯವರು ರೂ 298.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.
ಇ)	ಹೊಳೆನರಸೀಪುರ ಪಟ್ಟಣದ ಒಳಾಂಗಣ ಕ್ರೀಡಾಂಗಣದ ಉಳಿಕೆ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಅವಶ್ಯಕವಿರುವ ರೂ 298.00 ಲಕ್ಷಗಳ ಅಂದಾಜುಪಟ್ಟಿಯನ್ನು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ರವರಿಗೆ ದಿನಾಂಕ: 16.12.2019ರಲ್ಲಿ ಸಲ್ಲಿಸಲಾಗಿದ್ದು, ಸುಮಾರು 02 ವರ್ಷಗಳಾದರೂ ಈ ಕಾಮಗಾರಿಗೆ ಅವಶ್ಯಕವಿರುವ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ರೂ 298.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು).	ಅಂದಾಜು ಪಟ್ಟಿಯಲ್ಲಿ ಇಲ್ಲದ ಕಾಮಗಾರಿಗಳಾದ ಕಛೇರಿ ಕೊಠಡಿ, ಜನರೇಟರ್ ಕೊಠಡಿ, ದಾಸ್ತಾನು ಕೊಠಡಿ, ಗ್ಯಾಲರಿ ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಅನುಮೋದನೆ ಇಲ್ಲದೇ ಕೈಗೊಂಡಿರುವುದರಿಂದ ಹಾಗೂ ಅನುದಾನದ ಕೊರತೆ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಅನುದಾನವನ್ನು ಲಭ್ಯತೆಗೆ ಅನುಗುಣವಾಗಿ ಬಿಡುಗಡೆಗೊಳಿಸಲಾಗುವುದು.

ವೈಎಸ್‌ಡಿ-ಇಬಿಬಿ/122/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಅನುಬಂಧ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಹಾಸನ ಜಿಲ್ಲೆ ಹೊಳೆನರಸೀಪುರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 378 ಯುಸೇಕ್ರೀ 2016, ದಿನಾಂಕ:02.03.2017.

2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಯುಸೇಇ 378 ಯುಸೇಕ್ರೀ 2016, ದಿನಾಂಕ:23.03.2017.

3. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಪತ್ರ ಸಂಖ್ಯೆ:ಡಿವೈಇಎಸ್/ಕ್ರಿಯೋ/ಹಾ.ಯೋ.ತಾ/92/2016-17, ದಿನಾಂಕ:14.07.2017.

******

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆವರಣದಲ್ಲಿರುವ ಖಾಲಿ ನಿವೇಶನದಲ್ಲಿ ರೂ.200.00 ಲಕ್ಷ ಅಂದಾಜು ಮೊತ್ತದಲ್ಲಿ ಹೊರಾಂಗಣ ಕ್ರೀಡಾಂಗಣ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಮುಂದುವರೆದು ಮೇಲೆ ಓದಲಾದ (2)ರ ತಿದ್ದುಪಡಿ ಆದೇಶದಲ್ಲಿ ಹೊರಾಂಗಣ ಕ್ರೀಡಾಂಗಣ ಎಂಬುದರ ಬದಲಾಗಿ ಒಳಾಂಗಣ ಕ್ರೀಡಾಂಗಣ ಎಂದು ತಿದ್ದುಪಡಿ ಮಾಡಲಾಗಿದೆ.

ಮೇಲೆ ಓದಲಾದ (3) ರ ದಿನಾಂಕ:14.07.2017ರ ಪತ್ರದಲ್ಲಿ ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿರುವ ಮಾದರಿಯಲ್ಲಿ ಈಜುಕೊಳ ಒಳಗೊಂಡಂತೆ, ಒಳಾಂಗಣ ಕ್ರೀಡಾಂಗಣವನ್ನು ಹೊಳೆನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಿರ್ಮಿಸಲು ಲೋಕೋಪಯೋಗಿ ಇಲಾಖೆಯವರು ರೂ.450.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿರುವ ಖಾಲಿ ನಿವೇಶನದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ರೂ.200.00 ಲಕ್ಷಗಳ ಬದಲಾಗಿ ರೂ.450.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಹಾಗೂ ಇದಕ್ಕಾಗಿ ರೂ.200.00 ಲಕ್ಷಗಳ ಮೊತ್ತವನ್ನು 2017-18ನೇ ಸಾಲಿನ ಲೆಕ್ಕಶೀರ್ಷಿಕೆ:4202-03-102-03-386 ಬಂಡವಾಳ ವೆಚ್ಚ ಅಡಿಯಲ್ಲಿ ಭರಿಸಲು ಅನುಮೋದನೆ ನೀಡುವಂತೆ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 378 ಯುಸೇಕ್ರೀ 2016

ಬೆಂಗಳೂರು, ದಿನಾಂಕ:29.08.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿರುವ ಖಾಲಿ ನಿವೇಶನದಲ್ಲಿ ರೂ.450.00 ಲಕ್ಷ (ನಾಲ್ಕುನೂರ ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ ಅಂದಾಜು ವೆಚ್ಚದಲ್ಲಿ ಈಜುಕೊಳ ಒಳಗೊಂಡಂತೆ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಈ ಕೆಳಕಂಡಂತೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

Sl. No.	Description of work	Estimate cost (in lakhs)
1	Estimate of construction of indoor stadium, Holenarasipura.	364.75
2	Estimate of construction of swimming pool to indoor stadium, Holenarasipura.	85.25
	Total	**450.00**

ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಿರುವ ನಿವೇಶನವನ್ನು ಶಿಕ್ಷಣ ಇಲಾಖೆಯಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಶಕ್ಕೆ ಪಡೆದುಕೊಳ್ಳತಕ್ಕದ್ದು ಹಾಗೂ ಕಾಮಗಾರಿಯನ್ನು ಕೆ.ಟಿ.ಪಿ.ಪಿ ನಿಯಮಗಳನ್ವಯ ಅನುಷ್ಠಾನಗೊಳಿಸತಕ್ಕದ್ದು. ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ರೂ.200.00 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ "4202-03-102-0-03 (386) ಬಂಡವಾಳ ವೆಚ್ಚ ಮತ್ತು ಒಳಾಂಗಣ ಕ್ರೀಡಾಂಗಣ" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಸಂಬಂಧ ಮೇಲೆ ಓದಲಾದ ದಿನಾಂಕ:02.03.2017ರ ಆದೇಶ ಹಾಗೂ ದಿನಾಂಕ:23.03.2017ರ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 03 ಟಿಎಫ್‌ಪಿ 2016, ದಿನಾಂಕ: 02.04.2016ರಲ್ಲಿ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್. ಪ್ರಭುಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪೋ.ಬಾ. ನಂ.5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ & ಎಸ್.ಎಸ್.ಎ), ಕರ್ನಾಟಕ, ಪೋ.ಬಾ. ನಂ.5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಇ & ಆರ್.ಎಸ್.ಎ), ಕರ್ನಾಟಕ, ಪೋ.ಬಾ. ನಂ.5398, ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿ, ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>**ಕರ್ನಾಟಕ ವಿಧಾನ ಸಭೆ**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 569

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	2020 ಮತ್ತು 2021ನೇ ಸಾಲಿನಲ್ಲಿ ಕೊರೋನಾ 2019ರ ಸೋಂಕು ಹರಡುವಿಕೆಯಿಂದ ಲಾಕ್‌ಡೌನ್ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯಾದ್ಯಂತ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಸಂಚಾರವನ್ನು ನಿಲ್ಲಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಕೋವಿಡ್-19ರ ಸಾಂಕ್ರಾಮಿಕ ರೋಗ ಹರಡುವಿಕೆಯಿಂದ ರಾಜ್ಯದಲ್ಲಿ ಲಾಕ್‌ಡೌನ್ ಘೋಷಿಸಿದ್ದ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ಸಡಿಲಗೊಂಡ ನಂತರ ಪ್ರಯಾಣಿಕರ ಲಭ್ಯತೆ/ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಲಾಕ್‌ಡೌನ್ ಪೂರ್ವದಲ್ಲಿ ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ 355 ಅನುಸೂಚಿಗಳಿಂದ 3151 ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಪ್ರಸ್ತುತ ಶಾಲಾ-ಕಾಲೇಜು ವಿದ್ಯಾರ್ಥಿಗಳು/ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಗ್ರಾಮೀಣ ಪ್ರದೇಶಗಳಿಗೆ 355 ಅನುಸೂಚಿಗಳಿಂದ 2790 ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
ಆ.	ಪ್ರಸ್ತುತ ಸಹಜ ಸ್ಥಿತಿಗೆ ಮರಳಿದ್ದು, ಶಾಲಾ-ಕಾಲೇಜುಗಳು ಪುನರಾರಂಭಗೊಂಡಿದ್ದರೂ ಸಹ ಹಲವಾರು ರೂಟ್ ನಂಬರ್‌ಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಈ ಹಿಂದೆ ಸಂಚರಿಸುತ್ತಿದ್ದ ಬಸ್‌ಗಳ ಸಂಚಾರವನ್ನು ಪುನರ್ ಆರಂಭಿಸದಿರುವುದರಿಂದ ಗ್ರಾಮೀಣ ಪ್ರದೇಶಗಳಿಂದ ವ್ಯಾಸಾಂಗಕ್ಕಾಗಿ ಶಾಲಾ/ ಕಾಲೇಜುಗಳಿಗೆ ಹೋಗಿ ಬರುವ ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರ ಅನುಕೂಲಕ್ಕಾಗಿ ನಗರ/ಗ್ರಾಮೀಣ ಪ್ರದೇಶದ ಸಾರಿಗೆಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗಿದ್ದು, ಅವಶ್ಯಕತೆಗೆ ಮತ್ತು ಬೇಡಿಕೆಗಳನುಗುಣವಾಗಿ ಕಾರ್ಯಾಚರಣೆಗೊಳಿಸಲಾಗಿದೆ.

<table>
<tr><td>ಇ.</td><td>ಹಾಗಿದ್ದಲ್ಲಿ, ಕೊರೋನಾ 2019ರ ಸೋಂಕು ಹರಡುವಿಕೆಯಿಂದ ಲಾಕ್‌ಡೌನ್ ಹಿನ್ನೆಲೆಯಲ್ಲಿ ನಿಲ್ಲಿಸಲಾಗಿದ್ದ ಬಸ್ ಸಂಚಾರವನ್ನು ಗ್ರಾಮೀಣ ಪ್ರದೇಶದಲ್ಲಿ ಕೂಡಲೇ ಪುನರ್ ಆರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td>ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಸ್ಥಗಿತಗೊಳಿಸಲಾಗಿದ್ದ ಸುತ್ತುವಳಿಗಳನ್ನು ಹಂತ ಹಂತವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ.</td></tr>
<tr><td>ಈ.</td><td>ಹಾಸನ ನಗರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ನರ್ಸಿಂಗ್ ಕಾಲೇಜು, ಸರ್ಕಾರಿ ಐ.ಟಿ.ಐ. ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಪದವಿಪೂರ್ವ ಕಾಲೇಜುಗಳು ಹಾಗೂ ಇತರೆ ಹಲವಾರು ವಿದ್ಯಾಸಂಸ್ಥೆಗಳಿದ್ದು, ಪ್ರತಿದಿನ ಸುತ್ತಮುತ್ತಲು ತಾಲ್ಲೂಕು ಕೇಂದ್ರಗಳಿಂದ ಗ್ರಾಮೀಣ ಪ್ರದೇಶಗಳಿಂದ ಸುಮಾರು 15-20 ಸಾವಿರ ಹೆಣ್ಣುಮಕ್ಕಳು ಹಾಸನ ನಗರಕ್ಕೆ ಬರುತ್ತಿದ್ದು, ಇವರಿಗೆ ಬಸ್ ಸೌಕರ್ಯ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)</td><td>ಹಾಸನ ನಗರವು ಮುಖ್ಯ ಶೈಕ್ಷಣಿಕ ಕೇಂದ್ರವಾಗಿದ್ದು, ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಬರುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ, ಹಾಸನ ಮತ್ತು ಚಿಕ್ಕಮಗಳೂರು ವಿಭಾಗಗಳ ವಿವಿಧ ಘಟಕಗಳಿಂದ ಹಾಸನ ನಗರಕ್ಕೆ ಸಾಮಾನ್ಯ ಸಾರಿಗೆ ಮತ್ತು ವೇಗದೂತ ಸಾರಿಗೆಗಳನ್ನು ಆಚರಣೆ ಮಾಡಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ:-
<table>
<tr><th>ತಾಲ್ಲೂಕು ಕೇಂದ್ರಗಳು</th><th>ಹಾಸನ ನಗರ ಮತ್ತು ಹೊರವಲಯಗಳಿಗೆ ಆಚರಣೆಯಲ್ಲಿರುವ ಸುತ್ತುವಳಿಗಳ ಸಂಖ್ಯೆ</th></tr>
<tr><td>ಅರಸೀಕೆರೆ</td><td>146</td></tr>
<tr><td>ಅರಕಲಗೂಡು</td><td>98</td></tr>
<tr><td>ಆಲೂರು</td><td>56</td></tr>
<tr><td>ಬೇಲೂರು</td><td>162</td></tr>
<tr><td>ಚನ್ನರಾಯಪಟ್ಟಣ</td><td>103</td></tr>
<tr><td>ಹಾಸನ</td><td>239</td></tr>
<tr><td>ಹೊಳೆನರಸೀಪುರ</td><td>139</td></tr>
<tr><td>ಸಕಲೇಶಪುರ</td><td>68</td></tr>
<tr><td>ಒಟ್ಟು</td><td>1011</td></tr>
</table>
ಪ್ರಸ್ತುತ ಹಾಸನ- ಆಲೂರು ಮಾರ್ಗದಲ್ಲಿ 6 ನಗರ ಸಾರಿಗೆ ಅನುಸೂಚಿಗಳಿಂದ ಒಟ್ಟು 68 ಸುತ್ತುವಳಿಗಳನ್ನು ಕಾರ್ಯಾಚರಣೆ</td></tr>
</table>

		ಮಾಡಲಾಗುತ್ತಿದ್ದು. ಇದು ಹಾಸನ ಸಾರ್ವಜನಿಕರ ಅವಶ್ಯಕತೆಗೆ ಅನುಗುಣವಾಗಿರುತ್ತದೆ. ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಸುತ್ತುವಳಿಗಳನ್ನು ಹಂತ ಹಂತವಾಗಿ ಹೆಚ್ಚಿಸಿ ಕಾರ್ಯಾಚರಿಸಲಾಗುತ್ತಿದೆ.

ಸಂಖ್ಯೆ: ಟಿಡಿ 188 ಟಿಸಿಕ್ಯೂ 2022

(ಬಿ. ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು

519

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	570
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಸರ್ಕಾರಿ ಪಬ್ಲಿಕ್ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶಗಳಿಂದ ಬಡಕುಟುಂಬದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಸದರಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 64 ಬಿಎಂಎಸ್ 2022, ದಿನಾಂಕ:31.03.2022ರಲ್ಲಿ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಹಂಗರಹಳ್ಳಿ ಗ್ರಾಮದ ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಮೊಸಳೆ ಹೊಸಳ್ಳಿ ಗ್ರಾಮಕ್ಕೆ ಸ್ಥಳಾಂತರಿಸಿ ಆದೇಶಿಸಲಾಗಿರುತ್ತದೆ. ಹಾಸನ ಜಿಲ್ಲೆ ಹಾಸನ ತಾಲ್ಲೂಕಿನ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಮೊಸಳೆಹೊಸಹಳ್ಳಿ ಈ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
ಆ)	ಹಾಗಿದ್ದಲ್ಲಿ, ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಗ್ರಾಮೀಣ ಪ್ರದೇಶಗಳಿಂದ ಬಡಕುಟುಂಬದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ಹಾಸನ ತಾಲ್ಲೂಕಿನಲ್ಲಿ ಒಟ್ಟು 31 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 19 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ, 09 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಮತ್ತು 03 ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಮೊಸಳೆಹೊಸಹಳ್ಳಿ ಇಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಅನುದಾನದ ಲಭ್ಯತೆಯನುಸಾರ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

ಸಂಖ್ಯೆ: ಬಿಸಿಡಬ್ಲ್ಯೂ 527 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	**571**
ಸದಸ್ಯರ ಹೆಸರು:	ಶ್ರೀ ಹರ್ಷವರ್ಧನ್. ಬಿ (ನಂಜನಗೂಡು)
ಉತ್ತರಿಸಬೇಕಾದ ದಿನಾಂಕ:	14.09.2022
ಉತ್ತರಿಸುವ ಸಚಿವರು:	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2021-22ನೇ ಮತ್ತು 2022-23ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಬಿಡುಗಡೆಯಾದ ಅನುದಾನದಲ್ಲಿ ಖರ್ಚಾಗಿರುವ ಅನುದಾನವೆಷ್ಟು; ಉಳಿದಿರುವ ಅನುದಾನವೆಷ್ಟು; (ವಿವರ ನೀಡುವುದು)	**ಹಿಂದುಳಿದ ವರ್ಗಗಳ ಕಲ್ಯಾಣ ಆಯುಕ್ತಾಲಯ** (ರೂ. ಲಕ್ಷಗಳಲ್ಲಿ)

ಕ್ರ ಸಂ	ಆರ್ಥಿಕ ವರ್ಷ	ಒದಗಿಸಿರುವ ಅನುದಾನ	ಬಿಡುಗಡೆ ಯಾದ ಅನುದಾನ	ಖರ್ಚಾಗಿರುವ ಅನುದಾನ	ಉಳಿದಿರುವ ಅನುದಾನ
1	2021-22	204429.63	231824.63	225732.63	6092.00
2	2022-23 (ಆಗಸ್ಟ್-2022 ರ ಅಂತ್ಯಕ್ಕೆ)	224966.30	74054.94	39357.46	34697.48

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮ

(ರೂ.ಕೋಟಿಗಳಲ್ಲಿ)

	2021-22			2022-23		
ನಿಗಮಗಳ ಹೆಸರು	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಉಳಿದಿರುವ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಉಳಿದಿರುವ ಅನುದಾನ
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	260.00	45.32	214.68	50.00	0.00	0.00
ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ	5.00	4.53	0.47	5.00	0.00	0.00

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ	5.00	5.25	-	3.00	0.00	0.00
ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ	5.29	7.60	-	3.00	0.00	0.00

* ಮೇಲ್ಕಂಡ ನಿಗಮಗಳಲ್ಲಿ ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿರುವ ಮೊತ್ತವನ್ನು ಕಳೆದ ಸಾಲುಗಳ ಉಳಿಕೆ ಮೊತ್ತದಿಂದ ಭರಿಸಲಾಗಿದೆ.
* ಗಂಗಾ ಕಲ್ಯಾಣ ಯೋಜನೆ ಅನುಷ್ಠಾನವನ್ನು ಫಲಾನುಭವಿಗಳ ವಿವೇಚನೆಗೆ ನೀಡಿ ಕೈಗೊಳ್ಳುವ ಬಗ್ಗೆ ಸರ್ಕಾರದ ಆದೇಶ ಹೊರಡಿಸಲಾಗಿದೆ. ಇದರಂತೆ ಕೊಳವೆ ಬಾವಿ ಕೊರೆಯುವ ಏಜೆನ್ಸಿಗಳನ್ನು ಹಾಗೂ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡುವ ಏಜೆನ್ಸಿಗಳನ್ನು Empanel ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ

(ರೂ. ಲಕ್ಷಗಳಲ್ಲಿ)

2021-22			2022-23		
ಬಿಡುಗಡೆ	ಖರ್ಚು	ಉಳಿಕೆ	ಬಿಡುಗಡೆ	ಖರ್ಚು	ಉಳಿಕೆ
679.00	650.00	29.00	750.00	0.00	0.00

ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮ ನಿಯಮಿತ

(ರೂ.ಕೋಟಿಗಳಲ್ಲಿ)

ಕ್ರ ಸಂ	ವರ್ಷ	ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚು ಮಾಡಲಾದ ಅನುದಾನ	ಬಾಕಿ ಉಳಿದಿರುವ ಅನುದಾನ
1	2021-22	10.00	10.00	2.70	9.73
2	2022-23	10.00	5.00	0.00	0.00

ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ

2021-22ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ರೂ.50.00 ಕೋಟಿ ಷೇರು ಬಂಡವಾಳದಲ್ಲಿ ರೂ.45.00 ಕೋಟಿಗಳನ್ನು ಮರುಬರ್ಥಿ ಮಾಡಿ ಅನುದಾನವನ್ನಾಗಿ ಬಿಡುಗಡೆ ಮಾಡುವಂತೆ ಹಾಗೂ ಉಳಿಕೆ ರೂ.5.00 ಕೋಟಿಗಳಲ್ಲಿ ರೂ.72.00 ಲಕ್ಷಗಳನ್ನು ನಿಗಮವನ್ನು ನೊಂದಾಯಿಸಲು ಹಾಗೂ ಆಡಳಿತಾತ್ಮಕ ವೆಚ್ಚಕ್ಕೆ ವೆಚ್ಚ ಬಳಸಲಾಗಿರುತ್ತದೆ.

<table>
<tr>
<td></td>
<td></td>
<td>
<u>ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ</u>
(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಆಯವ್ಯಯದಲ್ಲಿ ಒದಗಿಸಿರುವ ಅನುದಾನ</th><th>ಬಿಡುಗಡೆ ಯಾದ ಅನುದಾನ</th><th>ಖರ್ಚು ಮಾಡಲಾದ ಅನುದಾನ</th><th>ಬಾಕಿ ಉಳಿದಿರುವ ಅನುದಾನ</th></tr>
<tr><td>2021-22</td><td>1075.00</td><td>1075.00</td><td>973.00</td><td>102.00</td></tr>
<tr><td>2022-23</td><td>1100.00</td><td>550.00</td><td>0.00</td><td>0.00</td></tr>
</table>
<u>ಕರ್ನಾಟಕ ವೀರಶೈವ ಅಭಿವೃದ್ಧಿ ನಿಗಮ ನಿಯಮಿತ</u>
ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತಕ್ಕೆ 2021-22ನೇ ಸಾಲಿನಲ್ಲಿ ರೂ. 100.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.ನಿಗಮದಿಂದ ಯೋಜನೆಗಳು ಅನುಷ್ಠಾನ ಹಂತದಲ್ಲಿದ್ದು ಬಿಡುಗಡೆಯಾದ ಅನುದಾನ ಖರ್ಚಾಗಿರುವುದಿಲ್ಲ.
<u>ಕರ್ನಾಟಕ ಮರಾಠ ಅಭಿವೃದ್ಧಿ ನಿಗಮ</u>
ಕರ್ನಾಟಕ ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮವನ್ನು 2013ರ ಕಂಪನಿ ಕಾಯ್ದೆಅನ್ವಯ ದಿನಾಂಕ:13-12-2021ರಂದು ನೋಂದಣಿ ಮಾಡಿಸುವ ಮೂಲಕ ಸ್ಥಾಪನೆ ಮಾಡಲಾಗಿರುತ್ತದೆ. 2021-22ನೇ ಸಾಲಿನಲ್ಲಿ ನಿಗಮಕ್ಕೆ ರೂ.50.00ಕೋಟಿ ಅನುದಾನ ಘೋಷಣೆಯಾಗಿದ್ದು, 2022-23ನೇ ಅಯವ್ಯಯದಲ್ಲಿ ರೂ.10.00ಕೋಟಿಗಳ ಅನುದಾನವನ್ನು ಒದಗಿಸಿದ್ದು, ಅದರಲ್ಲಿ ರೂ.5.00 ಕೋಟಿಗಳು ಬಿಡುಗಡೆಯಾಗಿರುತ್ತದೆ. ಸದರಿ ಅನುದಾನವನ್ನು ಆಡಳಿತಾತ್ಮಕ ವೆಚ್ಚಗಳಿಗೆ ಬಳಸಲಾಗಿರುತ್ತದೆ.
</td>
</tr>
<tr>
<td>ಆ)</td>
<td>2021-22 ಮತ್ತು 2022-23ನೇ ಸಾಲಿನಲ್ಲಿ ಯಾವ ಯಾವ ವರ್ಗದವರ ಭವನಗಳಿಗೆ ಎಷ್ಟು ಎಷ್ಟು ಅನುದಾನವನ್ನು ನೀಡಲಾಗಿದೆ; (ವಿವರವನ್ನು ಒದಗಿಸುವುದು)</td>
<td>2021-22 ಮತ್ತು 2022-23ನೇ ಸಾಲಿನಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ವಿವಿಧ ಸಂಘ-ಸಂಸ್ಥೆಗಳು ನಿರ್ಮಾಣ ಮಾಡುತ್ತಿರುವ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪಲೋಡ್ ಮಾಡಲಾಗಿದೆ.</td>
</tr>
<tr>
<td>ಇ)</td>
<td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯಿಂದ 2021-22 ಮತ್ತು 2022-23ನೆ ಸಾಲಿನಲ್ಲಿ ನಿರ್ಮಿಸಿರುವ ಬಸವಭವನ ಗಳೆಷ್ಟು; ಬಿಡುಗಡೆಯಾಗಿರುವ ಅನುದಾನವೆಷ್ಟು; ಪ್ರಸ್ತುತ ಯಾವ ಹಂತದಲ್ಲಿವೆ ಬಸವ ಭವನಗಳು ಪೂರ್ಣವಾಗದೇ/ಉದ್ಘಾಟನೆಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಭವನಗಳು</td>
<td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ಹಿಂದೆ ಮಂಜೂರು ಮಾಡಲಾಗಿದ್ದ, ಒಟ್ಟು 14 ಬಸವ ಭವನಗಳ ಪೈಕಿ 2021-22 ಮತ್ತು 2022-23 ನೇ ಸಾಲಿನಲ್ಲಿ 4 ಬಸವ ಭವನಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಸದರಿ ಬಸವ ಭವನಗಳಿಗೆ 2021-22 ಮತ್ತು 2022-23ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ಪ್ರಗತಿಯ ವಿವರಗಳನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪಲೋಡ್ ಮಾಡಲಾಗಿದೆ. ಸರ್ಕಾರದ ಮಾರ್ಗಸೂಚಿಗಳನ್ವಯ ಬಿಡುಗಡೆ ಮಾಡಿರುವ ಅನುದಾನಕ್ಕೆ ಪೂರಕವಾಗಿ ಹಣ ಬಳಕೆ ಪ್ರಮಾಣ ಪತ್ರ ಮತ್ತು ಕಟ್ಟಡ ಪ್ರಗತಿಯನ್ನಾಧರಿಸಿ</td>
</tr>
</table>

	ಪೂರ್ಣಗೊಳ್ಳದೇ ಇರಲು ಕಾರಣವೇನು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)	2ನೇ/ಅಂತಿಮ ಕಂತಿನ ಅನುದಾನ ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಸದರಿ ಕಾಮಗಾರಿ ಸಂಬಂಧಿಸಿದಂತೆ ಈಗಾಗಲೇ ಬಿಡುಗಡೆಯಾಗಿರುವ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಕಟ್ಟಡ ಪ್ರಗತಿಯ ವರದಿಯನ್ನು ಸಲ್ಲಿಸದೇ ಇರುವ ಹಿನ್ನಲೆಯಲ್ಲಿ ಬಸವ ಭವನಗಳ ಕಾಮಗಾರಿಗಳು ಅಪೂರ್ಣಗೊಂಡಿರುತ್ತವೆ. ಹಣ ಬಳಕೆ ಪ್ರಮಾಣ ಪತ್ರ ಹಾಗೂ ಕಟ್ಟಡ ಪ್ರಗತಿಯ ವರದಿಯನ್ನು ಸಂಸ್ಥೆಯವರು ಸಲ್ಲಿಸಿದ್ದಲ್ಲಿ ಅನುದಾನ ಲಭ್ಯತೆಯ ಆಧಾರದ ಮೇಲೆ ಉಳಿಕೆ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು.
ಈ)	2021-22 ಮತ್ತು 2022-23 ರ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒದಗಿಸಿದ ಅನುದಾನವನ್ನು ಭವನಗಳಲ್ಲದೇ ಇತರೆ ಕಟ್ಟಡಗಳು/ಕಲಾ ಮಂದಿರ/ದೇವಸ್ಥಾನ/ಮಸೀದಿ/ಚರ್ಚ್/ ಶಾಲೆ ಇತ್ಯಾದಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆಯೇ; ಬಿಡುಗಡೆಗೊಳಿಸಿದಲ್ಲಿ ಯಾವ ಯಾವ ಅನುದಾನ ಬಿಡುಗಡೆ ಮಾಡಲಾಗಿದೆ? (ವಿವರ ಒದಗಿಸುವುದು)	ಸರ್ಕಾರದ ಆದೇಶ ಸಂಖ್ಯೆ :ಹಿಂವಕ 695 ಬಿಎಂಎಸ್ 2014 (ಭಾ-2) ದಿನಾಂಕ : 05.11.2014 ರ ಮಾರ್ಗಸೂಚಿಗಳನ್ವಯ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ & 3ಬಿ ಗೆ ಸೇರಿದ ನೋಂದಾಯಿತ ಸಂಘ-ಸಂಸ್ಥೆಗಳು/ಟ್ರಸ್ಟ್‌ಗಳಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡಲು ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ. ಇತರೆ ಕಟ್ಟಡಗಳು/ಕಲಾ ಮಂದಿರ/ಮಸೀದಿ/ಚರ್ಚ್/ಶಾಲೆ ಇತ್ಯಾದಿಗಳಿಗೆ ಅನುದಾನವನ್ನು ಮಂಜೂರು ಮಾಡಲು ಮಾರ್ಗಸೂಚಿಗಳನ್ವಯ ಅವಕಾಶವಿರುವುದಿಲ್ಲ.

ಸಂಖ್ಯೆ: ಹಿಂವಕ 528 ಬಿಎಂಎಸ್ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	572
ಸದಸ್ಯರ ಹೆಸರು	:	ಶ್ರೀ ಹರ್ಷವರ್ಧನ್ ಬಿ (ನಂಜನಗೂಡು)
ವಿಷಯ	:	ರೇಷ್ಮೆ ಬೆಳೆ ಹೆಚ್ಚಿಸಲು ರೈತರಿಗೆ ಉತ್ತೇಜನ
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವವರು	:	ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ಕರ್ನಾಟಕ ರಾಜ್ಯದಲ್ಲಿ ಎಷ್ಟು ರೇಷ್ಮೆ ಗೂಡು ಮಾರುಕಟ್ಟೆಗಳಿವೆ; ರೇಷ್ಮೆ ಉತ್ಪಾದನೆಯ ಗಣನೀಯವಾಗಿ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಳಿಮುಖವಾಗುವುದನ್ನು ತಪ್ಪಿಸಲು ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೇ;	ಕರ್ನಾಟಕ ರಾಜ್ಯದಲ್ಲಿ ಒಟ್ಟು 55 ರೇಷ್ಮೆ ಗೂಡಿನ ಮಾರುಕಟ್ಟೆಗಳಿವೆ. ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯು ಗಣನೀಯವಾಗಿ ಇಳಿಮುಖವಾಗಿರುವುದಿಲ್ಲ. ಕಳೆದ ಮೂರು ವರ್ಷಗಳ ಕಚ್ಚಾ ರೇಷ್ಮೆ ಉತ್ಪಾದನೆ ವಿವರ ಕೆಳಕಂಡಂತಿರುತ್ತದೆ. ಕ್ರ. ಸಂ | ವರ್ಷ | ಕಚ್ಚಾ ರೇಷ್ಮೆ ಉತ್ಪಾದನೆ (ಮೆ.ಟನ್) 1 | 2019-20 | 11,143 2 | 2020-21 | 11,292 3 | 2021-22 | 11,191 ಸರ್ಕಾರವು ನಿರಂತರವಾಗಿ ಹಲವಾರು ಫಲಾನುಭವಿ ಆಧಾರಿತ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ಸಹಾಯಧನ / ಪ್ರೋತ್ಸಾಹಧನ ನೀಡುವುದರ ಮೂಲಕ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾರ್ಯಕ್ರಮಗಳ ವಿವರಗಳನ್ನು ಪ್ರಶ್ನೆ ಸಂಖ್ಯೆ (ಈ)ರಲ್ಲಿ ಉತ್ತರಿಸಲಾಗಿದೆ.
ಉ)	ಕಡೂರು ತಾಲ್ಲೂಕು ಬೀರೂರು ಹೋಬಳಿ ಬೀರೂರು ಕಾವಲು ಗ್ರಾಮದ ಸರ್ವೆ ನಂ-4ರಲ್ಲಿ ಜಿಲ್ಲಾ ಯುವಜನ ಮತ್ತು ಪ್ರಚಾರ ಇಲಾಖೆಗೆ ಕಾಯ್ದಿರಿಸಿದ 10.00 ಎಕರೆ ಜಾಗದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ನಿರ್ಮಿಸಲಾಗುವುದು; ನಿರ್ಮಿಸದೇ ಇದ್ದಲ್ಲಿ, ಕಾರಣಗಳೇನು ಮತ್ತು ಜಾಗವನ್ನು ಕಾಯ್ದಿರಿಸಿರುವ ಉದ್ದೇಶವೇನು? (ಪೂರ್ಣ ಮಾಹಿತಿ ನೀಡುವುದು)	ವೇದಾ ವಿದ್ಯಾವರ್ಧಕ ಸಂಸ್ಥೆ, ಬೀರೂರು ಇವರು ಕಡೂರು ತಾಲ್ಲೂಕಿನಲ್ಲಿ ಬೀರೂರು ಕಾವಲು ಗ್ರಾಮದ ಸರ್ವೆ ನಂ-4ರಲ್ಲಿ 10.00 ಎಕರೆ ನಿವೇಶನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ದಾನವಾಗಿ ನೀಡಿರುತ್ತಾರೆ. ಸದರಿ ನಿವೇಶನವನ್ನು ಗುರುತು ಹಾಗೂ ಹದ್ದು-ಬಸ್ತು ಮಾಡಿಕೊಡುವಂತೆ ಕಂದಾಯ ಇಲಾಖೆಗೆ ಕೋರಲಾಗಿರುತ್ತದೆ. ಕಡೂರು ತಾಲ್ಲೂಕಿನಲ್ಲಿ ಈಗಾಗಲೇ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಿರುವುದರಿಂದ, ಬೀರೂರು ಕಾವಲು ಗ್ರಾಮದ ಸರ್ವೆ ನಂ-4ರಲ್ಲಿನ 10.00 ಎಕರೆ ನಿವೇಶನದಲ್ಲಿ ಮತ್ತೊಂದು ತಾಲ್ಲೂಕು ಕ್ರೀಡಾಂಗಣ ನಿರ್ಮಿಸುವ ಉದ್ದೇಶ ಸರ್ಕಾರಕ್ಕಿರುವುದಿಲ್ಲ. ಬೀರೂರು ಕಾವಲು ಗ್ರಾಮದ ಸರ್ವೆ ನಂ-4ರಲ್ಲಿನ 10.00 ಎಕರೆ ನಿವೇಶನವನ್ನು ಕಂದಾಯ ಇಲಾಖೆವತಿಯಿಂದ ಗುರುತು ಹಾಗೂ ಹದ್ದು ಬಸ್ತು ಮಾಡಿಕೊಟ್ಟ ನಂತರ ಕ್ರೀಡಾ ಚಟುವಟಿಕೆಗೆ ಬಳಸಿಕೊಳ್ಳಲು ಕ್ರಮವಹಿಸಲಾಗುವುದು.

ವೈಎಸ್‌ಡಿ-ಇಬಿಬಿ/110/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**577**
ಮಾನ್ಯ ಸದಸ್ಯರ ಹೆಸರು	ಶ್ರೀ ಬೆಳ್ಳಿ ಪ್ರಕಾಶ್ (ಕಡೂರು)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪ್ರಸಕ್ತ ಸಾಲಿನಲ್ಲಿ ಕಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಪ್ರವೇಶ ದೊರಕದೇ ಅವಕಾಶ ವಂಚಿತರಾಗಿರುವುದು ವಸತಿ ನಿಲಯಗಳಿಗೆ ಅರ್ಜಿಸಲ್ಲಿಸಿದ ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಪ್ರವೇಶ ದೊರಕದೇ ಅವಕಾಶ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ವಸತಿ ನಿಲಯಗಳಿಗೆ ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಎಷ್ಟು ಜನರಿಗೆ ಮತ್ತು ಯಾವ ಯಾವ ಆಧಾರದ ಮೇಲೆ ವಸತಿ ನಿಲಯಗಳಲ್ಲಿ ಪ್ರವೇಶ ಕಲ್ಪಿಸಲಾಗಿದೆ; ಬಾಕಿ ಇರುವ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುವುದೇ; ಕಲ್ಪಿಸದೇ ಇದ್ದಲ್ಲಿ ಕಾರಣಗಳೇನು;(ಮಾಹಿತಿ ನೀಡುವುದು)	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:** ಕಡೂರು ತಾಲ್ಲೂಕು ಒಳಗೊಂಡಂತೆ ಕಡೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಒಟ್ಟು 747 ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದು, 423 ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಲ್ಪಿಸಲಾಗಿದೆ. ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಅನುಣವಾಗಿ ಪ್ರವೇಶ ಕಲ್ಪಿಸಲಾಗುತ್ತದೆ. ಉಳಿಕೆಯಾಗುವ ಅರ್ಜಿಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಯಲ್ಲಿನ ಆಯಾ ತಾಲ್ಲೂಕಿನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚಿನ ಅರ್ಜಿಗಳ ಸ್ವೀಕೃತಿಗೆ ಪರ್ಯಾಯವಾಗಿ ಆಯಾ ಸಾಲಿಗೆ ಅನ್ವಯಿಸುವಂತೆ ಬೇಡಿಕೆ ಇರುವ ವಿದ್ಯಾರ್ಥಿನಿಲಯಗಳಿಗೆ ತಾತ್ಕಾಲಿಕವಾಗಿ ಆಂತರಿತ ವರ್ಗಾವಣೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಪ್ರವೇಶವಕಾಶವನ್ನು ಕಲ್ಪಿಸಲಾಗುತ್ತದೆ.

		ಸಮಾಜ ಕಲ್ಯಾಣ ಇಲಾಖೆ: ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆನ್‌ಲೈನ್ ಮೂಲಕ 137 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ. 70 ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿದೆ. ಉಳಿದ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಕ್ಕೆ ದಾಖಲಾತಿ ಸಲ್ಲಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಅರ್ಜಿ ಸಲ್ಲಿಸಿದ ಪರಿಶಿಷ್ಟ ಜಾತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲಾಗುವುದು. ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನಿಯಾಮನುಸಾರ ಮಂಜೂರಾತಿಯ ಶೇಕಡಾ 25 ರಷ್ಟು ಪ್ರವೇಶಾತಿ ನೀಡಲಾಗುವುದು.
ಇ)	ಯಾವ ಯಾವ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳಲ್ಲಿ ಪ್ರವೇಶ ಕಲ್ಪಿಸಲಾಗುವುದು; ಪ್ರಸಕ್ತ ಸಾಲಿನಲ್ಲಿ ಯಾವ ಕೋರ್ಸುಗಳನ್ನು ವ್ಯಾಸಂಗ ಮಾಡುತ್ತಿರುವುದು ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗಿದೆ; ಬಾಕಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ವ್ಯಾಸಂಗ ಮಾಡಲು ದಾಖಲಾತಿ ಹೊಂದುವ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪಿ.ಯು.ಸಿ/ತತ್ಸಮಾನ ಕೋರ್ಸ್‌ಗಳು, ಪದವಿ ಕೋರ್ಸ್‌ಗಳು, ವೃತ್ತಿಪರ ಕೋರ್ಸ್‌ಗಳು ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುತ್ತಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಪ್ರಸ್ತುತ ಪಿ.ಯು.ಸಿ/ತತ್ಸಮಾನ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಲ್ಪಿಸಲಾಗಿದ್ದು ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಉಳಿದಂತೆ ವೃತ್ತಿಪರ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ತರಗತಿಗಳು ಪ್ರಾರಂಭವಾದ ನಂತರ ಸದರಿ ಕೋರ್ಸಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

ಈ)	ಈ ಹಿಂದೆ ಇದ್ದಂತೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಪ್ರವೇಶ ನೀಡಿ ಉಳಿಕೆಯಾದ ಸೀಟುಗಳನ್ನು ಆಯಾ ಕ್ಷೇತ್ರದ ಶಾಸಕರುಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕೇಂದ್ರಗಳಿಗೆ ಹೊಂದಾಣಿಕೆ ಹಾಗೂ ಮರು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದೇ; ಹಾಗಿದ್ದಲ್ಲಿ ಯಾವಾಗ ಕಲ್ಪಿಸಲಾಗುವುದು; ಕಲ್ಪಿಸದೇ ಇದ್ದಲ್ಲಿ, ಕಾರಣಗಳೇನು? (ಮಾಹಿತಿ ನೀಡುವುದು)	ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 87 ಸಮನ್ವಯ 2013 ದಿನಾಂಕ:20-07-2013ರನ್ವಯ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳಿಗೆ ನಿಲಯದಲ್ಲಿ ಪ್ರವೇಶ ನೀಡಲಾಗುತ್ತಿದೆ. 2022-23ನೇ ಸಾಲಿಗೆ ಇಲಾಖೆ ವಿದ್ಯಾರ್ಥಿನಿಲಯಗಳಲ್ಲಿ ನಿಲಯವಾರು ಅರ್ಜಿಗಳನ್ನು ಸ್ವೀಕರಿಸುವ ಬದಲು ತಾಲ್ಲೂಕುವಾರು ಅರ್ಜಿಗಳನ್ನು ಆಹ್ವಾನಿಸಿ, ಸಿ.ಇ.ಟಿ ಕೌನ್ಸಿಲಿಂಗ್ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಮರುಹೊಂದಾಣಿಕೆ ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಸಂಖ್ಯೆ: ಹಿಂಪಕ 557 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

DF[redacted]90943

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 604
ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಯಚೂರು ಜಿಲ್ಲೆ ಲಿಂಗಸೂಗುರು ತಾಲ್ಲೂಕಿನ ನೂತನ ಮಾರ್ಗಗಳಿಗೆ ಹೊಸದಾಗಿ ಬಸ್ ಸಂಚಾರ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಒಟ್ಟು 138 ಗ್ರಾಮಗಳಿದ್ದು, ಎಲ್ಲಾ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಿರುತ್ತದೆ. ನೂತನ ಮಾರ್ಗಗಳ ಕುರಿತು ಸಾರ್ವಜನಿಕರಿಂದ ಪ್ರಸ್ತಾವನೆ ಇರುವುದಿಲ್ಲ. ಪ್ರಸ್ತಾವನೆಗಳು ಬಂದಲ್ಲಿ ಪರಿಶೀಲಿಸಿ, ಅಗತ್ಯ ಕ್ರಮ ಜರುಗಿಸಲಾಗುತ್ತದೆ.
ಆ	ಈ ತಾಲ್ಲೂಕಿನಲ್ಲಿ ಬಸ್‌ಗಳ ಕೊರತೆ ಇರುವುದರಿಂದ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಯಚೂರ ಜಿಲ್ಲೆಯ ಲಿಂಗಸುಗೂರ ಘಟಕದಲ್ಲಿ 115 ಅನುಸೂಚಿಗಳ ಕಾರ್ಯಾಚರಣೆಗೆ 118 ವಾಹನಗಳಿರುತ್ತವೆ. ವಾಹನಗಳು ರಹದಾರಿ ನವೀಕರಣ/ ದುರಸ್ತಿಗೆ ಬಂದಲ್ಲಿ ಮತ್ತು ಸಾಂದರ್ಭಿಕ ಕರಾರಿನ ಮೇರೆಗೆ ವಾಹನಗಳನ್ನು ಒದಗಿಸುವ ಸಂದರ್ಭದಲ್ಲಿ ಮಾತ್ರ, ಸ್ವಲ್ಪ ಮಟ್ಟಿಗೆ ವಾಹನಗಳ ಕೊರತೆ ಉಂಟಾಗುತ್ತದೆ. ಅದಾಗ್ಯೂ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ತೊಂದರೆಯಾಗದಂತೆ, ಶಾಲಾ/ಕಾಲೇಜು ಸಮಯಕ್ಕೆ ಸರಿಯಾಗಿ ಹಾಗೂ ಸಾರ್ವಜನಿಕರ ಅಗತ್ಯತೆಗನುಗುಣವಾಗಿ ಅನುಸೂಚಿ/ಸರತಿಗಳ ಕಾರ್ಯಾಚರಣೆ ಮಾಡಲಾಗುತ್ತಿದೆ.
ಇ	ಹಾಗಿದ್ದಲ್ಲಿ, ಹೊಸದಾಗಿ ಬಸ್‌ಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಕೋವಿಡ-19 ನಿಂದಾಗಿ ನಿಗಮವು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಕಳೆದ ಎರಡು ವರ್ಷಗಳಿಂದ (2020-21 ಮತ್ತು 2021-22ನೇ ಸಾಲಿನಲ್ಲಿ) ಹೊಸ ಬಸ್ಸುಗಳ ಖರೀದಿಯನ್ನು ಕೈಬಿಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 650 ಹೊಸ ಬಸ್‌ಗಳನ್ನು

DFA/890943

		ಖರೀದಿಸುವ ಯೋಜನೆ ಇದ್ದು, ಈ ಕುರಿತಂತೆ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಹೊಸ ಬಸ್ಸುಗಳು ಲಭ್ಯವಾದ ನಂತರ ಅವಶ್ಯಕತೆಗನುಗುಣವಾಗಿ ಹೊಸ ಬಸ್ಸುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.
ಈ	ರಾಯಚೂರು ಜಿಲ್ಲೆ ಲಿಂಗಸುಗೂರು ಪಟ್ಟಣಕ್ಕೆ ನೂತನ ಬಸ್ ನಿಲ್ದಾಣದ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?	ಲಿಂಗಸುಗೂರು ಪಟ್ಟಣದಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಲು 1ನೇ ಮತ್ತು 2ನೇ ಹಂತದ ಕಾಮಗಾರಿ ಕೆಲಸವನ್ನು ಪ್ರಾರಂಭಿಸಿ ಈಗಾಗಲೇ ಮುಕ್ತಾಯಗೊಳಿಸಲಾಗಿರುತ್ತದೆ. ವಾಹನಗಳ ಸರಾಗ ಚಾಲನೆಗಾಗಿ 3ನೇ ಹಂತದ ಕಾಮಗಾರಿಯಾದ ಪೂರ್ವ ದಿಕ್ಕಿನ ದ್ವಾರದ ಆವರಣಕ್ಕೆ ಕಾಂಕ್ರೀಟ್ ಅಳವಡಿಸುವುದಕ್ಕೆ ಮಂಜೂರಾತಿ ನೀಡಿ, ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಟಿಡಿ 190 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	605
ಮಾನ್ಯ ಸದಸ್ಯರ ಹೆಸರು	ಶ್ರೀ ಹೂಲಗೇರಿ ಡಿ.ಎಸ್ (ಲಿಂಗಸುಗೂರು)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಇರುವ ವಿವಿಧ ವಸತಿನಿಲಯಗಳೆಷ್ಟು; ಅವು ಯಾವುವು; ವಸತಿನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)	ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ 10 ಮೆಟ್ರಿಕ್-ಪೂರ್ವ ಮತ್ತು 08 ಮೆಟ್ರಿಕ್-ನಂತರದ ಹೀಗೆ ಒಟ್ಟು 18 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.. ಲಿಂಗಸುಗೂರು ತಾಲ್ಲೂಕಿನಲ್ಲಿರುವ ವಿದ್ಯಾರ್ಥಿನಿಲಯಗಳು /ನಿಲಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳಾದ ಜಮಖಾನ-ಹೊದಿಕೆ, ಸೋಲಾರ್ ವಾಟರ್ ಹೀಟರ್, ಕ್ರೀಡಾ ಸಾಮಗ್ರಿಗಳು, ವಾಟರ್ ಪ್ಯೂರಿಫೈಯರ್, ಟೂ ಟಯರ್ ಕಾಟ್, ಶುಚಿ-ಸಂಭ್ರಮ ಕಿಟ್, ಸೋಲಾರ್ ಲೈಟ್, ಡೈನಿಂಗ್ ಟೇಬಲ್, ಸಿ.ಸಿ.ಕ್ಯಾಮೆರಾ ಮತ್ತು ಇನ್ನಿತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಬಾಡಿಗೆ ಕಟ್ಟಡಗಳಲ್ಲಿರುವ ಕೆಲವೊಂದು ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶದ ಕೊರತೆಯಿಂದ ಶೌಚಾಲಯ / ಸ್ನಾನಗೃಹಗಳ ಮತ್ತು ಕೆಲವೊಂದು ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಗನುಗುಣವಾಗಿ ವಿದ್ಯಾರ್ಥಿನಿಲಯಗಳಿಗೆ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ನಿರ್ಮಿಸಿ, ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.
ಆ)	2022-23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಲಿಂಗಸುಗೂರು ತಾಲ್ಲೂಕಿನಲ್ಲಿರುವ ವಿವಿಧ ವಸತಿನಿಲಯಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈ ವಸತಿನಿಲಯಗಳಿಗೆ ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	2022-23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಲಿಂಗಸುಗೂರು ತಾಲ್ಲೂಕಿನಲ್ಲಿರುವ ವಿವಿಧ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಲಿಂಗಸುಗೂರು ತಾಲ್ಲೂಕಿನ 4 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಒಳಗೊಂಡಂತೆ ರಾಜ್ಯದಲ್ಲಿ ಸ್ಥಳವಕಾಶ ಇರುವ ವಿದ್ಯಾರ್ಥಿನಿಲಯಗಳಲ್ಲಿ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಶೇ.25 ರಷ್ಟು ಹೆಚ್ಚಿಸುವ ಪ್ರಸ್ತಾವನೆ ಅನುಮೋದನೆ ಹಂತದಲ್ಲಿರುತ್ತದೆ.

ಇ)	ಲಿಂಗಸುಗೂರು ಪಟ್ಟಣದಲ್ಲಿ ಹೊಸದಾಗಿ ಹಿಂದುಳಿದ ವರ್ಗಗಳ ಬಾಲಕಿಯರ ವೃತ್ತಿಪರ ವಸತಿನಿಲಯ, ಮೆಟ್ರಿಕ್-ನಂತರದ ಬಾಲಕಿಯರ ವಸತಿನಿಲಯ ಹಾಗೂ ಮೆಟ್ರಿಕ್-ನಂತರದ ಬಾಲಕರ ವಸತಿನಿಲಯಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆ ಲಿಂಗಸುಗೂರು ಟೌನ್‌ನಲ್ಲಿ ಹಾಗೂ ಲಿಂಗಸುಗೂರು ತಾಲ್ಲೂಕಿನ ಮಾಕಾಪೂರ, ಚಿತ್ತಾಪೂರ ಗ್ರಾಮಗಳಲ್ಲಿ ವಿದ್ಯಾರ್ಥಿನಿಲಯ ಮಂಜೂರಾತಿಗೆ ಪ್ರಸ್ತಾವನೆ ಸ್ವೀಕೃತವಾದ ನಂತರ ಅನುದಾನದ ಲಭ್ಯತೆಯನುಸಾರ ಹೊಸ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಕ್ರಮವಹಿಸಲಾಗುವುದು.
ಈ)	ಈ ತಾಲ್ಲೂಕಿನ ಮಾಕಾಪೂರ, ಚಿತ್ತಾಪೂರ ಗ್ರಾಮಗಳಲ್ಲಿ ಹೊಸದಾಗಿ ಮೆಟ್ರಿಕ್-ಪೂರ್ವ ಬಾಲಕರ ವಸತಿನಿಲಯ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	
ಉ)	ಲಿಂಗಸುಗೂರು ಪಟ್ಟಣದಲ್ಲಿ ತಾಲ್ಲೂಕು ಮಟ್ಟದ ಡಿ.ದೇವರಾಜ ಅರಸು ಭವನ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ಲಿಂಗಸುಗೂರು ಪಟ್ಟಣದಲ್ಲಿ ಡಿ. ದೇವರಾಜ ಅರಸು ಭವನ ನಿರ್ಮಾಣ ಮಾಡಲು ಲಿಂಗಸುಗೂರು ಪುರಸಭೆ ವ್ಯಾಪ್ತಿಯಲ್ಲಿ ಬರುವ ಸ.ನಂ 40/4& 40/5 ರಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ 1378 ಚ.ಮೀ ನಿವೇಶನ ಲಭ್ಯವಿದ್ದು, ಆಯವ್ಯಯದ ಲಭ್ಯತೆಗೆ ಅನುಗುಣವಾಗಿ ದೇವರಾಜ ಅರಸು ಭವನ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು.

ಸಂಖ್ಯೆ: ಹಿಂವಕ 530 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೊಲಗೇರಿ ಡಿ.ಎಸ್. (ಲಿಂಗಸುಗೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.605ಕ್ಕೆ ~~ಅನುಬಂಧ~~

ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಹಾಗೂ ಪ್ರವೇಶಾತಿಯ ವಿವರ

ಕ್ರ ಸಂ	ವಸತಿನಿಲಯದ ಹೆಸರು	ಮಂಜೂರಾತಿ ಸಂಖ್ಯೆ	ಪ್ರವೇಶಾತಿ ಸಂಖ್ಯೆ
1	ಮೆ/ಪೂ ಬಾಲಕರ ವಸತಿ ನಿಲಯ ಅನ್ವರಿ	60	60
2	ಮೆ/ಪೂ ಬಾಲಕರ ವಸತಿ ನಿಲಯ ಲಿಂಗಸುಗೂರು	75	75
3	ಮೆ/ಪೂ ಬಾಲಕರ ವಸತಿ ನಿಲಯ ಮಸ್ಕಿ	50	50
4	ಮೆ/ಪೂ ಬಾಲಕರ ವಸತಿ ನಿಲಯ ಮೆಟ್ಲೂರು	50	50
5	ಮೆ/ಪೂ ಬಾಲಕರ ವಸತಿ ನಿಲಯ ಮೆದಿಕಿನಾಳ್	70	70
6	ಮೆ/ಪೂ ಬಾಲಕರ ವಸತಿ ನಿಲಯ ಮುದಗಲ್ಲ	100	100
7	ಮೆ/ಪೂ ಬಾಲಕರ ವಸತಿ ನಿಲಯ ಸಜ್ಜಲಗುಡ್ಡ	55	55
8	ಮೆ/ಪೂ ಬಾಲಕರ ವಸತಿ ನಿಲಯ ಸಂತೆಕೆಲ್ಲೂರ್	60	60
9	ಮೆ/ಪೂ ಬಾಲಕಿಯರ ವಸತಿ ನಿಲಯ ಲಿಂಗಸುಗೂರು	60	60
10	ಮೆ/ಪೂ ಬಾಲಕಿಯರ ವಸತಿ ನಿಲಯ ಮುದಗಲ್ಲ	50	50
11	ಮೆ/ನಂತರ ಬಾಲಕರ ವಸತಿ ನಿಲಯ ಲಿಂಗಸುಗೂರ	140	140
12	ಮೆ/ನಂತರ ಬಾಲಕರ ವಸತಿ ನಿಲಯ ಮುದಗಲ್ಲ	125	125
13	ಮೆ/ನಂತರ ಬಾಲಕಿಯರ ವಸತಿ ನಿಲಯ ಈಚನಾಲ್	100	61
14	ಮೆ/ನಂತರ ಬಾಲಕಿಯರ ವಸತಿ ನಿಲಯ ಲಿಂಗಸುಗೂರ	100	94
15	ಮೆ/ನಂತರ ಬಾಲಕಿಯರ ವಸತಿ ನಿಲಯ ಲಿಂಗಸುಗುರು (ವಿಭಜನೆ)	115	111
16	ಮೆ/ನಂತರ ಬಾಲಕಿಯರ ವಸತಿ ನಿಲಯ ಲಿಂಗಸುಗೂರು	135	118
17	ಮೆ/ನಂತರ ಬಾಲಕಿಯರ ವಸತಿ ನಿಲಯ ಮಸ್ಕಿ	100	54
18	ಮೆ/ನಂತರ ಬಾಲಕಿಯರ ವಸತಿ ನಿಲಯ ಹಟ್ಟಿ	100	61

* ಪ್ರಸ್ತುತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಆನ್ ಲೈನ್ ಅರ್ಜಿ ಆಹ್ವಾನ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	606
ಸದಸ್ಯರ ಹೆಸರು	:	ಶ್ರೀ ಹೂಲಗೇರಿ ಡಿ.ಎಸ್
ಉತ್ತರಿಸುವ ದಿನಾಂಕ	:	14-09-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2022-23ನೇ ಸಾಲಿನಲ್ಲಿ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿವಿಧ ವಸತಿ ಶಾಲೆಗಳಲ್ಲಿ ವಿವಿಧ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>2022-23ನೇ ಸಾಲಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ 03 ವಸತಿ ಶಾಲೆಗಳು ನಡೆಯುತ್ತಿದ್ದು, ಸದರಿ ವಸತಿ ಶಾಲೆಗಳಿಗೆ ತರಗತಿವಾರು ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.
<table>
<tr><th>ಸ್ಥಳ</th><th>1ನೇ ತರಗತಿ</th><th>2ನೇ ತರಗತಿ</th><th>3ನೇ ತರಗತಿ</th><th>4ನೇ ತರಗತಿ</th><th>5ನೇ ತರಗತಿ</th><th>ಒಟ್ಟು</th></tr>
<tr><td>ಆಶಿಹಾಳ ತಾಂಡಾ</td><td>22</td><td>27</td><td>22</td><td>25</td><td>28</td><td>124</td></tr>
<tr><td>ಮಾರಲದಿನ್ನಿ ತಾಂಡಾ</td><td>35</td><td>19</td><td>18</td><td>24</td><td>29</td><td>125</td></tr>
<tr><td>ಅಡವಿಭಾವಿ ತಾಂಡಾ</td><td>17</td><td>19</td><td>19</td><td>30</td><td>40</td><td>125</td></tr>
</table>
ಸದರಿ 3 ವಸತಿ ಶಾಲೆಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ.</td></tr>
<tr><td>ಆ)</td><td>ಈ ತಾಲ್ಲೂಕಿನಲ್ಲಿ ಪ್ರಸ್ತುತ ಇರುವ ವಿವಿಧ ವಸತಿ ನಿಲಯಗಳೆಷ್ಟು; ಅವು ಯಾವುವು; ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈ ವಸತಿ ನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಈ ತಾಲ್ಲೂಕಿನಲ್ಲಿ ಪ್ರಸ್ತುತ ಒಟ್ಟು 20 ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 14 ಮೆಟ್ರಿಕ್ ಪೂರ್ವ ಹಾಗೂ 6 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಾಗಿದ್ದು, ಸದರಿ ವಸತಿ ನಿಲಯಗಳಿಗೆ ಒಟ್ಟು 3951 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಸದರಿ 20 ವಸತಿ ನಿಲಯಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಬೇಡಿಕೆ ಅನುಸಾರ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಒದಗಿಸಲಾಗಿರುತ್ತದೆ.
ವಸತಿ ನಿಲಯಗಳ ವಿವರವನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಇ)</td><td>ಈ ತಾಲ್ಲೂಕಿನ ಹಟ್ಟಿ ಪಟ್ಟಣ, ನಾಗರಾಳ ಆನೆಹೊಸರು ಗ್ರಾಮಗಳಲ್ಲಿ ಹೊಸದಾಗಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಲ್ಲಿ ಒಟ್ಟು 03 ಹೋಬಳಿಯಲ್ಲಿ 02 ವಸತಿ ಶಾಲೆಗಳು ಗುರುಗುಂಟ ಹೋಬಳಿ ಮತ್ತು ಮುದುಗಲ್ ಹೋಬಳಿಗಳಲ್ಲಿ ತಲಾ ಒಂದು ವಸತಿ ಶಾಲೆಯಂತೆ ಸದರಿ ತಾಲ್ಲೂಕಿನಲ್ಲಿ ಒಟ್ಟಾರೆ 04 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಸರ್ಕಾರದ ನೀತಿಯಂತೆ ಹೋಬಳಿಗೊಂಡು ವಸತಿ ಶಾಲೆ ಮಂಜೂರಾಗಿದೆ. ಹೆಚ್ಚುವರಿಯಾಗಿ ಲಿಂಗಸಗೂರು ಹೋಬಳಿಯ ಆನೆಹೊಸೂರು, ಮುದುಗಲ್ ಹೋಬಳಿಯ ನಾಗರಾಳ, ಗುರುಗುಂಟ ಹೋಬಳಿಯ ಹಟ್ಟಿ ಗ್ರಾಮಗಳಿಗೆ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುವುದು.</td></tr>
</table>

ಈ)	2017-18 ಮತ್ತು 2018-19ನೇ ಸಾಲುಗಳಲ್ಲಿ ಈ ಪ್ರಗತಿ ಕಾಲೋನಿ ಯೋಜನೆಯಡಿಯಲ್ಲಿ ಮಂಜೂರಾತಿಗಿರುವ ಅನುದಾನವೆಷ್ಟು; ಬಿಡುಗಡೆಯಾಗಿರುವ ಹಾಗೂ ಬಾಕಿ ಇರುವ ಅನುದಾನವೆಷ್ಟು; ಬಾಕಿ ಅನುದಾನ ಬಿಡುಗಡೆ ಮಾಡಲು ವಿಳಂಬವಾಗುವುದಕ್ಕೆ ಕಾರಣಗಳೇನು;	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ್ರಗತಿ ಕಾಲೋನಿ ಯೋಜನೆಯನ್ನು 2018-19ನೇ ಸಾಲಿನಿಂದ ಅನುಷ್ಠಾನ ಮಾಡಲಾಗುತ್ತಿದೆ. 2018-19ನೇ ಸಾಲಿನಲ್ಲಿ ಯೋಜನೆಯಡಿ ರೂ.520.27 ಕೋಟಿಗಳಿಗೆ ಮಂಜೂರಾತಿ ನೀಡಿ ರೂ.379.40 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು, ರೂ.140.87 ಕೋಟಿಗಳನ್ನು ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. 2022-23ನೇ ಸಾಲಿನಲ್ಲಿ ಸದರಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಬಂಡವಾಳ ಲೆಕ್ಕಶೀರ್ಷಿಕೆ:4225-01-796-0-01 ರಡಿ ರೂ.40.00 ಕೋಟಿಗಳನ್ನು ನಿಗದಿಪಡಿಸಿ ಎರಡು ಕಂತುಗಳಲ್ಲಿ ರೂ.20.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು. ಸದರಿ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಮಾಡಲಾಗಿರುತ್ತದೆ. ಮುಂದುವರೆದು, ರೂ.100.63 ಕೋಟಿಗಳ ಬಾಕಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯೊಂದಿಗೆ ಜಿಲ್ಲೆಗಳಿಂದ ಪ್ರಸ್ತಾವನೆಗಳು ಸ್ವೀಕೃತಗೊಂಡಿದ್ದು, ಅನುದಾನದ ಕೊರತೆಯಿಂದಾಗಿ ಜಿಲ್ಲೆಗೆ ಅನುದಾನ ಮರುಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.

ಸಕಇ 510 ಪಕವಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೂಲಗೇರಿ ಡಿ.ಎಸ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:606 ಕ್ಕೆ

ವಸತಿ ನಿಲಯ	ಮಂಜೂರಾತಿ ಸಂಖ್ಯೆ	2022-23ನೇ ಸಾಲಿನ ದಾಖಲಾತಿ ಸಂಖ್ಯೆ
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಲಿಂಗಸುಗೂರು	110	270
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ರೊಡಲಬಂಡಾ	95	105
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಬ್ಯೆಯ್ಯಾಪುರ	85	150
ಸರ್ಕಾರಿ ಮೆಟ್ರಿಕ್ ಪೂರ್ವಬಾಲಕರ ವಸತಿ ನಿಲಯ, ಹಟ್ಟಿ	85	84
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಮಸ್ಕಿ	70	152
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ನಾಗರಾಳ	70	108
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಗುರಗೂಂಟ	65	216
ಸರ್ಕಾರಿ ಮೆಟ್ರಿಕ್ ಪೂರ್ವಬಾಲಕರ ವಸತಿ ನಿಲಯ, ಆನೆಹೊಸುರು	60	122
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ನಾಗಲಾಪುರ	50	120
ಸರ್ಕಾರಿ ಮೆಟ್ರಿಕ್ ಪೂರ್ವಬಾಲಕರ ವಸತಿ ನಿಲಯ, ಯಲಗಟ್ಟ	60	50
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಈಚನಾಳ	60	154
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಖೈರವಾಡಗಿ	40	155
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿ ವಸತಿ ನಿಲಯ, ಲಿಂಗಸಗೂರು,	100	345
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿ ವಸತಿ ನಿಲಯ, ಮಾವಿನ ಭಾವಿ	60	168
ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ, ಲಿಂಗಸಗೂರು,	100	400
ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ, ಹಟ್ಟಿ	100	113
ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ, ಮಸ್ಕಿ	100	250
ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ, ಲಿಂಗಸಗೂರು, (ಪಿ.ಯು.ಸಿ)	100	357
ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ, ಲಿಂಗಸಗೂರು, (ಪದವಿ)	120	300
ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ, ಲಿಂಗಸಗೂರು, (ವೃತ್ತಿಪರ)	50	332
ಒಟ್ಟು	1580	3951

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	607
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ.
ಉತ್ತರಿಸುವ ದಿನಾಂಕ	:	14.09.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ತಾಲ್ಲೂಕು ಮಟ್ಟದ ವಾಲ್ಮೀಕಿ ಭವನ ಕಟ್ಟಡ ಕಾಮಗಾರಿ ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಹಾಗಿದ್ದಲ್ಲಿ, ಈ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಅನುದಾನ ಬಿಡುಗಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಸರ್ಕಾರದ ಆದೇಶ ಸಂಖ್ಯೆ: ಸಕಇ 152 ಪವಯೋ 2016 ದಿನಾಂಕ:24.10.2016 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಭವನವನ್ನು ರೂ.150.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ತಾತ್ವಿಕ ಮಂಜೂರಾತಿ ನೀಡಲಾಗಿದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಕಇ 03 ಪವಯೋ 2017, ದಿನಾಂಕ:08.02.2017 ರಲ್ಲಿ ಸದರಿ ಭವನಕ್ಕೆ ರೂ.199.55 ಲಕ್ಷಗಳ ವೆಚ್ಚದಲ್ಲಿ ವಾಲ್ಮೀಕಿ ಭವನ ಕಾಮಗಾರಿಯನ್ನು ಕೈಗೊಳ್ಳಲು ಈಗಾಗಲೇ ಮಂಜೂರು ಮಾಡಿರುವ ರೂ.150.00 ಲಕ್ಷಗಳ ಅನುದಾನವನ್ನು ಹೊರತುಪಡಿಸಿ ಹೆಚ್ಚುವರಿ ರೂ.49.55 ಲಕ್ಷಗಳನ್ನು ಸ್ಥಳೀಯ ಸಂಪನ್ಮೂಲಗಳಿಂದ ಭರಿಸಿಕೊಳ್ಳಲು ಆದೇಶಿಸಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಭವನವನ್ನು ನಿರ್ಮಿಸಲು ರೂ.150.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದರೆ, ಹೆಚ್ಚುವರಿ ಅನುದಾನ ರೂ.49.55 ಲಕ್ಷಗಳನ್ನು ಸ್ಥಳೀಯ ಮೂಲಗಳಿಂದ ಭರಿಸಲು ಸೂಚಿಸಲಾಗಿದ್ದು, ಸ್ಥಳೀಯ ಮೂಲಗಳಿಂದ ರೂ.9.64 ಲಕ್ಷಗಳನ್ನು ಮಾತ್ರ ಪಡೆಯಲಾಗಿರುತ್ತದೆ. ಹೆಚ್ಚುವರಿ ಅನುದಾನ ರೂ.49.55 ಲಕ್ಷಗಳಲ್ಲಿ ಸ್ಥಳೀಯ ಮೂಲಗಳಿಂದ ಪಡೆದಿರುವ 9.64 ಲಕ್ಷಗಳನ್ನು ಹೊರತು ಪಡಿಸಿ ರೂ.39.91 ಲಕ್ಷಗಳನ್ನು ಹಾಗೂ ಹೆಚ್ಚುವರಿಯಾಗಿ ರೂ 150.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಕಇ 422 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 608

ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)

ಉತ್ತರಿಸುವ ದಿನಾಂಕ : 14-09-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2022-23ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಹನಿ ನೀರಾವರಿ ಮತ್ತು ಯಂತ್ರೋಪಕರಣಗಳ ಸಹಾಯಧನಕ್ಕೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ವಿವರ ನೀಡುವುದು)	2022-23ನೇ ಸಾಲಿನ ಕೇಂದ್ರ ಸರ್ಕಾರದ ಅನುದಾನವು ನಿರೀಕ್ಷೆಯಲ್ಲಿದ್ದು, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಹನಿ ನೀರಾವರಿ ಮತ್ತು ಯಂತ್ರೋಪಕರಣಗಳ ಸಹಾಯಧನಕ್ಕೆ ಅನುದಾನ ಬಿಡುಗಡೆ ಮಾಡಲಾಗುತ್ತದೆ.
ಆ)	2022-23ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹನಿ ನೀರಾವರಿ ಮತ್ತು ಕೃಷಿ ಯಂತ್ರೋಪಕರಣಗಳನ್ನು ಪಡೆಯಲು ಅರ್ಜಿ ಸಲ್ಲಿಸಿರುವ ರೈತರೆಷ್ಟು; (ವಿವರ ನೀಡುವುದು)	2022-23ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹನಿ ನೀರಾವರಿಗೆ (Drip) ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ. ಆದರೆ, ತುಂತುರು ನೀರಾವರಿಗೆ (Spinkler) 593 ಅರ್ಜಿಗಳು ಮತ್ತು ಕೃಷಿ ಯಂತ್ರೋಪಕರಣಗಳಿಗಾಗಿ 253 ಅರ್ಜಿಗಳನ್ನು ರೈತರು ಸಲ್ಲಿಸಿರುತ್ತಾರೆ.
ಇ)	ಅರ್ಜಿ ಸಲ್ಲಿಸಿರುವ ಎಲ್ಲಾ ಫಲಾನುಭವಿಗಳಿಗೆ ಹನಿ ನೀರಾವರಿ ಮತ್ತು ಕೃಷಿ ಯಂತ್ರೋಪಕರಣಗಳನ್ನು ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಅರ್ಜಿಗಳನ್ನು ಸಂಗ್ರಹಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಅನುದಾನ ಲಭ್ಯತೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ಫಲಾನುಭವಿಗಳಿಗೆ ತುಂತುರು ನೀರಾವರಿ ಮತ್ತು ಕೃಷಿ ಯಂತ್ರೋಪಕರಣಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ: AGRI-ASC/70/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 609

ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ.ಟಿ (ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತುಸಾಂಖ್ಯಿಕ ಸಚಿವರು.

ಉತ್ತರಿಸಬೇಕಾದ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ	ದೊಡ್ಡಬಳ್ಳಾಪುರ ನಗರ ಸಭೆಯ ಕೇಂದ್ರ ಭಾಗದಲ್ಲಿರುವ ತೋಟಗಾರಿಕೆ ಇಲಾಖೆಗೆ ಒಳಪಟ್ಟಿರುವ ಸರ್ವೆ ನಂ. 122ರಲ್ಲಿ 20.00 ಎಕರೆ ವಿಸ್ತೀರ್ಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸ್ವಂತ ಕಟ್ಟಡ ಹೊಂದಲು 1.00 ಎಕರೆ ಭೂ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿದೆಯೇ;	ಪ್ರಸ್ತಾಪಿತ ತೋಟಗಾರಿಕೆ ಕ್ಷೇತ್ರದಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದ್ದು ಹಾಗೂ ಸದರಿ ತೋಟಗಾರಿಕೆ ಕ್ಷೇತ್ರವು ಕರ್ನಾಟಕ ಸರ್ಕಾರಿ ಉದ್ಯಾನಗಳ (ಸಂರಕ್ಷಣೆ) ಅಧಿನಿಯಮ, 1975ರ ವ್ಯಾಪ್ತಿಗೆ ಒಳಪಡಲಿದ್ದು, ಸದರಿ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣಕ್ಕಾಗಿ ನೀಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.
ಆ	ಹಾಗಿದ್ದಲ್ಲಿ, ಸರ್ಕಾರ 1.00 ಎಕರೆ ಭೂ ಮಂಜೂರು ಮಾಡಲು ಕೈಗೊಂಡಿರುವ ಕ್ರಮಗಳೇನು?	

No.HORTI 413 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	**566**
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್. ಡಿ(ಹೊಳೆನರಸೀಪುರ)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	**14.09.2022**

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ತೋಟಗಾರಿಕೆ ಬೆಳೆಗಾರರ ಹಿತದೃಷ್ಟಿಯಿಂದ ಈ ಹಿಂದೆ ಹಾಸನ ಜಿಲ್ಲೆ ಸೋಮನಹಳ್ಳಿ ಕಾವಲ ತೋಟಗಾರಿಕೆ ಕ್ಷೇತ್ರದ ಸುಮಾರು 400 ಎಕರೆ ಪ್ರದೇಶದಲ್ಲಿ ಹೊಸದಾಗಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಸ್ಥಾಪನೆಗೆ ಸರ್ಕಾರ ದಿನಾಂಕ:18.07.2019 ರಂದು ಆದೇಶ ಹೊರಡಿಸಿರುವುದು ನಿಜವೇ;(ಸಂಪೂರ್ಣ ಮಾಹಿತಿ ನೀಡುವುದು).	ಹೌದು,
ಆ)	ಹಾಸನ ಜಿಲ್ಲೆ ಹಾಗೂ ವಿಜಯಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ರೈತ ಸಮುದಾಯ ಮತ್ತು ತೋಟಗಾರಿಕಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೋಟಗಾರಿಕೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಉತ್ತೇಜನವನ್ನು ನೀಡುವ ಸಲುವಾಗಿ ಪ್ರಸಕ್ತ ಸಾಲಿನಿಂದಲೇ ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲು ಮತ್ತು ವಿಜಯಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಆಲಮೇಲದಲ್ಲಿ 2019-20ನೇ ಸಾಲಿನಿಂದಲೇ ಲಭ್ಯವಿರುವ ಸಿಬ್ಬಂದಿಗಳು ಹಾಗೂ ಮೂಲಭೂತ ಸೌಲಭ್ಯಗಳೊಂದಿಗೆ ತಲಾ ರೂ. 84.00 ಕೋಟಿಗಳಂತೆ ಒಟ್ಟು ರೂ.168.00 ಕೋಟಿಗಳ ಅನುದಾನದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶ ಹೊರಡಿಸಿರುವುದು ನಿಜವೇ;	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**610**
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ. ಸಿ.ಎನ್. (ಶ್ರವಣಬೆಳಗೊಳ)
ಉತ್ತರಿಸಬೇಕಾದ ದಿನಾಂಕ	:	14.09.2022
ಉತ್ತರಿಸುವ ಸಚಿವರು	:	ಮಾನ್ಯ ಕೃಷಿ ಸಚಿವರು

ಪ್ರಶ್ನೆ	ಉತ್ತರ
(ಅ) ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯು ಯಾವ ಅವಧಿಯಿಂದ ಜಾರಿಯಲ್ಲಿದೆ; ಈ ಯೋಜನೆಯ ಉದ್ದೇಶವೇನು; (ವಿವರ ನೀಡುವುದು)	**PMKISAN - ಕೇಂದ್ರ ಸರ್ಕಾರ:** ಕರ್ನಾಟಕ ರಾಜ್ಯದಲ್ಲಿ ಭಾರತ ಸರ್ಕಾರದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ದಿನಾಂಕ:01.12.2018 ರಿಂದ ಅನ್ವಯವಾಗುವಂತೆ ಫೆಬ್ರವರಿ 2019 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ ಸದರಿ ಯೋಜನೆಯಡಿ ಅರ್ಹ ಫಲಾನುಭವಿ ರೈತರಿಗೆ ವಾರ್ಷಿಕ ರೂ.6000/-ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಈ ಅನುದಾನವನ್ನು ನಾಲ್ಕು ತಿಂಗಳಿಗೊಮ್ಮೆ ರೂ.2000/-ಗಳಂತೆ ಮೂರು ಕಂತುಗಳಲ್ಲಿ ನೀಡಲಾಗುತ್ತಿದೆ. **PMKISAN - ಕರ್ನಾಟಕ ಸರ್ಕಾರ:** ಪಿ.ಎಂ.ಕಿಸಾನ್-ಕರ್ನಾಟಕ ಯೋಜನೆಯಡಿ ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ಫಲಾನುಭವಿ ರೈತರಿಗೆ ದಿನಾಂಕ:14.08.2019 ರಿಂದ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ರೂ.4000/-ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತಿದೆ. **ಈ ಯೋಜನೆಯ ಉದ್ದೇಶ:** ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತ ಕುಟುಂಬವು ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯ ಗಳಿಸಲು ಅನುಕೂಲವಾಗಲೆಂಬ ಉದ್ದೇಶದಿಂದ ಪಿಎಂ ಕಿಸಾನ್ ಯೋಜನೆಯಡಿ ಈ ಆರ್ಥಿಕ ನೆರವನ್ನು ನೀಡಲಾಗುತ್ತಿದೆ.
(ಆ) ಈ ಯೋಜನೆಯಡಿ ಕಳೆದ ಎರಡು ವರ್ಷಗಳಿಂದ ಎಷ್ಟು ಜನ ರೈತರುಗಳಿಗೆ ನೆರವು ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು);	ಈ ಯೋಜನೆಯಡಿ ಕಳೆದ ಎರಡು ವರ್ಷಗಳಿಂದ ರೈತರಿಗೆ ನೀಡಲಾದ ಆರ್ಥಿಕ ನೆರವಿನ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ.
(ಇ) ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿ ಇದುವರೆವಿಗೂ ಎಷ್ಟು ರೈತರು ಈ ಯೋಜನೆಯ ನೆರವು ಪಡೆದುಕೊಂಡಿದ್ದಾರೆ? (ನೆರವು ಪಡೆದುಕೊಂಡಿರುವ ರೈತರುಗಳ ವಿವರ ನೀಡುವುದು)	ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿ ಇದುವರೆವಿಗೂ ಆರ್ಥಿಕ ನೆರವು ಪಡೆದಿರುವ ರೈತರ ವಿವರಗಳನ್ನು soft copy ಯಲ್ಲಿ ಗಣಕೀಕರಿಸಿ Compact Disc ನಲ್ಲಿ ಒದಗಿಸಿದೆ.

ಕೃಇ 57 ಕೃಉಇ 2022

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ವಿಧಾನ ಸಭಾ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:610ಕ್ಕೆ ಅನುಬಂಧ

ಪಿ.ಎಂ.ಕಿಸಾನ್ ಯೋಜನೆಯ ಲಾಭವನ್ನು ಪಡೆದಿರುವ ಫಲಾನುಭವಿಗಳ ವಿವರ (ದಿನಾಂಕ: 09.09.2022ರ ವರೆಗೆ)

ಕ್ರ. ಸಂ.	ಜಿಲ್ಲೆಗಳು	ಫಲಾನುಭವಿಗಳ ಸಂಖ್ಯೆ	
		2020-21	2021-22
1	ಬಾಗಲ ಕೋಟೆ	190932	201796
2	ಬಳ್ಳಾರಿ	205392	213598
3	ಬೆಳಗಾವಿ	539342	563446
4	ಬೆಂಗಳೂರು ಗ್ರಾಮಾಂತರ	78770	79470
5	ಬೆಂಗಳೂರು ನಗರ	31468	31633
6	ಬೀದರ್	180345	177700
7	ಚಾಮರಾಜನಗರ	108157	109438
8	ಚಿಕ್ಕಬಳ್ಳಾಪುರ	112289	114113
9	ಚಿಕ್ಕಮಗಳೂರು	116826	118538
10	ಚಿತ್ರದುರ್ಗ	231769	188985
11	ದಕ್ಷಿಣ ಕನ್ನಡ	151035	144947
12	ದಾವಣಗೆರೆ	146970	153080
13	ಧಾರವಾಡ	120718	122119
14	ಗದಗ	128542	132050
15	ಹಾಸನ	246595	251244
16	ಹಾವೇರಿ	192518	200359
17	ಕಲಬುರ್ಗಿ	261821	269420
18	ಕೊಡಗು	45821	45261
19	ಕೋಲಾರ	110268	114626
20	ಕೊಪ್ಪಳ	150401	159377
21	ಮಂಡ್ಯ	259060	264539
22	ಮೈಸೂರು	219669	228907
23	ರಾಯಚೂರು	208898	221855
24	ರಾಮನಗರ	115203	116592
25	ಶಿವಮೊಗ್ಗ	150748	151614
26	ತುಮಕೂರು	287154	303729
27	ಉಡುಪಿ	148126	150593
28	ಉತ್ತರ ಕನ್ನಡ	173941	168627
29	ವಿಜಯಪುರ	250915	265552
30	ಯಾದಗಿರಿ	112015	119948
Total		5275708	5383156

<u>ಕರ್ನಾಟಕ ವಿಧಾನಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	611
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ .ಸಿ.ಎನ್ (ಶ್ರವಣಬೆಳಗೊಳ)
ಉತ್ತರಿಸಬೇಕಾದ ದಿನಾಂಕ	:	14.09.2022
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಜ್ಯದಲ್ಲಿ ಕಳೆದ ವರ್ಷ ಪ್ರವಾಹದಿಂದಾಗಿ ಬೆಳೆ ನಷ್ಟಕೆ 48 ಗಂಟೆಗಳಲ್ಲೇ ಪರಿಹಾರ ವಿತರಣೆ ಮಾಡಿರುವ ರೈತರುಗಳ ಸಂಖ್ಯೆ ಎಷ್ಟು</td><td>ರಾಜ್ಯದಲ್ಲಿ ಕಳೆದ ವರ್ಷ ಪ್ರವಾಹದಿಂದಾಗಿ ಬೆಳೆ ನಷ್ಟಕೆ ಸಂಬಂಧಿಸಿದಂತೆ 1,856,083 ಸಂತ್ರಸ್ಥರಿಗೆ ಪರಿಹಾರ ವಿತರಣೆ ಮಾಡಲಾಗಿರುತ್ತದೆ.</td></tr>
<tr><td>ಆ) ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಹಾರ ಪಡೆದು ಕೊಂಡಿರುವ ರೈತರುಗಳೆಷ್ಟು (ವಿವರ ನೀಡುವುದು)</td><td>ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 20 ಫೇಸ್ ಗಳಲ್ಲಿ 30,143 ರೈತರಿಗೆ ಪರಿಹಾರ ಪಾವತಿ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.
<table>
<tr><th>ID</th><th>ಜಿಲ್ಲೆ ಮತ್ತು ತಾಲ್ಲೂಕು</th><th>ಫಲಾನುಬವಿಗಳ ಸಂಖ್ಯೆ</th></tr>
<tr><td>519</td><td>ಹಾಸನ ಜಿಲ್ಲೆ ಅರಕಲಗೂಡು, ಚನ್ನರಾಯಪಟ್ಟಣ</td><td>1</td></tr>
<tr><td>524</td><td>ಹಾಸನ ಜಿಲ್ಲೆ, ಅರಸೀಕೆರೆ ಚನ್ನರಾಯಪಟ್ಟಣ</td><td>42</td></tr>
<tr><td>527</td><td>ಹಾಸನ ಜಿಲ್ಲೆ, ಆಲೂರು ,ಚನ್ನರಾಯಪಟ್ಟಣ</td><td>1</td></tr>
<tr><td>542</td><td>ಹಾಸನ ಜಿಲ್ಲೆ, ,ಚನ್ನರಾಯಪಟ್ಟಣ</td><td>30099</td></tr>
<tr><td></td><td>ಒಟ್ಟು</td><td>30,143</td></tr>
</table></td></tr>
</table>

(ಕೃಷಿ ಇಲಾಖೆಯಿಂದ ವರ್ಗಾವಣೆಗೊಂಡಿರುತ್ತದೆ)

ಕಂಇ *373* ಟಿಎನ್ಆರ್ *2022*

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	612
ಸದಸ್ಯರ ಹೆಸರು	ಶ್ರೀ ಬಾಲಕೃಷ್ಣ ಸಿ. ಎನ್ (ಶ್ರವಣಬೆಳಗೊಳ)
ಉತ್ತರಿಸುವ ದಿನಾಂಕ	14-09-2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಯಾಂತ್ರೀಕರಣದ ಉದ್ದೇಶವೇನು;	ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗೂ ಕೃಷಿಯಲ್ಲಿ ಯಾಂತ್ರೀಕರಣವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.
ಆ)	ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಎಷ್ಟು ಎಕರೆ ಭೂಮಿ ಈ ಯೋಜನೆಗೆ ಒಳಪಟ್ಟಿದೆ;	ಕೃಷಿ ಯಾಂತ್ರೀಕರಣ ಯೋಜನೆಯು ಫಲಾನುಭವಿ ಆಧಾರಿತ ಯೋಜನೆಯಾಗಿದ್ದು, ರೈತರ ಅವಶ್ಯಕತೆಗೆ ಅನುಗುಣವಾಗಿ ಕೃಷಿ ಯಂತ್ರೋಪಕರಣಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ರೈತರಿಗೆ ದೊರೆಯುವಂತಾಗಲು ಹೋಬಳಿಗೊಂದರಂತೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಪ್ರತಿ ಎಕರೆಗೆ ಯಾವ ಯಾವ ಯೋಜನೆಗಳನ್ನು ನೀಡಲಾಗಿದೆ	ಕೃಷಿ ಇಲಾಖೆಯಲ್ಲಿ ರೈತರಿಗೆ ಅವಶ್ಯವಿರುವ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಅವರ ಇಚ್ಛಾನುಸಾರ ಸಹಾಯಧನದಡಿ ಒದಗಿಸಲಾಗುತ್ತಿದೆ. "ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250/- ಗಳಂತೆ ಗರಿಷ್ಠ ಐದು ಎಕರೆಗೆ ಡಿ.ಬಿ.ಟಿ ಮೂಲಕ ಡೀಸೆಲ್ ಗೆ ಸಹಾಯಧನವನ್ನು ನೀಡಲು **"ರೈತ ಶಕ್ತಿ"** ಎಂಬ ಹೊಸ ಯೋಜನೆಯನ್ನು 2022-23 ನೇ ಸಾಲಿನ ಆಯವ್ಯಯ ಘೋಷಣೆ ಮಾಡಲಾಗಿದ್ದು, ಯೋಜನೆಯ ಅನುಷ್ಠಾನಕ್ಕಾಗಿ ದಿನಾಂಕ: 11/07/2022 ಸರ್ಕಾರಿ ಆದೇಶ ಸಂಖ್ಯೆ: AGRI-AML/109/2022, ಅನ್ನು ಹೊರಡಿಸಲಾಗಿರುತ್ತದೆ. FRUITS ತಂತ್ರಾಂಶದಲ್ಲಿ ನೋಂದಾವಣಿಗೊಂಡ ರೈತರು ಹೊಂದಿರುವ ಭೂ ಹಿಡುವಳಿಯ ಆಧಾರದ ಮೇಲೆ ಪ್ರತಿಯೊಬ್ಬ ರೈತರಿಗೆ ಪ್ರತಿ ಎಕರೆಗೆ ರೂ.250/- ರಂತೆ ಗರಿಷ್ಠ

		ಐದು ಎಕರೆಗೆ ರೂ.1250/- ರವರೆಗೆ ಡೀಸೆಲ್ ಸಹಾಯಧನವನ್ನು ಈ ಕೆಳಕಂಡಂತೆ ಒದಗಿಸಲಾಗುವುದು.

ಕ್ರ. ಸಂ	ವಿಸ್ತೀರ್ಣ	ಒದಗಿಸುವ ಸಹಾಯ ಧನ
1.	ಒಂದು ಎಕರೆವರೆಗೆ (<=1.00 ಎಕರೆ)	ರೂ.250/-
2.	ಎರಡು ಎಕರೆವರೆಗೆ (> 1.00 ಎಕರೆ <=2.00)	ರೂ.500/
3	ಮೂರು ಎಕರೆವರೆಗೆ (> 2.00 ಎಕರೆ <=3.00)	ರೂ.750/
4	ನಾಲ್ಕು ಎಕರೆವರೆಗೆ (>3.00 ಎಕರೆ <=4.00)	ರೂ.1000/
5	ನಾಲ್ಕು ಎಕರೆಗೆ ಮೇಲ್ಪಟ್ಟ(> 4.00)	ರೂ.1250/

ಈ)	ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಎಕರೆ ಭೂಮಿಯನ್ನು ಯಾಂತ್ರೀಕರಣ ವ್ಯಾಪ್ತಿಗೊಳಪಡಿಸಲಾಗಿದೆ? (ವಿವರವಾರು ಮಾಹಿತಿ ನೀಡುವುದು)	ಕೃಷಿ ಯಾಂತ್ರೀಕರಣ ಯೋಜನೆಯು ಫಲಾನುಭವಿ ಆಧಾರಿತ ಯೋಜನೆಯಾಗಿದ್ದು, ರೈತರ ಅವಶ್ಯಕತೆಗೆ ಅನುಗುಣವಾಗಿ ಕೃಷಿ ಯಂತ್ರೋಪಕರಣಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ವಿತರಿಸಲಾದ ಕೃಷಿ ಯಂತ್ರೋಪಕರಣಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಸಂಖ್ಯೆ: AGRI-ASC/67/ 2022

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ಅನುಬಂಧ

ಕಳೆದ ಎರಡು ವರ್ಷಗಳಲ್ಲಿ ಶ್ರವಣಬೆಳಗೋಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿತರಿಸಲಾದ ಕೃಷಿ ಯಂತ್ರೋಪಕರಣಗಳ ವಿವರ

ಕ್ರ.ಸಂ	ಉಪಕರಣದ ಹೆಸರು	ವಿತರಿಸಲಾದ ಉಪಕರಣಗಳ ಒಟ್ಟು ಸಂಖ್ಯೆ
1	ಸಣ್ಣ ಟ್ರ್ಯಾಕ್ಟರ್	8
2	ಪವರ್ ಟಿಲ್ಲರ್	4
3	ಭೂಮಿ ಸಿದ್ಧತೆ ಉಪಕರಣಗಳು	913
4	ತ್ಯಾಜ್ಯ ವಸ್ತು ನಿರ್ವಹಣೆ ಉಪಕರಣಗಳು	199
5	ಅಂತರ ಬೇಸಾಯ ಹಾಗೂ ಸ್ವಯಂ ಚಾಲಿತ ಉಪಕರಣಗಳು	704
6	ಡೀಸೆಲ್ ಪಂಪ್ ಸೆಟ್‌ಗಳು	4
7	ಸಸ್ಯ ಸಂರಕ್ಷಣಾ ಉಪಕರಣಗಳು	2
8	ಕೃಷಿ ಸಂಸ್ಕರಣಾ ಉಪಕರಣಗಳು	9
	ಒಟ್ಟು	1843

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 613

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಬಾಲಕೃಷ್ಣಸಿ.ಎನ್ (ಶ್ರವಣಬೆಳಗೊಳ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ಪ್ರದೇಶವನ್ನು ವಿಸ್ತರಿಸಿ ರೈತರ ಆದಾಯವನ್ನು ಹೆಚ್ಚಿಸಲು ಸರ್ಕಾರದಲ್ಲಿರುವ ಕಾರ್ಯಕ್ರಮಗಳೇನು; (ವಿವರ ನೀಡುವುದು)	ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ಪ್ರದೇಶವನ್ನು ವಿಸ್ತರಿಸಿ ರೈತರ ಆದಾಯವನ್ನು ಹೆಚ್ಚಿಸಲು ಈ ಕೆಳಕಂಡ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್, ರಾಷ್ಟ್ರೀಯ ಸುಸ್ಥಿರ ಬೇಸಾಯ ಯೋಜನೆ, ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ, ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ, ಪರಂಪರಾಗತ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ ಮತ್ತು ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಗಳ ಮೂಲಕ ಪ್ರಮುಖವಾಗಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಸಾವಯುವ ಕೃಷಿ, ಹನಿ ನೀರಾವರಿ, ನೀರು ಸಂಗ್ರಹಣಾ ಘಟಕ, ಯಾಂತ್ರಿಕರಣ, ಪುನಶ್ಚೇತನ, ಸಂಸ್ಕರಣೆ, ಮೌಲ್ಯವರ್ಧನೆ, ನರ್ಸರಿ ಸ್ಥಾಪನೆ, ಸಂರಕ್ಷಿತ ಬೇಸಾಯ, ಶೀಥಲ ಗೃಹ ಘಟಕ, ಪ್ಯಾಕ್ ಹೌಸ್ ಘಟಕ, ಶೇಖರಣಾ ಘಟಕ, ಕೊಳವೆ ಬಾವಿ, ಡೀಸಲ್ /ವಿದ್ಯುತ್ ಚಾಲಿತ ಪಂಪ್ ಸೆಟ್, ತೋಟಗಾರಿಕೆ ಬೆಳೆಗಳ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮಗಳಾದ ನೀರಿನಲ್ಲಿ ಕರಗುವ ರಸಗೊಬ್ಬರ ಘಟಕ, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್, [illegible]

		ಮೂಲಭೂತ ಸೌಕರ್ಯಗಳ ನಿರ್ಮಾಣ ಮುಂತಾದವುಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ. 2. ಇಲಾಖೆಯ ಕ್ಷೇತ್ರಗಳಲ್ಲಿ ಹಾಗೂ ಉತ್ಕೃಷ್ಟ ಕೇಂದ್ರಗಳಲ್ಲಿ ನೂತನ ತಾಂತ್ರಿಕತೆಯ ಪ್ರಾತ್ಯಕ್ಷತೆಗಳನ್ನು ಹಮ್ಮಿಕೊಂಡು ರೈತರಿಗೆ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ. 3. ಹೊರದೇಶ, ಒಳ ಹಾಗೂ ಹೊರ ರಾಜ್ಯ ಪ್ರವಾಸ ಕೈಗೊಳ್ಳುವ ಮೂಲಕ ರೈತರಿಗೆ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ. 4. ಇಲಾಖೆಯಲ್ಲಿ ಉತ್ಪಾದಿಸಲಾಗುವ ಗುಣಮಟ್ಟದ ಸಸಿ/ಕಸಿ ವಿತರಣೆ, ಜೈವಿಕ ಪರಿಕರಗಳನ್ನು ಇಲಾಖಾ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. 5. ಎಲ್ಲಾ ಜಿಲ್ಲೆಗಳಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಮೂಲಕ ರೈತರಿಗೆ ಅವಶ್ಯವಿರುವ ಪರಿಕರಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಹಾಗೂ ಬೆಳೆದಿರುವ ಉತ್ಪನ್ನಗಳಿಗೆ ಸಂಸ್ಥೆಯ ಮೂಲಕ ಉತ್ತಮ ಮಾರುಕಟ್ಟೆ ದರವನ್ನು ಕಲ್ಪಿಸಲಾಗುತ್ತಿದೆ. 6. ತೋಟಗಾರಿಕೆ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸುವ ಉತ್ತಮ ಹೊಸ ತಳಿ/ಸಂಕರಣ ಗಳನ್ನು ರೈತರಿಗೆ ಪರಿಚಯಿಸಲಾಗುತ್ತಿದೆ. 7. ರೈತರ ಉತ್ಪನ್ನಗಳಿಗೆ ಬೆಲೆ ಇಳಿಮುಖವಾದ ಉತ್ಪನ್ನಗಳನ್ನು ಶೇಖರಿಸಲು ಶೈತ್ಯಾಗಾರಗಳ ಸೌಲಭ್ಯವನ್ನು ನೀಡಲಾಗಿದೆ. 8. ಮಣ್ಣು, ನೀರು ಮತ್ತು ಎಲೆ ವಿಶ್ಲೇಷಣೆ ಮಾಡಿ ಪೋಷಕಾಂಶಗಳ ಶಿಫಾರಸ್ಸು ಮಾಡಲಾಗುತ್ತಿದೆ.
ಆ)	ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ತೋಟಗಾರಿಕೆ ಪ್ರದೇಶವನ್ನು ವಿಸ್ತರಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಅಂದಾಜು 26.20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, 2021-22ನೇ ಸಾಲಿನಲ್ಲಿ ವಿವಿಧ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್, ಎಣ್ಣೆ ತಾಳೆ ಅಭಿಯಾನ ಯೋಜನೆ ಮತ್ತು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗಳ ಮೂಲಕ 39041ಹೆಕ್ಟೇರ್ ತೋಟಗಾರಿಕೆ ಪ್ರದೇಶವನ್ನು ವಿಸ್ತರಿಸಲಾಗಿದೆ.

ಕ್ರ.ಸಂ	ಜಿಲ್ಲೆಗಳು	ಒಟ್ಟು
1	ಬೆಂಗಳೂರು (ನ)	136.10
2	ಬೆಂಗಳೂರು (ಗ್ರಾ)	320.96
3	ಕೋಲಾರ	1168.51
4	ತುಮಕೂರು	2930.88
5	ದಾವಣಗೆರೆ	1755.73
6	ಶಿವಮೊಗ್ಗ	913.08
7	ರಾಮನಗರ	3093.41
8	ಚಿಕ್ಕಬಳ್ಳಾಪುರ	1887.10
9	ಚಿತ್ರದುರ್ಗ	1301.75
10	ಬಾಗಲಕೋಟೆ	1099.18
11	ಬೆಳಗಾವಿ	1154.20
12	ಧಾರವಾಡ	251.34
13	ಗದಗ	420.09
14	ಹಾವೇರಿ	2185.38
15	ಉತ್ತರ ಕನ್ನಡ	461.38
16	ವಿಜಯಪುರ	532.58
17	ಕಲಬುರ್ಗಿ	1251.47
18	ಕೊಪ್ಪಳ	1534.20
19	ರಾಯಚೂರು	1080.62
20	ಯಾದಗಿರಿ	404.19
21	ಬಳ್ಳಾರಿ	2423.14
22	ಬೀದರ್	305.39
23	ಚಾಮರಾಜನಗರ	738.16
24	ಚಿಕ್ಕಮಗಳೂರು	2297.09
25	ದ.ಕನ್ನಡ	419.26
26	ಹಾಸನ	4539.52
27	ಕೊಡಗು	175.12
28	ಮಂಡ್ಯ	1892.29
29	ಮೈಸೂರು	2003.04
30	ಉಡುಪಿ	366.43
	ಒಟ್ಟು	39041.59

ಇ) ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಹೆಕ್ಟೇರ್ ತೋಟಗಾರಿಕೆ ಪ್ರದೇಶವನ್ನು ವಿಸ್ತರಿಸಲಾಗಿದೆ?(ವಿವರ ನೀಡುವುದು)

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 684.80 ಹೆಕ್ಟೇರ್ ಗಳಷ್ಟು ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲಾಗಿರುತ್ತದೆ. ಯೋಜನೆವಾರು ಕೈಗೊಳ್ಳಲಾದ ಪ್ರದೇಶ ವಿಸ್ತರಣೆಯ ವಿವರ ಈ ಕೆಳಗಿನಂತಿದೆ.

ಕ್ರ ಸಂ	ಯೋಜನೆಯ ಹೆಸರು	ಬೆಳೆ	ವಿಸ್ತರಣೆ ಯಾದ ಪ್ರದೇಶ (ಹೆಕ್ಟೇರ್ ಗಳಲ್ಲಿ)
1	ಮಹಾತ್ಮಗಾಂಧೀ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ	ತೆಂಗು	644.80
2	ಮಹಾತ್ಮಗಾಂಧೀ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ	ಬಾಳೆ	36.00
3	ಸಮಗ್ರ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ	ಅಂಗಾಂಶ ಬಾಳೆ	2.00
4	ಸಮಗ್ರ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ	ಹೈಬ್ರಿಡ್ ತರಕಾರಿಗಳು	2.00
ಒಟ್ಟು			684.80

No.HORTI 414 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 614
2	ಸದಸ್ಯರ ಹೆಸರು	: ಶ್ರೀ. ಸುಬ್ಬಾರೆಡ್ಡಿ ಎಸ್. ಎನ್. (ಬಾಗೇಪಲ್ಲಿ)
3	ಉತ್ತರಿಸುವ ದಿನಾಂಕ	: 14.09.2022
4	ಉತ್ತರಿಸುವ ಸಚಿವರು	: ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಶಾಸಕರ ಪ್ರದೇಶಾಭಿವೃದ್ಧಿ ನಿಲಯ ಅನುದಾನವನ್ನು 200.00 ಲಕ್ಷ ವಾರ್ಷಿಕವಾಗಿ ನೀಡುತ್ತಿದ್ದು, ಈ ಅನುದಾನವನ್ನು ಕಂತುಗಳಲ್ಲಿ ಬಿಡುಗಡೆ ಮಾಡದೇ ಒಂದೇ ಬಾರಿ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
(ಆ)	ಇತ್ತೀಚಿಗೆ ಮಳೆಯಿಂದ ಅನೇಕ ಪ್ರದೇಶಗಳು ಹಾಳಾಗಿದ್ದು, ಅವುಗಳ ತುರ್ತು ದುರಸ್ತಿಗೆ ಶಾಸಕರ ಪ್ರದೇಶಾಭಿವೃದ್ಧಿ ಅನುದಾನ ಹೆಚ್ಚಿಗೆ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು?	ಮಳೆಯಿಂದ ಹಾಳಾಗಿರುವ ಪ್ರದೇಶಗಳ ತುರ್ತು ದುರಸ್ತಿಗೆ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು ಹೆಚ್ಚಿಗೆ ಮಾಡಲು ಅವಕಾಶವಿಲ್ಲ.

ಸಂಖ್ಯೆ: ಪಿಡಿಎಸ್ 73 ಕೆಎಲ್ ಎಸ್ 2022

(ಮುನಿರತ್ನ)
ತೋಟಗಾರಿಕೆ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	615
ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್.ಎನ್
ಉತ್ತರಿಸಬೇಕಾದ ದಿನಾಂಕ	14/09/2022
ಉತ್ತರಿಸಬೇಕಾದವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ, ಗುಳೂರು ಹೋಬಳಿ ನಾರಾಯಣಸ್ವಾಮಿ ಕೋಟೆ ಗ್ರಾಮಕ್ಕೆ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಾವ ವರ್ಷ ಮಂಜೂರು ಮಾಡಲಾಗಿದೆ;	ಸರ್ಕಾರದ ಪತ್ರ ಸಂಖ್ಯೆ: ಸಕಇ 196 ಮೊದೇಶಾ 2016 ದಿ:19.11.2016 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು, ಗುಳೂರು ಹೋಬಳಿ, ನಾರಾಯಣ ಸ್ವಾಮಿ ಕೋಟೆ ಇಲ್ಲಿಗೆ 01 ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಂಜೂರು ಮಾಡಲಾಗಿದೆ.
ಆ	ಈ ವಸತಿ ಶಾಲೆಯನ್ನು ಇದುವರೆಗೂ ಪ್ರಾರಂಭ ಮಾಡದಿರಲು ಕಾರಣಗಳೇನು;	ವಸತಿ ಶಾಲೆಯನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಹುದ್ದೆಗಳನ್ನು ಸೃಜಿಸಿರುವುದಿಲ್ಲದ ಕಾರಣ ವಸತಿ ಶಾಲೆಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.
ಇ	ಈ ವಸತಿ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಪ್ರಸ್ತುತ ಆರ್ಥಿಕ ಸಂದಿಗ್ಧ ಪರಿಸ್ಥಿತಿಯ ಹಿನ್ನಲೆಯಲ್ಲಿ ಸದರಿ ವಸತಿ ಶಾಲೆಗಳ ಹುದ್ದೆಗಳ ಸೃಜಿಸಲು ಆರ್ಥಿಕ ಇಲಾಖೆ ಸಹಮತಿ ನೀಡಿರುವುದಿಲ್ಲ. ಸದರಿ ವಸತಿ ಶಾಲೆಗೆ ಹುದ್ದೆಗಳನ್ನು ಸೃಜಿಸಿದ ನಂತರ ನಿಯಮಾನುಸಾರ ವಸತಿ ಶಾಲೆಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಸಕಇ 429 ಎಂಡಿಎಸ್ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 616

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ.ಸುಬ್ಬಾರೆಡ್ಡಿ ಎಸ್. ಎನ್. (ಬಾಗೇಪಲ್ಲಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 14.09.2022.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಗುಡಿಬಂಡೆ ತಾಲ್ಲೂಕಿನಲ್ಲಿ ಕಂಬಳಿ ಹುಳು ಕಾಟದಿಂದ ತೋಟಗಾರಿಕೆ ಬೆಳೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದುವರೆವಿಗೂ ಎಷ್ಟು ಬೆಳೆ ನಷ್ಟವಾಗಿರುತ್ತದೆ;	• ಗುಡಿಬಂಡ ತಾಲ್ಲೂಕಿನಲ್ಲಿ ಕಂಬಳಿ ಹುಳು ಕಾಟದಿಂದ ತೋಟಗಾರಿಕೆ ಬೆಳೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಂದಾಜು 12.42 ಹೆಕ್ಟೇರ್ ಪ್ರದೇಶವಿಸ್ತೀರ್ಣದಲ್ಲಿ ವಿವಿಧ ಹಣ್ಣು, ತರಕಾರಿ, ಹಾಗೂ ಹೂವು ಬೆಳೆಗಳಿಗೆ ಬಿಹಾರ್ ಕಂಬಳಿ ಹುಳದ ಬಾಧೆ ಕಂಡು ಬಂದು ಬೆಳೆನಷ್ಟ ಉಂಟಾಗಿರುತ್ತದೆ.
ಆ)	ಕಂಬಳಿ ಹುಳು ಕಾಟದಿಂದ ಬೆಳೆ ನಷ್ಟವಾಗಿರುವ ರೈತರಿಗೆ ಏನು ಪರಿಹಾರ ನೀಡಲಾಗುವುದು?	• ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಜಿ.ಕೆ.ವಿ.ಕೆ. ಬೆಂಗಳೂರು ಮತ್ತು ಕೆ.ವಿ.ಕೆ.ಚಿಂತಾಮಣಿ ಕೇಂದ್ರಗಳಿಂದ ನುರಿತ ತಜ್ಞರೊಂದಿಗೆ ಕೃಷಿ ಮತ್ತು ತೋಟಗಾರಿಕೆ ಅಧಿಕಾರಿಗಳನ್ನೊಳಗೊಂಡಂತೆ ತಂಡವು ಬಾಧಿತ ತಾಕುಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ಕೀಟ ಹತೋಟಿ ಕ್ರಮಗಳ ಬಗ್ಗೆ ಮೂಡಿಸಲಾಗಿರುತ್ತದೆ. 2. ವಿವಿದ ದೃಶ್ಯ ಮಾಧ್ಯಮ ಹಾಗೂ ಪತ್ರಿಕಾ ಮಾಧ್ಯಮಗಳ ಮೂಲಕ ರೈತರಿಗೆ ಹತೋಟಿ ಕ್ರಮಗಳ ಬಗ್ಗೆ ಪ್ರಚಾರ ಕೈಗಳ್ಳಲಾಗಿದೆ. 3. ತೋಟಗಾರಿಕೆ ಇಲಾಖೆ ವತಿಯಿಂದ ಈ ಸಾಲಿಗೆ ಗುಡಿಬಂಡೆ ತಾಲ್ಲೂಕಿಗೆ ರೂ.1.50 ಲಕ್ಷಗಳ ಅನುದಾನ ನಿಗಧಿಯಾಗಿದ್ದು, ರೂ.1.25 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. Chloropyriphos 50 % +cypermethrine 5% ಕೀಟ ನಾಶಕವನ್ನು ರೈತರಿಗೆ ಶೇ.75ರ ರಿಯಾಯಿತಿಯಲ್ಲಿ ವಿತರಣೆ ಮಾಡಲಾಗುತ್ತಿದೆ.

No.HORTI 415 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 617

ಸದಸ್ಯರ ಹೆಸರು : ಶ್ರೀ ಸುಬ್ಬರೆಡ್ಡಿ ಎಸ್.ಎನ್.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಗುಡಿಬಂಡೆ ತಾಲ್ಲೂಕಿನ ಬಸ್ ಘಟಕ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಗುಡಿಬಂಡೆ ತಾಲ್ಲೂಕಿನಲ್ಲಿ ಬಸ್ ಘಟಕ ಸ್ಥಾಪಿಸುವ ಪ್ರಸ್ತಾವನೆಯು ಪ್ರಸ್ತುತ ಪರಿಶೀಲನೆಯಲ್ಲಿರುವುದಿಲ್ಲ.
ಆ.	ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ; ಯಾವಾಗ ಸ್ಥಾಪನೆ ಮಾಡಲಾಗುವುದು;	ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಹಾಗೂ ಡೀಸೆಲ್ ಬೆಲೆಯ ಹೆಚ್ಚಳದಿಂದಾಗಿ, ಕ.ರಾ.ರ.ಸಾ.ನಿಗಮವು ಆರ್ಥಿಕ ಸಂಕಷ್ಟದಲ್ಲಿದ್ದು, ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ, ಮುಂದಿನ ದಿನದ ಸಾರಿಗೆ ಅವಶ್ಯಕತೆಯನ್ನಾಧರಿಸಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ, ಬಸ್ ಘಟಕ ಸ್ಥಾಪನ ಬಗ್ಗೆ ಪರಿಶೀಲಿಸಲಾಗುವುದು.
ಇ.	ಬಸ್ ಘಟಕ ಸ್ಥಾಪನೆಗೆ ಗುಡಿಬಂಡೆ ತಾಲ್ಲೂಕಿನ ಜನತೆ ಅನೇಕ ಪ್ರತಿಭಟನೆಗಳನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಗುಡಿಬಂಡೆ ತಾಲ್ಲೂಕಿನ ಜನತೆಯ ಸಾರಿಗೆ ಅವಶ್ಯಕತೆಯನ್ನು ಪ್ರಸ್ತುತ ಬಾಗೇಪಲ್ಲಿ, ಗೌರಿಬಿದನೂರು ಮತ್ತು ಚಿಕ್ಕಬಳ್ಳಾಪುರದಲ್ಲಿರುವ ಕ.ರಾ.ರ.ಸಾ.ನಿಗಮದ ಬಸ್ ಘಟಕಗಳಿಂದ ಪೂರೈಸಲಾಗುತ್ತಿದೆ.
ಈ.	ಬಸ್ ಘಟಕಕ್ಕಾಗಿ ಇಲಾಖೆಯ ವಶಕ್ಕೆ ಪಡೆದ ಜಮೀನನ್ನು ಯಾವ ಉದ್ದೇಶಕ್ಕೆ ಬಳಕೆ ಮಾಡಲಾಗಿದೆ? (ವಿವರ ನೀಡುವುದು)	ಬಸ್ ಘಟಕ ಸ್ಥಾಪಿಸಲು ಗುಡಿಬಂಡೆ ತಾಲ್ಲೂಕು ಕಸಬಾ ಹೋಬಳಿ ಪಲ್ಯೆಗಾರನಹಳ್ಳಿ ಗ್ರಾಮದ ಸರ್ವೆ ನಂ.17/ಪಿ1 ರಲ್ಲಿ 08.10 ಎಕರೆ ಹಾಗೂ ಕೊಂಡರೆಡ್ಡಿಹಳ್ಳಿ ಗ್ರಾಮದ ಸರ್ವೆ ನಂ.13ರಲ್ಲಿ 01.30 ಎಕರೆ, ಒಟ್ಟು 10 ಎಕರೆ ವಿಸ್ತೀರ್ಣದ ನಿವೇಶನವನ್ನು ಪಡೆಯಲಾಗಿರುತ್ತದೆ. ಸದರಿ ನಿವೇಶನವನ್ನು ಮುಂದಿನ ದಿನಗಳ ಸಾರಿಗೆ ಅವಶ್ಯಕತೆ ಪೂರೈಸಲು ಘಟಕ ಸ್ಥಾಪಿಸುವ ಉದ್ದೇಶದಿಂದ ಪಡೆಯಲಾಗಿರುತ್ತದೆ. ಪ್ರಸ್ತುತ ಘಟಕದ ನಿವೇಶನಕ್ಕೆ ಮೂರು ಕಡೆಗಳಲ್ಲಿ ಸುತ್ತುಗೋಡೆ ನಿರ್ಮಿಸಲಾಗಿದ್ದು, ಮುಂಭಾಗದಲ್ಲಿ ತಂತಿಬೇಲಿಯನ್ನು ಅಳವಡಿಸಲಾಗಿರುತ್ತದೆ.

ಸಂಖ್ಯೆ: ಟಿಡಿ 189 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 618
ಉತ್ತರಿಸಬೇಕಾದ ದಿನಾಂಕ : 14.09.2022
ಸದಸ್ಯರ ಹೆಸರು : ಡಾ: ಯತೀಂದ್ರ ಸಿದ್ದರಾಮಯ್ಯ (ವರುಣ)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಲ್ಲಿ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಕ್ರೀಡಾ ಸಲಕರಣಗಳಿಗೆ ಎಷ್ಟು ವೆಚ್ಚ ಮಾಡಲಾಗಿದೆ, ಎಷ್ಟು ಜನರಿಗೆ ವಿತರಣೆ ಮಾಡಲಾಗಿದೆ, (ವಿವರ ನೀಡುವುದು)	ಮೈಸೂರು ಜಿಲ್ಲೆಯ ವರುಣಾ ವಿಧಾನಸಭಾ ಕ್ಷೇತ್ರಕ್ಕೆ 2019-20ನೇ ಸಾಲಿನಲ್ಲಿ ರಾಜ್ಯ ವಲಯದ ಯುವ ಚೈತನ್ಯ ಕಾರ್ಯಕ್ರಮದಡಿ 02 ಯುವಕ/ ಯುವತಿ ಮಂಡಳಿಗಳಿಗೆ ತಲಾ ರೂ.28,000-00 ರಂತೆ ರೂ. 56,000-00 ಗಳ ಮೌಲ್ಯದ ಕ್ರೀಡಾ ಸಾಮಗ್ರಿಗಳು, 2020-21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವಲಯದಿಂದ ರೂ.6,44,000-00 ಗಳ ಮೌಲ್ಯದ ಕ್ರೀಡಾ ಸಾಮಗ್ರಿಗಳನ್ನು 18 ಸರ್ಕಾರಿ ಪ್ರೌಢಶಾಲೆ/ಗರಡಿ ಸಂಘ/ಯುವಕ-ಯುವತಿ ಮಂಡಳಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಣೆ ಮಾಡಲಾಗಿರುತ್ತದೆ ಹಾಗೂ 2021-22 ನೇ ಸಾಲಿನಲ್ಲಿ ಸದರಿ ವಿಧಾನ ಸಭಾ ಕ್ಷೇತ್ರಕ್ಕೆ ಯಾವುದೇ ಕ್ರೀಡಾ ಸಾಮಗ್ರಿಗಳನ್ನು ವಿತರಿಸಿರುವುದಿಲ್ಲ.
ಆ.	ಈ ವಿಧಾನಸಭಾ ಕ್ಷೇತ್ರಕ್ಕೆ ಮೂರು ವರ್ಷಗಳಿಂದ ಎಷ್ಟು ಗರಡಿ ಮನೆಗಳನ್ನು ಮಂಜೂರು ಮಾಡಲಾಗಿದೆ? (ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ವರುಣ ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ಗರಡಿ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ.

ವೈಎಸ್‌ಡಿ-ಇಬಿಬಿ/109/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

15

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	619
ಸದಸ್ಯರ ಹೆಸರು	:	ಡಾ॥ ಯತೀಂದ್ರ ಸಿದ್ಧರಾಮಯ್ಯ.
ಉತ್ತರಿಸುವ ದಿನಾಂಕ	:	14.09.2022.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2018-19 ನೇ ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮಗಳ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಜಮೀನಿನಲ್ಲಿ ಕೊಳವೆ ಬಾವಿ ಕೊರೆದಿದ್ದು, ಇದುವರೆಗೂ ಮೋಟಾರ್ ಪಂಪ್ ವಿತರಣೆಯಾಗಲಿ, ವಿದ್ಯುದೀಕರಣವಾಗಲೀ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">2018-19 ನೇ ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಿದ ಮತ್ತು ಪಂಪು ಮೋಟಾರು ಸಲಕರಣೆಗಳನ್ನು ವಿತರಣೆ ಮಾಡಿದ ವಿವರ ಈ ಕೆಳಕಂಡಂತಿದೆ:
<table>
<tr><th rowspan="2">ಕೊರೆದ ಕೊಳವೆಬಾವಿಗಳ ಸಂಖ್ಯೆ</th><th colspan="2">ಪಂಪ್ ಸೆಟ್</th><th colspan="2">ವಿದ್ಯುತ್ ಸಂಪರ್ಕ</th></tr>
<tr><th>ವಿತರಣೆ</th><th>ಬಾಕಿ</th><th>ಒದಗಿಸಿದ ಸಂಖ್ಯೆ</th><th>ಬಾಕಿ</th></tr>
<tr><td>3666</td><td>3214</td><td>452</td><td>2851</td><td>815</td></tr>
</table>

ಸದರಿ ಸಾಲಿನ ಪಂಪ್ ಸೆಟ್ ಸರಬರಾಜು ಕುರಿತು ಈ ಕಛೇರಿಯಿಂದ ಆಹ್ವಾನಿಸಲಾದ ಟೆಂಡರ್‌ಗೆ (02 ನೇ ಕರೆ) 03 ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 147713/2020, 9977/2020 ಮತ್ತು 9819/2020 ನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 147713/2020 ನ್ನು ದಿನಾಂಕ 04.01.2021 ರಲ್ಲಿ ವಜಾಗೊಳಿಸಿರುತ್ತದೆ.

ಇದೇ ರೀತಿ ಈ ಕಛೇರಿಯಿಂದ ಆಹ್ವಾನಿಸಲಾದ ಟೆಂಡರ್‌ಗೆ (03 ನೇ ಕರೆ) 03 ಗುತ್ತಿಗೆದಾರರು ರಿಟ್ ಅರ್ಜಿ ಸಂಖ್ಯೆ 100797/2020, 4993/2021 ಮತ್ತು 100871/2020 ನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 100797/2020 ನ್ನು ದಿನಾಂಕ 26.03.2021 ರಂದು ಮತ್ತು ರಿಟ್ ಅರ್ಜಿ ಸಂಖ್ಯೆ 100871/2020 ನ್ನು ದಿನಾಂಕ 19.04.2021 ರಂದು ವಿಲೇ ಮಾಡಿ ಆದೇಶಿಸಿರುತ್ತದೆ. ಇದರಿಂದ ಪಂಪ್ ಸೆಟ್ ಸರಬರಾಜಿನಲ್ಲಿ ವಿಳಂಬವಾಗಿರುತ್ತದೆ. ಸದರಿ ಸಾಲುಗಳಿಗೆ ಪಂಪ್ ಸೆಟ್ ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ.

ವಿದ್ಯುದ್ದೀಕರಣಕ್ಕೆ ಸಂಬಂಧಿಸಿದಂತೆ ಬಾಕಿ ಉಳಿದಿರುವ 815 ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಎಸ್ಕಾಂಗಳೊಂದಿಗೆ ಸಮನ್ವಯ ಸಾಧಿಸಿ ಎಲ್ಲಾ ಕೊಳವೆಬಾವಿಗಳಿಗೆ ಶೀಘ್ರವಾಗಿ ವಿದ್ಯುತ್ ಸಂಪರ್ಕ ಒದಗಿಸಲು ಕ್ರಮವಹಿಸಲಾದೆ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಸಲಕರಣೆಗಳ ವಿತರಣೆ ವಿಳಂಬವಾಗಲು ಕಾರಣವೇನು; ಮೋಟಾರು ಪಂಪು ವಿತರಣೆ ಮತ್ತು ವಿದ್ಯುದೀಕರಣ ಯಾವಾಗ ಮಾಡಲಾಗುವುದು; (ವಿವರ ನೀಡುವುದು)</td></tr>
</table>

ಇ)	ಈ ನಿಗಮಗಳಿಂದ 2019-20 ರಿಂದ 2021-22 ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯದಿರಲು ಕಾರಣವೇನು; ಇದರಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)	2019-20 ಮತ್ತು 2020-21 ನೇ ಸಾಲಿನ ಕೊಳವೆ ಬಾವಿಗಳನ್ನು ಕೊರೆಯಲು, ಪಂಪ್ ಸೆಟ್ ಸರಬರಾಜು ಮತ್ತು ವಿದ್ಯುದ್ದೀಕರಣ ಕಾರ್ಯಗಳನ್ನು ಒಟ್ಟಿಗೆ ನಿರ್ವಹಿಸಲು (ಟರ್ನ್ ಕೀ) ಅರ್ಹ ಗುತ್ತಿಗೆದಾರರನ್ನು ನಿಗಧಿಪಡಿಸಲು ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆಯಲಾಗಿತ್ತು. ಈ ಕುರಿತು 06 ಜನ ಗುತ್ತಿಗೆದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಇದರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು 03 ಪ್ರಕರಣಗಳನ್ನು ವಜಾ/ವಿಲೇ ಮಾಡಿರುತ್ತದೆ. ತದನಂತರ ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿತ್ತು. ಸದರಿ ಆದೇಶಗಳ ವಿರುದ್ಧ ಕೆಲವು ಗುತ್ತಿಗೆದಾರರು ಸರ್ಕಾರದ ಕಾರ್ಯದರ್ಶಿಗಳಿಗೆ ಮೇಲ್ಮನವಿ ಸಲ್ಲಿಸಿದ್ದರಿಂದ, ಮಾನ್ಯ ಕಾರ್ಯದರ್ಶಿಗಳವರು ವಿಚಾರಣೆ ನಡೆಸಿ ಆದೇಶಿಸಿರುತ್ತಾರೆ. ಈ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13024/2022 ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 05-07-2022 ರಂದು ಆದೇಶ ಹೊರಡಿಸಿ ಯಥಾ ಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿರುತ್ತದೆ. ಇದರಿಂದ ಕೊಳವೆ ಬಾವಿ ಕೊರೆಯುವಿಕೆಯಲ್ಲಿ ವಿಳಂಬವಾಗಿರುತ್ತದೆ. ಇದಲ್ಲದೇ ಕಾಮಗಾರಿಯ ಗುಣಮಟ್ಟದ ತಪಾಸಣೆ ಮಾಡಲು ಮೂರನೇ ವ್ಯಕ್ತಿ ತಪಾಸಣಾ ಸಂಸ್ಥೆ ನೇಮಕ ಕುರಿತ ಸರ್ಕಾರದ ಆದೇಶದ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದರಿಂದ ಕೊಳವೆ ಬಾವಿ ಕೊರೆಯಲು ವಿಳಂಬವಾಗಿರುತ್ತದೆ. ಸರ್ಕಾರದ ಆದೇಶ ದಿನಾಂಕ 16-07-2022 ರಲ್ಲಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಇಲಾಖೆ ಹಾಗೂ ತಾಂತ್ರಿಕ ಕಾಲೇಜುಗಳ ಸೇವೆಯನ್ನು ಪಡೆದು ಕಾಮಗಾರಿ ಮತ್ತು ಸಾಮಗ್ರಿಗಳ ಗುಣಮಟ್ಟ ತಪಾಸಣೆ ಮಾಡಿಸಲು ಆದೇಶಿಸಲಾಗಿರುತ್ತದೆ. ಅದರಂತೆ ಮೂರನೇ ವ್ಯಕ್ತಿ ತಪಾಸಣಾ ಕಾರ್ಯ ಪ್ರಗತಿಯಲ್ಲಿದ್ದು, ಉಳಿದ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮವಹಿಸಲಾಗಿದೆ. 2021-22 ನೇ ಸಾಲಿಗೆ ಸಂಬಂದಿಸಿದಂತೆ ಸರ್ಕಾರದ ಆದೇಶ ದಿನಾಂಕ 14-06-2022 ರಂತೆ ಗಂಗಾ ಕಲ್ಯಾಣ ಯೋಜನೆಯನ್ನು ನೇರ ಸವಲತ್ತು ವರ್ಗಾವಣೆ (ಡಿಬಿಟಿ) ಮೂಲಕ ಅನುಷ್ಠಾನ ಮಾಡಲು ಆದೇಶಿಸಿದ್ದು, ಅದರಂತೆ ಫಲಾನುಭವಿಗೆ ಸಹಾಯಧನ ನೇರವಾಗಿ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. ಕೊಳವೆ ಬಾವಿ ಕೊರೆಯುವ ಮತ್ತು ಪಂಪ್ ಸೆಟ್ ಸರಬರಾಜು ಮಾಡುವ ಗುತ್ತಿಗೆದಾರರಿಗೆ ಫಲಾನುಭವಿಗಳೇ ನೇರವಾಗಿ ಹಣ ಪಾವತಿಸಲು ಸೂಕ್ತ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕೊಳವೆ ಬಾವಿ ಕೊರೆಯುವ ಮತ್ತು ಪಂಪ್ ಸೆಟ್ ಸರಬರಾಜು ಮಾಡುವ ಕುರಿತು ಜಿಲ್ಲಾವಾರು ಗುತ್ತಿಗೆದಾರರನ್ನು ಎಂಪ್ಯಾನೆಲ್ ಮಾಡಲು ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಬಿಡ್ ಪರಿಶೀಲನಾ ಹಂತದಲ್ಲಿದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ 2021-22 ನೇ ಸಾಲಿನ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮವಹಿಸಲಾಗುವುದು.

		ಪ್ರಸ್ತುತ ರಾಜ್ಯದಲ್ಲಿ ಅತೀ ಹೆಚ್ಚಿನ ಮಳೆಯಿಂದಾಗಿ, ಅತೀ ವೃಷ್ಟಿಯಾಗಿದ್ದರಿಂದ ಮತ್ತು ರಾಜ್ಯದ ಬಹುತೇಕ ಭಾಗಗಳ ಜಮೀನಿನಲ್ಲಿ ಬೆಳೆ ಇರುವುದರಿಂದ ಕೊಳವೆ ಬಾವಿ ಕೊರೆಯಲು ಸಾಧ್ಯವಾಗಿರುವುದಿಲ್ಲ. ಮಳೆ ನಿಂತ ನಂತರ ಮತ್ತು ಬೆಳೆ ಕಟಾವುಗೊಂಡ ಮೇಲೆ ಬಾಕಿ ಉಳಿದ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮವಹಿಸಲಾಗುವುದು.

ಸಂಖ್ಯೆ: ಸಕಇ 487 ಎಸ್‌ಡಿಸಿ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	620
ಸದಸ್ಯರ ಹೆಸರು	ಡಾ. ಯತೀಂದ್ರ ಸಿದ್ದರಾಮಯ್ಯ (ವರುಣ)
ಉತ್ತರಿಸುವ ದಿನಾಂಕ	14-09-2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಪ್ರಸಕ್ತ ಸಾಲಿನಲ್ಲಿ ಬಂದ ಅಕಾಲಿಕ ಮಳೆ ಹಾಗೂ ಪ್ರವಾಹದಿಂದ ಹಾನಿಗೊಳಗಾದ ಬೆಳೆಗಳೆಷ್ಟು; ಇಳುವರಿ ವ್ಯತ್ಯಾಸವಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	2022-23 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಅಕಾಲಿಕ ಮಳೆ ಹಾಗೂ ಪ್ರವಾಹದಿಂದ ದಿನಾಂಕ 08.09.2022 ರ ಪ್ರಾಥಮಿಕ ವರದಿಗಳನ್ವಯ 641990.97 ಹೆ. ಪ್ರದೇಶದಲ್ಲಿ ಕೃಷಿ ಬೆಳೆಗಳು ಹಾನಿಯಾಗಿರುತ್ತವೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ಇವರಿಂದ ಇಳುವರಿ ಮಾಹಿತಿಯನ್ನು ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತದೆ. ಜಿಲ್ಲಾವಾರು ಕೃಷಿ ಬೆಳೆಹಾನಿ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.
ಆ)	ಈ ರೀತಿ ಹಾನಿಯಾಗಿ ರೈತರಿಗೆ ಸರ್ಕಾರ ಏನು ಸಹಾಯ ಮಾಡಿದೆ;ಎಷ್ಟುರೈತರಿಗೆ ಪರಿಹಾರ ನೀಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)	ಅಕಾಲಿಕ ಮಳೆ ಹಾಗೂ ಪ್ರವಾಹದಿಂದ ಹಾನಿಯಾಗಿರುವ ಅರ್ಹ ರೈತ ಫಲಾನುಭವಿಗಳಿಗೆ ಇನ್‌ಪುಟ್ ಸಬ್ಸಿಡಿ ಪರಿಹಾರ ನೀಡಲು ಇಲಾಖೆಯ ತಂತ್ರಾಂಶದಲ್ಲಿ ಇಂಡೀಕರಿಸಲಾಗಿದೆ ಹಾಗೂ ಪರಿಹಾರ ಮೊತ್ತವನ್ನು ಸಂಬಂಧಪಟ್ಟ ರೈತರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುವ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ. ಜಿಲ್ಲಾವಾರು ವಿವರ **ಅನುಬಂಧ-2**ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: AGRI-ACT/193/ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1

2022-23 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಅಕಾಲಿಕ ಮಳೆ ಹಾಗೂ ಪ್ರವಾಹದಿಂದ ಉಂಟಾದ ಕೃಷಿ ಬೆಳೆಗಳ ಜಿಲ್ಲಾವಾರು ಹಾನಿಯ ವಿವರ

(ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)

ಕ್ರ.ಸಂ	ಜಿಲ್ಲೆ	ವಿಸ್ತೀರ್ಣ(ದಿನಾಂಕ 08.09.2022 ರವರೆಗೆ)
1	ಬಾಗಲಕೋಟೆ	24389
2	ಬಳ್ಳಾರಿ	89.67
3	ಬೆಳಗಾವಿ	27340.66
4	ಬೆಂಗಳೂರು ಗ್ರಾಮಾಂತರ	66.32
5	ಬೆಂಗಳೂರು ನಗರ	91.12
6	ಬೀದರ್	43426
7	ಚಾಮರಾಜನಗರ	83.04
8	ಚಿಕ್ಕಬಳ್ಳಾಪುರ	46.63
9	ಚಿಕ್ಕಮಗಳೂರು	940.97
10	ಚಿತ್ರದುರ್ಗ	50136.27
11	ದಕ್ಷಿಣ ಕನ್ನಡ	229.55
12	ದಾವಣಗೆರೆ	15934.57
13	ಧಾರವಾಡ	115122
14	ಗದಗ	102074
15	ಹಾಸನ	4290.31
16	ಹಾವೇರಿ	88530.85
17	ಕಲಬುರಗಿ	111435
18	ಕೊಡಗು	86.91
19	ಕೋಲಾರ	128.91
20	ಕೊಪ್ಪಳ	234.56
21	ಮಂಡ್ಯ	295.8
22	ಮೈಸೂರು	304.38
23	ರಾಯಚೂರು	1753.34
24	ರಾಮನಗರ	362
25	ಶಿವಮೊಗ್ಗ	4621.2
26	ತುಮಕುರು	2439.63
27	ಉಡುಪಿ	1239.72
28	ಉತ್ತರಕನ್ನಡ	321.52
29	ವಿಜಯನಗರ	2153.34
30	ವಿಜಯಪುರ	5046.38
31	ಯಾದಗಿರಿ	38777.32
	ಒಟ್ಟು	**641990.97**

ಅನುಬಂಧ-2

Parihara first phase payment details						
Sl.No.	District	No of farmers paid	Crop Loss Area Considered| Perennial (In guntas)	Crop Loss Area Considered | Irrigated (In guntas)	Crop Loss Area Considered | Rainfed (In guntas)	Amount paid in lakhs
1	Kalaburagi	33487	0	84074	2109709	3079.39
2	Gadag	11716	0	32438	1074268	1542.10
3	Belagavi	11234	0	97046	1072392	1701.07
4	Davanagere	11177	200	38896	668400	1006.83
5	Hassan	8086	215932	103190	200995	1136.00
6	Haveri	5752	8	37579	408010	648.86
7	Chitradurga	4161	503	4326	309420	433.03
8	Mandya	2496	931	40467	41719	160.88
9	Shivamogga	2391	45	23821	95079	188.99
10	Dharwad	2049	0	2018	283962	391.23
11	Bidar	1762	0	20084	91683	174.90
12	Vijayapura	1610	126	4120	180359	255.94
13	Tumakuru	1315	284	39158	33577	144.36
14	Udupi	1225	273	3672	37266	60.68
15	Ramanagara	837	2193	12039	15300	57.32
16	Yadgir	789	0	86026	8673	226.86
17	Bagalkot	773	0	18100	49300	112.30
18	Chikkaballapur	612	348	27439	13517	87.96
19	Raichur	438	160	4094	18564	35.94
20	Uttara Kannada	365	810	1470	14056	25.08
21	Mysuru	353	0	6641	6063	24.85
22	Chamarajanagara	346	0	16455	1238	42.83
23	Chikkamagaluru	247	981	2195	10226	22.14
24	Kolar	197	0	8591	806	22.58
25	Vijayanagara	176	0	1614	7621	14.40
26	Ballari	111	0	6117	289	15.69
27	Koppal	106	0	2508	2736	9.99
28	Bengaluru Rural	81	0	3629	706	10.03
29	Dakshina Kannada	53	650	9	227	2.21
30	Kodagu	50	310	36	2096	3.81
31	Bengaluru Urban	11	0	0	619	0.84
		104006	**223754**	**727852**	**6758876**	**11639**

DFA/ 3865

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 621
ಸದಸ್ಯರ ಹೆಸರು : ಡಾ|| ಯತೀಂದ್ರ ಸಿದ್ದರಾಮಯ್ಯ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೈಸೂರು, ನಂಜನಗೂಡು ಮತ್ತು ಟಿ.ನರಸೀಪುರ ತಾಲ್ಲೂಕು ವ್ಯಾಪ್ತಿಯ ಗ್ರಾಮಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ನಿರ್ವಹಿಸುತ್ತಿರುವ ಬಸ್‌ಗಳು ಶಾಲೆಗಳ ಸಮಯಕ್ಕೆ ಸರಿಯಾಗಿ ಸಂಚರಿಸದೆ ಗ್ರಾಮಸ್ಥರಿಗೆ ಮತ್ತು ವಿದ್ಯಾರ್ಥಿಗಳಿಗೆ ತೊಂದೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವರುಣಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ 147 ಗ್ರಾಮಗಳಿಗೆ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ 1449 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಿ ಪ್ರತಿದಿನ ನಿಯಮಿತವಾಗಿ, ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಒದಗಿಸಿರುವ ಸಾರಿಗೆ ಸೌಲಭವು ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿರುತ್ತದೆ
ಆ.	ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು)	
ಇ.	ಈ ಸಮಸ್ಯೆಯನ್ನು ಬಗೆಹರಿಸಲು ಸಂಬಂಧಪಟ್ಟವರಿಗೆ ಹಲವು ಬಾರಿ ನಿರ್ದೇಶನ ನೀಡಿದ್ದರೂ ಸಹ ಯಾವುದೇ ಕ್ರಮ ವಹಿಸದಿರುವ ಬಗ್ಗೆ ಹಾಗೂ ಈ ಬಸ್ ತೊಂದರೆಯನ್ನು ಯಾವಾಗ ನಿವಾರಿಸಲಾಗುವುದು? (ವಿವರ ನೀಡುವುದು)	ಕೋವಿಡ್ ಸೋಂಕು ಹರಡುವಿಕೆಯಿಂದ ರಾಷ್ಟ್ರವ್ಯಾಪ್ತಿ ಲಾಕ್‌ಡೌನ್ ಘೋಷಿಸಿದ್ದ ಹಿನ್ನೆಲೆಯಲ್ಲಿ, ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ಸಡಿಲಗೊಂಡ ನಂತರ ಪ್ರಯಾಣಿಕರ ಲಭ್ಯತೆ/ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಚರಣೆಯನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಸಂಖ್ಯೆ: ಟಿಡಿ 191 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :	622
ಸದಸ್ಯರ ಹೆಸರು :	ಡಾ|| ಶ್ರೀ ಭರತ್ ಶೆಟ್ಟಿ ವೈ (ಮಂಗಳೂರು ನಗರ ಉತ್ತರ)
ಉತ್ತರಿಸಬೇಕಾದ ದಿನಾಂಕ :	14.09.2022
ಉತ್ತರಿಸುವ ಸಚಿವರು :	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ದೇವರಾಜ ಅರಸು ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯುವಿಕೆ ಮತ್ತು ಪಂಪು ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಕಳೆದ ಎರಡು ವರ್ಷಗಳಿಂದ ಕೊಳವೆ ಬಾವಿ ಮತ್ತು ಪಂಪುಗಳನ್ನು ನೀಡದೇ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಹೌದು ಕಳೆದ ಎರಡು ವರ್ಷಗಳಲ್ಲಿ ನಿಗಮದಿಂದ ನಿಗದಿಪಡಿಸಿದ ಗುರಿ ಈ ಕೆಳಗಿನಂತಿದೆ. ಕ್ರ.ಸಂ. / ವರ್ಷ / ಗುರಿ 1 / 2020-21 / 0 2 / 2021-22 / 3017 ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕೆ ಈ ಹಿಂದೆ ಇದ್ದ ವಿಧಾನವನ್ನು ಪರಿಷ್ಕರಿಸಿ ಫಲಾನುಭವಿಗಳ ವಿವೇಚನೆಗೆ ನೀಡಿ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 373 ಬಿಎಂಎಸ್ 2021 ದಿನಾಂಕ:05.07.2022 ಹೊರಡಿಸಲಾಗಿರುತ್ತದೆ. ಇದರಂತೆ ಕೊಳವೆ ಬಾವಿ ಕೊರೆಯುವ ಹಾಗೂ ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡುವ ಏಜೆನ್ಸಿಗಳನ್ನು ಫಲಾನುಭವಿಗಳೇ ಆಯ್ಕೆ ಮಾಡಿಕೊಳ್ಳಲು ಅವಕಾಶವಾಗುವಂತೆ ವಿಧಾನ ಅಳವಡಿಸಿ ಆಸಕ್ತ ಏಜೆನ್ಸಿಗಳಿಂದ ದರಪಟ್ಟಿ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಕಾರಣದ ಹಿನ್ನಲೆಯಲ್ಲಿ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.
ಇ)	ರಾಜ್ಯ ಮಟ್ಟದಲ್ಲಿ ಪಂಪು ವಿತರಣೆ ಬಗ್ಗೆ ಟೆಂಡರ್ ಆಗದೇ ವಿತರಣೆಯಲ್ಲಿ ಬಹಳಷ್ಟು ವಿಳಂಬ ಆಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಸ್ವತಃ ಫಲಾನುಭವಿಗಳೇ ಆಯ್ಕೆ ಮಾಡಿಕೊಳ್ಳುವ ಏಜೆನ್ಸಿ ಮೂಲಕ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಪಡೆದುಕೊಳ್ಳಲು ಪ್ರಸ್ತುತ ಅಳವಡಿಸಿಕೊಂಡಿರುವ ವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಇದರಿಂದಾಗಿ ಸಾಮಗ್ರಿಗಳ ವಿತರಣೆಯಲ್ಲಿ ವಿಳಂಬವಾಗಲು ಅವಕಾಶವಿರುವುದಿಲ್ಲ.

ಸಂಖ್ಯೆ:ಹಿಂವಕ 522 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 623

ಸದಸ್ಯರ ಹೆಸರು : ಶ್ರೀ ಮಂಜುನಾಥ ಆರ್.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕೋವಿಡ್-19 ನಿಂದ ಮರಣ ಹೊಂದಿದ ನೌಕರರಿಗೆ ನಿಗದಿಪಡಿಸಿರುವ ವಿಮಾ ಪರಿಹಾರ ಮೊತ್ತವನ್ನು ಎಲ್ಲಾ ಅರ್ಜಿದಾರರಿಗೆ ಸರ್ಕಾರದ ಆದೇಶದನ್ವಯ ನೀಡಲಾಗಿದೆಯೇ;	ಬೆಳಗಾವಿ ಜಿಲ್ಲೆಯ ರಾಮದುರ್ಗ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಓರ್ವ ನೌಕರರು ಕೋವಿಡ್-19ರಿಂದ ಮೃತರಾಗಿದ್ದು, ಸದರಿಯವರ ಅವಲಂಬಿತರಿಗೆ ಸರ್ಕಾರದ ಮಾರ್ಗಸೂಚಿಗಳನ್ವಯ ರೂ.30.00 ಲಕ್ಷಗಳ ಪರಿಹಾರಧನವನ್ನು ನೀಡಲಾಗಿರುತ್ತದೆ. ಉಳಿದಂತೆ, ಸಾರಿಗೆ ಇಲಾಖೆಯಡಿ ಬರುವ ಸಾರಿಗೆ ಸಂಸ್ಥೆಗಳ ನೌಕರರನ್ನು ಕೋವಿಡ್-19ರ ಪರಿಹಾರ ಒದಗಿಸುವ ಕುರಿತಾದ ಸರ್ಕಾರದ ಆದೇಶದಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ.
ಆ.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಒಟ್ಟು ನೌಕರರಲ್ಲಿ ಮೊದಲನೇ ಅಲೆಯಲ್ಲಿ 39 ಮಂದಿ ಮತ್ತು ಎರಡನೇ ಅಲೆಯಲ್ಲಿ 71 ಮಂದಿ ಕೋವಿಡ್-19 ನಿಂದ ಮರಣ ಹೊಂದಿದ್ದು, ಈವರೆಗೆ ಕೇವಲ 4 ಕುಟುಂಬದವರಿಗೆ ಮಾತ್ರ ತಲಾ 30 ಲಕ್ಷ ಪರಿಹಾರ ನೀಡಿರುವುದು ನಿಜವೇ;	ಹೌದು. ಕೋವಿಡ್-19 ಸೋಂಕು ತಗುಲಿ, ರೋಗದ ಲಕ್ಷಣಗಳು ಕಾಣಿಸಿಕೊಳ್ಳುವ ಪೂರ್ವದ 14 ದಿವಸಗಳ ಅವಧಿಯಲ್ಲಿ ಕನಿಷ್ಠ 10 ದಿವಸಗಳು ಮತ್ತು ಅದಕ್ಕೂ ಹೆಚ್ಚಿನ ದಿವಸಗಳ ಕರ್ತವ್ಯ ನಿರ್ವಹಿಸಿದ ನಾಲ್ಕು (04) ಮಂದಿ ನೌಕರರ ಕುಟುಂಬದವರಿಗೆ ದಿನಾಂಕ:03.04.2021 ರಂದು ತಲಾ ರೂ.30.00 ಲಕ್ಷ ಪರಿಹಾರದ ಚೆಕ್‌ಗಳನ್ನು ವಿತರಿಸಲಾಗಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಹಾಗೂ ಡೀಸೆಲ್ ದರದ ಹೆಚ್ಚಳದ ಕಾರಣದಿಂದಾಗಿ, ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಗಣನೀಯವಾಗಿ ಕುಂಠಿತವಾಗಿದ್ದು, ಈ ಪರಿಸ್ಥಿತಿಯಲ್ಲಿ, ಪರಿಹಾರ ಮೊತ್ತ ವಿತರಿಸುವುದು ಕಷ್ಟಸಾಧ್ಯವಾಗಿರುತ್ತದೆ.
ಇ.	ಕೋವಿಡ್-19ಗೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುವ	ಕೋವಿಡ್-19ರ ಹಿನ್ನೆಲೆಯಲ್ಲಿ ಹಾಗೂ ಡೀಸೆಲ್ ದರದ ಹೆಚ್ಚಳ ಕಾರಣದಿಂದಾಗಿ,

ನೌಕರರ ಕುಟುಂಬದವರಿಗೆ ತಾರತಮ್ಯ ನೀತಿ ಅನುಸರಿಸದೆ ಕೋವಿಡ್-19 ನಿಂದ ಮರಣ ಹೊಂದಿದ ಎಲ್ಲಾ ನೌಕರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಪರಿಹಾರ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ನಾಲ್ಕೂ ಸಾರಿಗೆ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯು ಗಣನೀಯವಾಗಿ ಕುಂಠಿತವಾಗಿದ್ದು, ಈ ಪರಿಸ್ಥಿತಿಯಲ್ಲಿ, ಕೋವಿಡ್-19ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮೃತಪಟ್ಟ ನೌಕರರ ಅವಲಂಬಿತರಿಗೆ ಪರಿಹಾರ ಮೊತ್ತ ವಿತರಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದಾಗ್ಯೂ, ದಿವಂಗತ ನೌಕರರ ಕುಟುಂಬದವರಿಗೆ ನೀಡುವ ಭವಿಷ್ಯನಿಧಿ, ಉಪಧನ, ಮರಣ-ವ-ನಿವೃತ್ತನಿಧಿ, ಇಲಾಖಾ ಗುಂಪು ವಿಮಾ ಪರಿಹಾರ, ಅರ್ಹರಿದ್ದಲ್ಲಿ ಗಳಿಕೆ ರಜೆ ನಗದೀಕರಣ, ಇಡಿಎಲ್ಐ ಪರಿಹಾರ, ಪಿಂಚಣಿ ಒಳಗೊಂಡಂತೆ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಸಂಸ್ಥೆಗಳ ವತಿಯಿಂದ ಆರ್ಥಿಕ ಪರಿಸ್ಥಿತಿಯನ್ನಾಧರಿಸಿ, ಕಾಲಕಾಲಕ್ಕೆ ಪಾವತಿಸಲಾಗಿದೆ.

ಸಂಖ್ಯೆ: ಟಿಡಿ 192 ಟಿಸಿಕ್ಯೂ 2022

(ಬಿ. ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 624

ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ.

ಉತ್ತರಿಸುವ ಸಚಿವರು :ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 14.09.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಶೃಂಗೇರಿಗೆ ಮಂಜೂರಾಗಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಕಾಮಗಾರಿ ಇನ್ನೂ ಪ್ರಾರಂಭಗೊಳ್ಳದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ವಿವರ ನೀಡುವುದು)	ಹೌದು, ಬಂದಿದೆ. ಶೃಂಗೇರಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಘಟಕವನ್ನು ರೂ.800.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
ಆ.	ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣವೇನು; (ವಿವರ ನೀಡುವುದು)	ಕೋವಿಡ್-19ರ ಸಾಂಕ್ರಾಮಿಕ ರೋಗದಿಂದಾಗಿ ನಿಗಮದ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಕಳೆದ ಎರಡು ವರ್ಷದಿಂದ ನಿಗಮವು ಯಾವುದೇ ಹೊಸ ಬಸ್ ನಿಲ್ದಾಣ/ ಘಟಕ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.
ಇ.	ಡಿಪೋ ನಿರ್ಮಾಣಕ್ಕೆ ಅಗತ್ಯವಿರುವ ಅಂದಾಜು ಮೊತ್ತವೆಷ್ಟು; ಸರ್ಕಾರದಿಂದ ಮಂಜೂರಾಗಿರುವ ಅನುದಾನವೆಷ್ಟು; (ವಿವರ ನೀಡುವುದು)	ಬಸ್ ಘಟಕ ನಿರ್ಮಿಸಲು ರೂ.800.00 ಲಕ್ಷಗಳು ಮಂಜೂರಾಗಿದ್ದು, ರೂ.153.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.
ಈ.	ಯಾವ ಕಾಲಮಿತಿಯೊಳಗೆ ಬಸ್ ಡಿಪೋವನ್ನು ಲೋಕಾರ್ಪಣೆಗೊಳಿಸಲಾಗುವುದು?	ಬಸ್ ಘಟಕವನ್ನು ನಿಗದಿಪಡಿಸಿದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು, ಟೆಂಡರ್‌ನಲ್ಲಿ ನಮೂದಿಸಲಾಗುವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 193 ಟಿಸಿಕ್ಯೂ 2022

(ಬಿ. ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 625

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ.ರಾಜೇಗೌಡ ಟಿ.ಡಿ. (ಶೃಂಗೇರಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 14.09.2022.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಡಿಕೆಗೆ ತಗುಲಿರುವ ಹಳದಿ ಎಲೆ ರೋಗದಿಂದ ರೈತರು ತತ್ತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	• ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ರೋಗ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಶಾಶ್ವತ ಪರಿಹಾರ ಕ್ರಮಗಳೇನು; (ವಿವರ ನೀಡುವುದು)	• ಈ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಅಡಿಕೆ ಹಳದಿ ಎಲೆ ರೋಗಕ್ಕೆ ನಿಖರವಾದ ಕಾರಣ ಹಾಗೂ ಪರಿಣಾಮಕಾರಿ ಹತೋಟಿ ಕ್ರಮಗಳ ಮೇಲೆ ಆಳವಾದ ಸಂಶೋಧನೆ ಕೈಗೊಳ್ಳಲು ಶೃಂಗೇರಿಯಲ್ಲಿ ತೋಟಗಾರಿಕೆ ಸಂಶೋಧನಾ ಕೇಂದ್ರ ಸ್ಥಾಪಿಸಲಾಗಿದೆ. 2. ಸರ್ಕಾರದಿಂದ ಅಡಿಕೆ ಬದಲಿಗೆ ಪರ್ಯಾಯ ಬೆಳೆ ಬೆಳೆಯಲು ಉತ್ತೇಜಿಸಲಾಗುತ್ತಿದೆ. ಅಡಿಕೆ ಬದಲಿಗೆ ಮಲೆನಾಡು ಭಾಗಗಳಲ್ಲಿ ಬೆಳೆಯಬಹುದಾದ ತಾಳೆಬೆಳೆ, ಕಾಳುಮೆಣಸು, ಕೋಕೋ, ಬಾಳೆ, ಜಾಯಿಕಾಯಿ, ಲವಂಗ, ಬೆಣ್ಣೆ ಹಣ್ಣು, ರಾಂಬುಟಾನ್ ಮುಂತಾದ ಪರ್ಯಾಯ ಬೆಳೆ ಬೆಳೆಯಲು ಉತ್ತೇಜಿಸಿ ಸಹಾಯಧನ ನೀಡಲಾಗುತ್ತಿದೆ. 3. 2011-12 ರಿಂದ 2013-14 ಸಾಲಿನವರೆಗೂ ರೂ.443.39 ಲಕ್ಷಗಳ
ಇ)	ಅಡಿಕೆಯನ್ನೇ ನಂಬಿ ಬದುಕು ಸಾಗಿಸುತ್ತಿರುವ ಬಡ ರೈತರಿಗೆ ಇದುವರೆವಿಗೂ ಸರ್ಕಾರ ಯಾವ ರೀತಿಯ ನೆರವನ್ನು ನೀಡಿದೆ; ಎಷ್ಟು ಜನರಿಗೆ ಪರಿಹಾರವನ್ನು ನೀಡಲಾಗಿದೆ; (ಕೊಪ್ಪ, ಎನ್.ಆರ್. ಪುರ ಮತ್ತು ಶೃಂಗೇರಿ ತಾಲ್ಲೂಕುಗಳ ಫಲಾನುಭವಿಗಳ ಸಂಪೂರ್ಣ ವಿವರ ನೀಡುವುದು).	

		ರೂ.202.33 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದೆ. • ಒಟ್ಟು 418 ರೈತರಿಗೆ ನೆರವು ನೀಡಿದ್ದು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಈ)	ಯಾವ ಕಾಲಮಿತಿಯೊಳಗೆ ಶಾಶ್ವತ ಪರಿಹಾರ ಕ್ರಮಗಳನ್ನು ಕಲ್ಪಿಸಲಾಗುತ್ತದೆ?	• ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ ಶಿವಮೊಗ್ಗ ಇವರ ನೇತೃತ್ವದಲ್ಲಿ ಕೃಷಿ ಮತ್ತು ಅಡಿಕೆ ಸಂಶೋಧನಾ ಆಧರಿಸಿ ಕ್ರಮ ಕೈಗೊಳ್ಳಲಾಗುವುದು.

No.HORTI 416 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ : 626
ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ : 14-09-2022
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
ಅ) ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಅಡಿಕೆ, ಕಾಫಿ, ಕಾಳು ಮೆಣಸು ಮುಂತಾದ ತೋಟಗಾರಿಕಾ ಬೆಳೆಗಳು ಭಾಗಶಃ ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; (ವಿವರ ನೀಡುವುದು)	ಬಂದಿದೆ.
ಆ) ಹಾಗಿದ್ದಲ್ಲಿ, ಇದುವರೆವಿಗೂ ಹಾನಿಯಾಗಿರುವ ಪ್ರಮಾಣವೆಷ್ಟು; (ವಿವರ ನೀಡುವುದು)	ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ದಿನಾಂಕ:01.06.2022 ರಿಂದ 13.09.2022ರವರೆಗೆ ತೋಟಗಾರಿಕೆ ಮತ್ತು ಕಾಫಿ ಇಲಾಖೆಯವರು ನೀಡಿರುವ ವರದಿಯಂತೆ ಈ ಕೆಳಗಿನಂತೆ ಶೇ 33 ಮತ್ತು ಶೇ 33 ಕ್ಕಿಂತ ಅಧಿಕ ಪ್ರಮಾಣದಲ್ಲಿ ಬೆಳೆ ಹಾನಿಯಾಗಿರುತ್ತದೆ.

ಕ್ರ. ಸಂ	ತಾಲ್ಲೂಕು	ಕಾಫಿ	ಮೆಣಸು	ಅಡಿಕೆ	ಇತರ ತೋಟ ಗಾರಿಕೆ ಬೆಳೆ	ಒಟ್ಟು ಹಾನಿಯ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)
1	ಶೃಂಗೇರಿ	2.00	312.00	1615.00	0.0	1929.00
2	ಕೊಪ್ಪ	4.00	500.00	2860.00	0.00	3364.00
3	ನರಸಿಂಹ ರಾಜಪುರ	0.00	250.00	1150.00	0.00	1400.00
4	ಚಿಕ್ಕಮಗ ಳೂರು	4.00	7124.59	70.76	4623.00	11822.35
	ಒಟ್ಟು	**10.00**	**8186.59**	**5695.76**	**4623.00**	**18515.35**

ಪ್ರಶ್ನೆ	ಉತ್ತರ
ಇ)ಸರ್ಕಾರ ಇದುವರೆವಿಗೂ ಮಂಜೂರು ಮಾಡಿರುವ ಪರಿಹಾರ ಹಣವೆಷ್ಟು; (ವಿವರ ನೀಡುವುದು)	ಅತೀವೃಷ್ಟಿಯಿಂದ ಹಾನಿಯಾದ ಬೆಳೆಹಾನಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದ ಸಂಖ್ಯೆ ಕಂಇ 276 ಟಿಎನ್ಆರ್ 2022 ಬೆಂಗಳೂರು ದಿನಾಂಕ:14.07.2022 ರಂತೆ ಈ ಕೆಳಗಿನಂತೆ ಪರಿಹಾರವನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

ಬೆಳೆ ವಿಧ	**ದರ (ಹೆಕ್ಟೇರಿಗೆ)**	**ಹೆಚ್ಚುವರಿ ದರ (ಪ್ರತಿ ಹೆಕ್ಟೇರ್‌ಗೆ)**	**ಪರಿಷ್ಕೃತ ದರ (ಪ್ರತಿ ಹೆಕ್ಟೇರಿಗೆ)**
ಮಳೆಯಾಶ್ರಿತ	ರೂ.6800/-	ರೂ.6800/-	ರೂ.13600/-
ನೀರಾವರಿ	ರೂ.13500/-	ರೂ.11500/-	ರೂ.25000/-
ಬಹುವಾರ್ಷಿಕ	ರೂ.18000/-	ರೂ.10000/-	ರೂ.28000/-

<table>
<tr><td></td><td>ಹಾನಿಯಾದ ವಿವರವನ್ನು ಪರಿಹಾರ ತಂತ್ರಾಂಶದಲ್ಲಿ ದಿನಾಂಕ:13.09.2022ರವರೆಗೆ ಈ ಕೆಳಗಿನಂತೆ ಡಾಟಾ ಎಂಟ್ರಿ ಮಾಡಲಾಗಿದೆ.
<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ಸ.ನಂ.ಗಳ ಸಂಖ್ಯೆ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th><th>ಜಿಲ್ಲೆಗೆ ಈವರೆವಿಗೂ ಬಿಡುಗಡೆ ಯಾಗಿರುವ ಪರಿಹಾರ</th></tr>
<tr><td>1</td><td>ಶೃಂಗೇರಿ</td><td>30</td><td>7.00</td><td rowspan="5">ರೂ.22.14 ಲಕ್ಷ</td></tr>
<tr><td>2</td><td>ಕೊಪ್ಪ</td><td>59</td><td>16.00</td></tr>
<tr><td>3</td><td>ನರಸಿಂಹರಾಜಪುರ</td><td>83</td><td>20.00</td></tr>
<tr><td>4</td><td>ಚಿಕ್ಕಮಗಳೂರು</td><td>6135</td><td>1983</td></tr>
<tr><td></td><td>ಒಟ್ಟು</td><td>6307</td><td>2026.00</td></tr>
</table>
</td></tr>
<tr><td>ಈ) ಯಾವ ಕಾಲಮಿತಿಯೊಳಗಾಗಿ ಬೆಳೆ ಹಾನಿ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಲಾಗುತ್ತದೆ?</td><td>ಜಿಲ್ಲಾಡಳಿತ ವತಿಯಿಂದ ಪರಿಹಾರ ತಂತ್ರಾಂಶದಲ್ಲಿ ರೈತರ ಹಾಗೂ ಬೆಳೆಹಾನಿಯ ಮಾಹಿತಿಯುಳ್ಳ ಡಾಟಾವನ್ನು ನಮೂದಿಸಿದ ನಂತರ ಸರ್ಕಾರದಿಂದ DBT ಮೂಲಕ ಇನ್ ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದೆ.</td></tr>
</table>

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಿಂದ ವರ್ಗಾಯಿಸಲಾಗಿದೆ

ಕಂಇ 388 *ಟಿಎನ್ಆರ್*2022

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 627

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ.ರಾಜೇಗೌಡ ಟಿ.ಡಿ. (ಶೃಂಗೇರಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 14.09.2022.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಶೃಂಗೇರಿಯಲ್ಲಿ ಸ್ಥಾಪನೆಯಾಗಿರುವ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರವು ಅಡಿಕೆಗೆ ತಗುಲಿರುವ ಎಲೆ ಚುಕ್ಕಿ ರೋಗ ಮತ್ತು ಹಳದಿ ರೋಗ ನಿವಾರಣೆಗೆ ಯಾವ ಯಾವ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಎಂದರೆ 2019-20 ರಿಂದ 2022-23 ರವರೆಗೆ ಶೃಂಗೇರಿಯಲ್ಲಿ ಸ್ಥಾಪನೆಯಾಗಿರುವ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಅಡಿಕೆಗೆ ತಗಲಿರುವ ರೋಗಗಳ ನಿವಾರಣೆಗೆ ಕೆಳಕಾಣಿಸಿದ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ. 1. ರೈತರ ತಾಕುಗಳಲ್ಲಿ ಹಳದಿ ಎಲೆ ರೋಗ ಪೀಡಿತ ತೋಟಗಳಲ್ಲಿ ಪೋಷಕಾಂಶಗಳ ಮುಖಾಂತರ ನಿರ್ವಹಣೆ. 2. ಅಡಿಕೆ ಹಳದಿ ಎಲೆ ರೋಗ ನಿರ್ವಹಣೆಯಲ್ಲಿ ಶಿಲೀಂಧ್ರ ನಾಶಕ ಹಾಗೂ ಪ್ಲಾಸ್ಟಿಕ್ ಹೊದಿಕೆಯ ಬಳಕೆ. 3. ಅಡಿಕೆಯಲ್ಲಿ ಜೈವಿಕ ತಂತ್ರಜ್ಞಾನದ (Biotechnology) ನೆರವಿನಿಂದ ಹಳದಿಎಲೆ ರೋಗ ನಿರೋಧಕ ತಳಿಗಳ ಅಭಿವೃದ್ಧಿ. 4. ಕರ್ನಾಟಕದ ಮಲೆನಾಡು ಮತ್ತು ಮೈದಾನ್ ಪ್ರದೇಶಗಳಿಗೆ ಹೆಚ್ಚು ಇಳುವರಿಯ ಕುಬ್ಜ (Dwarf) ಮತ್ತು ಮಧ್ಯಮ ಎತ್ತರದ (Semi Tall) ಅಡಿಕೆ ತಳಿಗಳ ಅಭಿವೃದಿ. 5. ಅಡಿಕೆಯಲ್ಲಿ ಅಂಗಾಂಶ ಕೃಷಿ ಅಧ್ಯಯನ ಮತ್ತು ಸಸಿಗಳ ಉತ್ಪಾದನೆ.
ಆ)	ಈ ಕೇಂದ್ರಕ್ಕೆ ಕಳೆದ ಮೂರು ವರ್ಷಗಳಿಂದ ಸರ್ಕಾರ ಮಂಜೂರು ಮಾಡಿರುವ ಅನುದಾನವೆಷ್ಟು; ಬಿಡುಗಡೆಗೊಂಡಿರುವ ಹಾಗೂ ಖರ್ಚಾಗಿರುವ ಮತ್ತು ಖರ್ಚಾಗದೇ ಉಳಿದಿರುವ ಅನುದಾನವೆಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು).	ಈ ಕೇಂದ್ರಕ್ಕೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಗೊಂಡಿರುವ, ಖರ್ಚಾಗಿರುವ ಹಾಗೂ ಖರ್ಚಾಗದೆ ಉಳಿದಿರುವ ಅನುದಾನದ ವಿವರ ಈ ಕೆಳಗಿನಂತಿದೆ.

ವರ್ಷ	ವಿ.ವಿ. ಯಿಂದ ಬಿಡುಗಡೆ ಆದ ಅನುದಾನ	ಖರ್ಚಾಗಿರುವ ಅನುದಾನ	ಉಳಿದಿರುವ ಅನುದಾನ
2019-20	9,00,000-00	4,28,250-00	4,71,750-00
2020-21	6,00,000-00	5,08,968-00	91,032-00
2021-22	2,00,000-00	1,95,660-00	4,440-00

<table>
<tr>
<td>ಇ)</td>
<td>ಈ ಸಂಶೋಧನಾ ಕೇಂದ್ರ ದಿಂದ ಇದುವರೆವಿಗೂ ಒಟ್ಟು ಎಷ್ಟು ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ ಹಾಗೂ ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)</td>
<td>ಈ ಸಂಶೋಧನಾ ಕೇಂದ್ರದಲ್ಲಿ ಈವರೆವಿಗೂ ಒಟ್ಟು 14 ಸಂಶೋಧನೆಗಳನ್ನು ಕೈಗೊಳ್ಳಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಅಡಿಕೆ ತಳಿಗಳ ಅಧ್ಯಯನ,
2) ಪೋಷಕಾಂಶಗಳ ನಿರ್ವಹಣೆ,
3) ಅಡಿಕೆಯಲ್ಲಿ ಅಂಗಾಂಶ ಕೃಷಿ ತಂತ್ರಜ್ಞಾನ ಅಭಿವೃದ್ಧಿ
4) ಗಿಡ್ಡ ತಳಿ ಅಭಿವೃದ್ಧಿ,
5) ತಳಿಗಳ ವೈವಿಧ್ಯತೆ ಅಧ್ಯಯನ,
6) ಹಳದಿ ಎಲೆ ರೋಗ ನಿರೋಧಕ ತಳಿಗಳ ಅಭಿವೃದ್ಧಿ
7) ಹಳದಿ ಎಲೆ ರೋಗ,
8) ತಳಿಗಳ ವಿಶ್ಲೇಶಣೆ,
9) ದಪ್ಪ ಏಲಕ್ಕಿ ತಳಿಯ ಕೃಷಿ,
10) ಕ್ಷೇತ್ರ ಪ್ರಯೋಗ,
11) ವಿವಿಧ ತಳಿಗಳ ಸಂರಕ್ಷಣೆ,
12) ಹಳದಿ ಎಲೆ ರೋಗ ನಿರ್ವಹಣೆ,
13) ಬೆಳೆ ವೈವಿಧ್ಯತೆ ಸಂರಕ್ಷಣೆ,
14) ಜೀವ ರಸಾಯನಿಕಗಳ ವಿಶ್ಲೇಷಣೆ</td>
</tr>
<tr>
<td>ಈ)</td>
<td>ಸಂಶೋಧನಾ ಕೇಂದ್ರ ದಿಂದ ಇದುವರೆವಿಗೂ ರೈತರಿಗೆ ಆಗಿರುವ ಅನುಕೂಲಗಳೇನು? (ವಿವರ ನೀಡುವುದು)</td>
<td>ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಶೃಂಗೇರಿ ವತಿಯಿಂದ ರೈತರಿಗೆ ಆಗಿರುವ ಅನುಕೂಲಗಳು:
<table>
<tr><th>ಕ್ರ.ಸಂ.</th><th>ಕಾರ್ಯಕ್ರಮಗಳು</th><th>2019-20</th><th>2020-21</th><th>2021-22</th></tr>
<tr><td>1.</td><td>ತರಬೇತಿ ಕಾರ್ಯಕ್ರಮಗಳು</td><td>18</td><td>8</td><td>10</td></tr>
<tr><td>2.</td><td>ಕ್ಷೇತ್ರ ಭೇಟಿ</td><td>60</td><td>48</td><td>54</td></tr>
<tr><td>3.</td><td>ಕೇಂದ್ರಕ್ಕೆ ರೈತರ ಭೇಟಿ</td><td>92</td><td>180</td><td>155</td></tr>
</table>
• ಗ್ರಾಮ ಸಭೆಗಳಲ್ಲಿ ರೈತರಿಗೆ ಅಡಿಕೆ, ಕಾಳುಮೆಣಸು, ಬಾಳೆ ಹಾಗೂ ಇತರೆ ಬೆಳೆಗಳ ಬಗ್ಗೆ ಮಾಹಿತಿ ನೀಡಲಾಗಿದೆ.</td>
</tr>
</table>

No.HORTI 418 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ	628
ಸದಸ್ಯರ ಹೆಸರು	ಶ್ರೀ ರಾಜೇಗೌಡ ಟಿ.ಡಿ (ಶೃಂಗೇರಿ)
ಉತ್ತರಿಸುವ ದಿನಾಂಕ	14-09-2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈತರ ಬೇಡಿಕೆಗೆ ತಕ್ಕಂತೆ ರಸಗೊಬ್ಬರ ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸ್ತುತ 2022ನೇ ಸಾಲಿನ ಮುಂಗಾರು ಹಂಗಾಮಿಗೆ(ಆಗಸ್ಟ್-2022ರವರೆಗೆ) 14,512 ಮೆ.ಟನ್ (ಯೂರಿಯಾ 3,831 ಮೆ.ಟನ್, ಡಿ. ಎ. ಪಿ -1,342 ಮೆ.ಟನ್, ಎಂ. ಒ. ಪಿ – 3,037 ಮೆ.ಟನ್ ಮತ್ತು ಕಾಂಪ್ಲೆಕ್ಸ್- 6,302 ಮೆ.ಟನ್)ಪ್ರಮಾಣದ ವಿವಿಧ ರಸಗೊಬ್ಬರದ ಬೇಡಿಕೆಯಿರುತ್ತದೆ ಹಾಗೂ ಆಗಸ್ಟ್, 2022ರ ಅಂತ್ಯಕ್ಕೆ 14,122 ಮೆ.ಟನ್ (ಯೂರಿಯಾ 3,671 ಮೆ.ಟನ್, ಡಿ. ಎ. ಪಿ – 951 ಮೆ.ಟನ್, ಎಂ. ಒ. ಪಿ –2,963 ಮೆ.ಟನ್ ಮತ್ತು ಕಾಂಪ್ಲೆಕ್ಸ್- 6537 ಮೆ.ಟನ್) ಪ್ರಮಾಣದ ವಿವಿಧ ರಸಗೊಬ್ಬರದ ಸರಬರಾಜಾಗಿರುತ್ತದೆ. ಶೃಂಗೇರಿ ವಿಧಾನ ಸಭಾ ಕ್ಷೇತ್ರದ ತಾಲ್ಲೂಕುಗಳಿಗೆ ಡಿ.ಎ.ಪಿ ರಸಗೊಬ್ಬರಕ್ಕೆ ಪೂರಕವಾಗಿ ಕಾಂಪ್ಲೆಕ್ಸ್ ರಸಗೊಬ್ಬರವು ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಸರಬರಾಜಾಗಿರುವುದರಿಂದ ಡಿ.ಎ.ಪಿ ಕೊರತೆ ನೀಗಿರುತ್ತದೆ. The total requirement of fertilizers for Kharif 2022(August-2022)for Sringeri Constituency is 14,512MTs (Urea– 3,831 MT, DAP –1,342 MT, MOP –3,037 MT and Complex-6,302 MT). The fertilizer supplied from 01-04-2022 to August-2022 is 14,122 MT (Urea –3,671 MT, DAP – 951MT, MOP –2,963MT and Complex-6,537MT). For Sringeri Assembly constituency, complex fertlizers have been supplied more than the requirement to supplement the need of DAP.
2	ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಶೃಂಗೇರಿ, ಎನ್.ಆರ್.ಪುರ ಹಾಗೂ ಕೊಪ್ಪ ತಾಲ್ಲೂಕುಗಳಿಗೆ ಎಷ್ಟು ಪ್ರಮಾಣದ ರಸಗೊಬ್ಬರವನ್ನು ಪೂರೈಕೆ ಮಾಡಲಾಗಿದೆ; ಎಷ್ಟು ದಾಸ್ತಾನಿದೆ; ಬೇಡಿಕೆ ಪ್ರಮಾಣವೆಷ್ಟಿದೆ.	ಪ್ರಸಕ್ತ ಸಾಲಿನಲ್ಲಿ ಶೃಂಗೇರಿ, ಎನ್.ಆರ್.ಪುರ ಹಾಗೂ ಕೊಪ್ಪ ತಾಲ್ಲೂಕುಗಳ ರಸಗೊಬ್ಬರ ಬೇಡಿಕೆ, ಪೂರೈಕೆ ಮತ್ತು ದಾಸ್ತಾನು ಮಾಡಲಾದ ರಸಗೊಬ್ಬರದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. The fertilizer requirement, supply and stock for Kharif-2022 for Sringeri, N.R.pura and Koppa taluk is annexed in Annexure

3	ಯಾವ ಕಾಲಮಿತಿಯೊಳಗೆ ಬೇಡಿಕೆಗೆ ತಕ್ಕಂತೆ ರಸಗೊಬ್ಬರ ಪೂರೈಕೆಗೆ ಕ್ರಮ ಕೈಗೊಳ್ಳಲಾಗುತ್ತದೆ (ವಿವರ ನೀಡುವುದು)	ಪ್ರತಿ ಹಂಗಾಮಿನ ಪೂರ್ವದಲ್ಲಿಯೇ ರಸಗೊಬ್ಬರಗಳನ್ನು ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ರಸಗೊಬ್ಬರದ ಬೇಡಿಕೆಯನ್ನು ಅಂದಾಜಿಸಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗುತ್ತದೆ. ಕೇಂದ್ರ ಸರ್ಕಾರದಿಂದ ಮಾಹೆವಾರು, ಸಂಸ್ಥೆವಾರು ಹಂಚಿಕೆ ಮಾಡಲಾಗುವ ವಿವಿಧ ರಸಗೊಬ್ಬರಗಳನ್ನು ಜಿಲ್ಲಾವಾರು ಬೇಡಿಕೆಗನುಗುಣವಾಗಿ ನಿಗಧಿಪಡಿಸಿ, ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಸಹಕಾರ ಸಂಘಗಳು ಹಾಗೂ ಅಧಿಕೃತ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರ ಮುಖಾಂತರ ಸಮರ್ಪಕ ರೀತಿಯಲ್ಲಿ ರೈತರಿಗೆ ವಿತರಿಸಲು ಕ್ರಮ ವಹಿಸಲಾಗುತ್ತಿದೆ. ಅಲ್ಲದೆ ರಸಗೊಬ್ಬರ ಕಾಪು ದಾಸ್ತಾನಿನಡಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತರವರ ಮುಖಾಂತರ ಅವಶ್ಯವಿರುವ ರಸಗೊಬ್ಬರವನ್ನು ದಾಸ್ತಾನು ಮಾಡಿ ಸಂದಿಗ್ಧ ಪರಿಸ್ಥಿತಿ/ತೀವ್ರ ಕೊರತೆಯ ಸಮಯದಲ್ಲಿ ಸಮರ್ಪಕವಾಗಿ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ರಸಗೊಬ್ಬರ ತಯಾರಕ ಸರಬರಾಜು ಪ್ರತಿನಿಧಿಗಳೊಡನೆ ಪ್ರತಿ ವಾರ ಸಭೆ ನಡೆಸಿ ಜಿಲ್ಲೆಗಳಿಗೆ ಮತ್ತು ರಾಜ್ಯಕ್ಕೆ ರಸಗೊಬ್ಬರದ ಸಮರ್ಪಕ ನಿರ್ವಹಣೆಗೆ ಕ್ರಮವಹಿಸಲಾಗಿದೆ. ರಸಗೊಬ್ಬರವು ಅಗತ್ಯ ವಸ್ತುಗಳ ಕಾಯ್ದೆ, 1955ರಡಿ ಸೇರ್ಪಡೆಯಾಗಿರುವುದರಿಂದ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳ ಮುಖಾಂತರ ಜಿಲ್ಲೆಗಳಿಗೆ ಹಂಚಿಕೆಯಾಗಿರುವ ರಸಗೊಬ್ಬರಗಳ ಸರಬರಾಜು ಮತ್ತು ನಿರ್ವಹಣೆಯ ಉಸ್ತುವಾರಿ ನಡೆಸಲಾಗುತ್ತಿದೆ. ಜಿಲ್ಲೆಗಳಿಗೆ ಅಗತ್ಯವಿರುವ ರಸಗೊಬ್ಬರದ ಬೇಡಿಕೆ, ಪೂರೈಕೆ, ಮತ್ತು ದಾಸ್ತಾನಿನ ಬಗ್ಗೆ ಪರಿಶೀಲಿಸಲು ಕೇಂದ್ರ ಕಛೇರಿಯಿಂದ ಪ್ರತಿ ಸೋಮವಾರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮುಖೇನ ಸಭೆಯನ್ನು ನಡೆಸಿ, ಆ ದಿನದಂದೇ ಜಿಲ್ಲೆಗಳ ಅಗತ್ಯಕ್ಕನುಗುಣವಾಗಿ ವಿವಿಧ ರಸಗೊಬ್ಬರಗಳನ್ನು ಪೂರೈಸಲು ಸೂಕ್ತ ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ಸೆಪ್ಟೆಂಬರ್-2022ರ ಮಾಹೆಗೆ ಚಿಕ್ಕಮಗಳೂರು ಜಿಲ್ಲೆಗೆ ಒಟ್ಟು 13,725 ಮೆ.ಟನ್(ಯೂರಿಯಾ-5,875 ಡಿ.ಎ.ಪಿ-600 ಮೆ.ಟನ್, ಎಮ್.ಒ.ಪಿ-2,100 ಮೆ.ಟನ್ ಮತ್ತು ಕಾಂಪ್ಲೆಕ್ಸ್-5,150ಮೆ.ಟನ್) ರಸಗೊಬ್ಬಗಳನ್ನು ವಿವಿಧ ಸಂಸ್ಥೆಗಳ ಮೂಲಕ ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ. Before the commencement of the Kharif season and based on the likely area to be sown, the fertilizer requirement is estimated and submitted to Government of India. After the receipt of company-wise fertilizer allocation from Government of India, district-wise, product-

		wise, companywise supply plan is drawn in consultation with the concerned Manufacturers and fertilizer is distributed through Cooperative Societies and Private retailers to the farmers.
		In order to ensure adequate and timely supply of fertilizers, State Government has stocked various grades of fertilizer in various branches of KSCMF and KSSC located at district and taluk level under Fertilizer Buffer Stock Scheme. Since, fertilizer comes under Essential Commodity Act, 1955 the Deputy Commissioners (DCs) are regularly monitoring the supply and sale of fertilizers. Every Monday, a review meeting through Video Conference to all district Joint Director of Agriculture is being organized regularly at head office to review the supply, sales and stock of fertilizer and decision will be taken on the same day to cater the district requirement. For September-2022, action has been initiated to ensure supply of 13,725 MTs (Urea– 5,875 MT, DAP –600 MT, MOP –2,100 MT and Complex-5150 MT) of fertilizers through various fertilizer suppliers.

ಸಂಖ್ಯೆ: AGRI-ACT/186/ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

ಮುಂಗಾರು 2022ರ ಸಾಲಿನಲ್ಲಿ (ಏಪ್ರಿಲ್-2022 ರಿಂದ ಆಗಸ್ಟ್-2022) ರಸಗೊಬ್ಬರದ ಬೇಡಿಕೆ ಸರಬರಾಜು ಮತ್ತು ದಾಸ್ತಾನು ವಿವರ

ಶೃಂಗೇರಿ ವಿಧಾನ ಸಭಾ ಕ್ಷೇತ್ರ

(ಮೆ.ಟನ್ ಗಳಲ್ಲಿ)

ರಸಗೊಬ್ಬರದ ವಿಧ	ಬೇಡಿಕೆ(ಏಪ್ರಿಲ್-2022ರಿಂದ ಆಗಸ್ಟ್-2022ರವರೆಗೆ)	ಸರಬರಾಜು ಏಪ್ರಿಲ್-2022ರಿಂದ ಆಗಸ್ಟ್-2022)	ದಾಸ್ತಾನು	ಸೆಪ್ಟೆಂಬರ್-2022ರ ಬೇಡಿಕೆ
ಡಿ.ಎ.ಪಿ	1342	951	55	215
ಎಂ.ಒ.ಪಿ	3037	2963	377	465
ಕಾಂಪ್ಲೆಕ್ಸ್	6302	6537	813	885
ಯೂರಿಯಾ	3831	3671	238	520
ಒಟ್ಟು	**14512**	**14122**	**1483**	**2085**

ನರಸಿಂಹರಾಜಪುರ ತಾಲ್ಲೂಕು

(ಮೆ.ಟನ್ ಗಳಲ್ಲಿ)

ಕ್ರ. ಸಂ	ರಸಗೊಬ್ಬರದ ವಿಧ	ಬೇಡಿಕೆ (ಏಪ್ರಿಲ್-2022ರಿಂದ ಆಗಸ್ಟ್-2022ರವರೆಗೆ)	ಸರಬರಾಜು ಏಪ್ರಿಲ್-2022ರಿಂದ ಆಗಸ್ಟ್-2022ರವರೆಗೆ)	ದಾಸ್ತಾನು	ಸೆಪ್ಟೆಂಬರ್-2022ರ ಬೇಡಿಕೆ
1	ಡಿ.ಎ.ಪಿ	492	310	21	95
2	ಎಂ.ಒ.ಪಿ	1387	1599	204	180
3	ಕಾಂಪ್ಲೆಕ್ಸ್	2202	2115	371	400
4	ಯೂರಿಯಾ	1791	1853	167	210
	ಒಟ್ಟು	**5872**	**5877**	**763**	**885**

ಶೃಂಗೇರಿ ತಾಲ್ಲೂಕು

(ಮೆ.ಟನ್ ಗಳಲ್ಲಿ)

ಕ್ರ. ಸಂ	ರಸಗೊಬ್ಬರದ ವಿಧ	ಬೇಡಿಕೆ(ಏಪ್ರಿಲ್-2022ರಿಂದ ಆಗಸ್ಟ್-2022ರವರೆಗೆ)	ಸರಬರಾಜು ಏಪ್ರಿಲ್-2022ರಿಂದ ಆಗಸ್ಟ್-2022)	ದಾಸ್ತಾನು	ಸೆಪ್ಟೆಂಬರ್-2022ರ ಬೇಡಿಕೆ
1	ಡಿ.ಎ.ಪಿ	100	45	16	25
2	ಎಂ.ಒ.ಪಿ	350	282	40	85
3	ಕಾಂಪ್ಲೆಕ್ಸ್	600	530	34	175
4	ಯೂರಿಯಾ	390	325	15	120
	ಒಟ್ಟು	**1440**	**1182**	**105**	**405**

ಕೊಪ್ಪ ತಾಲ್ಲೂಕು

(ಮೆ.ಟನ್ ಗಳಲ್ಲಿ)

ಕ್ರ. ಸಂ.	ರಸಗೊಬ್ಬರದ ವಿಧ	ಬೇಡಿಕೆ (ಏಪ್ರಿಲ್-2022ರಿಂದ ಆಗಸ್ಟ್-2022ರವರೆಗೆ)	ಸರಬರಾಜು ಏಪ್ರಿಲ್-2022ರಿಂದ ಆಗಸ್ಟ್-2022ರವರೆಗೆ)	ದಾಸ್ತಾನು	ಸೆಪ್ಟೆಂಬರ್-2022ರ ಬೇಡಿಕೆ
1	ಡಿ.ಎ.ಪಿ	750	596	18	95
2	ಎಂ.ಒ.ಪಿ	1300	1082	133	200
3	ಕಾಂಪ್ಲೆಕ್ಸ್	3500	3892	408	310
4	ಯೂರಿಯಾ	1650	1493	56	190
	ಒಟ್ಟು	**7200**	**7063**	**615**	**795**

ಕರ್ನಾಟಕ ವಿಧಾನಸಭೆ

ಮಾನ್ಯ ಸದಸ್ಯರ ಹೆಸರು : ಶ್ರೀ ಈಶ್ವರ್ ಬಿ ಖಂಡ್ರೆ (ಬಾಲ್ಕಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 629
ಉತ್ತರಿಸಬೇಕಾದ ಸಚಿವರು : ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ : 14-09-2022

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಡಿಪ್ಲೊಮಾ ಕೃಷಿ ಪದವಿಧರರನ್ನು ಕೃಷಿ ಇಲಾಖೆಯಲ್ಲಿನ ರೈತ ಮಿತ್ರ ಹುದ್ದೆಗಳ ನೇಮಕಾತಿ ಮಾಡುವಂತೆ ಸರ್ಕಾರಕ್ಕೆ ಅನೇಕ ಬಾರಿ ಮನವಿ ಮಾಡಿದ್ದರೂ ಸಹ ನೇಮಕಾತಿಯು ವಿಳಂಬವಾಗುತ್ತಿರುವುದರಿಂದ ವಯೋಮಿತಿ ಮೀರಿ ಸುಮಾರು 5000ಕ್ಕೂ ಹೆಚ್ಚು ಕೃಷಿ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಕೃಷಿ ಇಲಾಖೆಯ ಮತ್ತು ಇತರೆ ಇಲಾಖೆಗಳ (ಅಂದರೆ ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳು) ವಿಸ್ತರಣಾ ಚಟುವಟಿಕೆಗಳನ್ನು ರೈತರಿಗೆ ತಲುಪಿಸಲು ಡಿಪ್ಲೋಮಾ ಕೃಷಿ ಪದವೀಧರರಾಗಿರುವ ಸ್ಥಳೀಯರಿಗೆ ಆದ್ಯತೆ ನೀಡಿ, ರೈತರ ಬಲವರ್ಧನೆಗೆ ಸಹಾಯವಾಗಲು ಎರಡು ಗ್ರಾಮ ಪಂಚಾಯಿತಿಗೆ ಒಬ್ಬರಂತೆ 'ಕೃಷಿ ಸೇವಕ' (ರೈತ ಮಿತ್ರ/ಕೃಷಿ ಮಿತ್ರ) ಎಂಬ ಹುದ್ದೆಯ ಹೆಸರಿನಲ್ಲಿ ಒಟ್ಟು 3011 ಹುದ್ದೆಗಳನ್ನು ಸೃಜಿಸಲು ಉದ್ದೇಶಿಸಿ, ಹುದ್ದೆಗಳ ಸೃಜನೆಗಾಗಿ ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲಿಸಲಾಗಿದೆ. ಅಂತೆಯೇ ರೈತ ಸಂಪರ್ಕ ಕೇಂದ್ರಗಳಲ್ಲಿ ಈಗಾಗಲೇ Accountant ATM (Assistant Technology Manager) ಹುದ್ದೆಗಳಿರುವುದರಿಂದ, 3011 ಕೃಷಿ ಸೇವಕ (ರೈತ ಮಿತ್ರ) ಹುದ್ದೆಗಳನ್ನು ಸೃಜಿಸಿ, ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಸದ್ಯಕ್ಕೆ ಒಪ್ಪಲು ಸಾಧ್ಯವಾಗುತ್ತಿಲ್ಲ.
ಆ)	ಹಾಗಿದ್ದಲ್ಲಿ, ಪ್ರತಿ ವರ್ಷ ನೂರಾರು ವಿದ್ಯಾರ್ಥಿಗಳು ಡಿಪ್ಲೊಮಾ ಕೃಷಿ ಪದವಿ ಪಡೆದಿದ್ದು 10 ವರ್ಷಗಳಿಂದ ಉದ್ಯೋಗ ಅವಕಾಶ ಕಲ್ಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;(ಮಾಹಿತಿ ನೀಡುವುದು	2022-23ನೇ ಸಾಲಿನಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರು ಸಿದ್ಧಪಡಿಸಿದ ಮೊಬೈಲ್ ಕಿರು ತಂತ್ರಾಂಶ (APP) ಬಳಸಿಕೊಂಡು ಮುಂಗಾರು ಹಂಗಾಮು, ಹಿಂಗಾರು ಹಾಗೂ ಬೇಸಿಗೆ, ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲು ಸ್ಥಳೀಯವಾಗಿ ಲಭ್ಯವಿರುವ ಕೃಷಿ/ತೋಟಗಾರಿಕೆ/ ರೇಷ್ಮೆ ವಿಷಯಗಳಲ್ಲಿ ಡಿಪ್ಲೊಮಾ ಪದವಿ ಪಡೆದಂತಹ 'ಖಾಸಗಿ ಡಿಪ್ಲೊಮಾ ನಿವಾಸಿ' (Private Diploma Residents-PDR) ಗಳನ್ನು ರಾಜ್ಯದ ಒಟ್ಟು 5963 ಗ್ರಾಮ ಪಂಚಾಯಿತಿಗಳ ಪೈಕಿ 3890 ಗ್ರಾಮ ಪಂಚಾಯಿತಿಗಳಿಗೆ ಒಬ್ಬರನ್ನು ನೇಮಿಸುವ ಬಗ್ಗೆ ಉದ್ದೇಶಿಸಿದ್ದು, ಪ್ರಸ್ತುತ ಸರ್ಕಾರದ ಮಟ್ಟದಲ್ಲಿ ಪರಿಶೀಲನಾ ಹಂತದಲ್ಲಿದೆ.
ಇ)	ರೈತ ಮಿತ್ರ ಹುದ್ದೆಗಳನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು? (ವಿವರ ಒದಗಿಸುವುದು)	ಪ್ರಸ್ತುತ ಅನ್ವಯಿಸುವುದಿಲ್ಲ

ಇ-ಸಂಖ್ಯೆ:AGRI-69/ANE/2022

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 630
ಸದಸ್ಯರ ಹೆಸರು : **ಶ್ರೀ ಈಶ್ವರ್ ಬಿ ಖಂಡ್ರೆ (ಭಾಲ್ಕಿ)**
ಉತ್ತರಿಸುವ ದಿನಾಂಕ : **14-09-2022**
ಉತ್ತರಿಸುವ ಸಚಿವರು : **ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಇಲ್ಲಿಯವರೆಗೆ ಎಷ್ಟು ಡಾ.ಬಿ.ಆರ್. ಅಂಬೇಡ್ಕರ್ ಭವನ, ಬಾಬು ಜಗಜೀವನರಾಂ ಭವನ ಮತ್ತು ಇತರೆ ಭವನಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ; ಎಷ್ಟು ಭವನಗಳಿವೆ; (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 1086 ಡಾ|| ಬಿ.ಆರ್. ಅಂಬೇಡ್ಕರ್ ಭವನ / ಡಾ|| ಬಾಬು ಜಗಜೀವನರಾಮ್ / ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ವಿಧಾನಸಭಾ ಕ್ಷೇತ್ರ / ತಾಲ್ಲೂಕುವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಈ ಭವನಗಳ ನಿರ್ಮಾಣಕ್ಕೆ ಆಗಿರುವ ವೆಚ್ಚವೆಷ್ಟು; ಕಲ್ಯಾಣ ಕರ್ನಾಟಕದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ, ಬಾಬು ಜಗಜೀವನರಾಂ ಭವನ ಮತ್ತು ಇತರೆ ಭವನಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಮೊತ್ತವೆಷ್ಟು; (ವಿವರ ಒದಗಿಸುವುದು)	ಕಳೆದ 03 ವರ್ಷಗಳಲ್ಲಿ ಭವನಗಳ ನಿರ್ಮಾಣ ಕಾರ್ಯಕ್ರಮಕ್ಕೆ ಒಟ್ಟು ರೂ.253.75 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ. ಈ ಪೈಕಿ ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲೆಗಳಿಗೆ ಒಟ್ಟು ರೂ.31.61 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
ಇ)	ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಣಕಾಸು ಕೊರತೆಯಿಂದ ಹಲವು ಭವನಗಳು ಅರ್ಧಕ್ಕೆ ನಿಂತು ಹೋಗಿರುವುದು ಸರ್ಕಾರದ	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲೆಗಳಿಗೆ ಮಂಜೂರಾತಿ ನೀಡಿರುವ 1086 ಭವನಗಳ ಪೈಕಿ 564 ಭವನಗಳು ಪೂರ್ಣಗೊಂಡಿದ್ದು, 306 ಭವನಗಳ

	ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಭವನಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈವರೆಗಿನ ಭೌತಿಕ ಪ್ರಗತಿಯೇನು? (ವಿವರ ಒದಗಿಸುವುದು)	ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 113 ಭವನಗಳ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸುವುದು ಬಾಕಿ ಇದ್ದು, 103 ಭವನಗಳಿಗೆ ನಿವೇಶನ / ಗ್ರಾಮ ನಿಗದಿಪಡಿಸಬೇಕಾಗಿರುತ್ತದೆ. ಈ ಸಂಬಂಧವಾಗಿ, ಒಟ್ಟು ರೂ.223.82 ಕೋಟಿಗಳಿಗೆ ಮಂಜೂರಾತಿ ನೀಡಿ, ರೂ.164.82 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.63.00 ಕೋಟಿಗಳನ್ನು ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. ಭವನಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಆಧರಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡುವ ಮೂಲಕ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

ಸಕಇ 575 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಈಶ್ವರ್ ಬಿ ಖಂಡ್ರೆ (ಭಾಲ್ಕಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-630 ಕ್ಕೆ ಅನುಬಂಧ

ಕ್ರ. ಸಂ	ಜಿಲ್ಲೆ	ವಿಧಾನಸಭಾ ಕ್ಷೇತ್ರ / ತಾಲ್ಲೂಕು	ಭವನಗಳ ಸಂಖ್ಯೆ	ಮಂಜೂರಾತಿ ಮೊತ್ತ	ಬಿಡುಗಡೆ ಮೊತ್ತ	ಬಾಕಿ ಬಿಡುಗಡೆ ಮೊತ್ತ
1		ಸೇಡಂ	43	630.00	435.00	195.00
2		ಚಿಂಚೋಳಿ	75	1190.00	1030.00	160.00
3		ಚಿತ್ತಾಪುರ	97	1712.00	1399.50	312.50
4		ಅಫಜಲಪುರ	31	468.00	277.00	191.00
5	ಕಲಬುರಗಿ	ಆಳಂದ	49	629.00	458.00	171.00
6		ಜೇವರ್ಗಿ	44	787.00	617.00	170.00
7		ಕಲಬುರಗಿ ಉತ್ತರ	5	60.00	15.00	45.00
8		ಕಲಬುರಗಿ ಗ್ರಾಮಾಂತರ	44	609.80	421.80	188.00
9		ಕಲಬುರಗಿ ದಕ್ಷಿಣ	29	2641.00	2379.00	262.00
10		ರಾಯಚೂರು ಗ್ರಾಮಾಂತರ	10	106.00	53.00	53.00
11		ಲಿಂಗಸೂರು	8	176.00	44.00	132.00
12		ಸಿಂಧನೂರು	19	285.00	162.50	122.50
13		ಮಸ್ಕಿ	17	178.00	178.00	0.00
14		ರಾಯಚೂರು ನಗರ	4	565.00	350.00	215.00
15		ಮಾನ್ವಿ	9	108.00	34.00	74.00
16	ರಾಯಚೂರು	ದೇವದುರ್ಗ	20	690.00	331.00	359.00
17		ಯಲಬುರ್ಗ	31	610.00	416.40	193.60
18		ಕನಕಗಿರಿ	23	379.00	305.00	74.00
19		ಕುಷ್ಟಗಿ	35	769.00	515.00	254.00
20		ಕೊಪ್ಪಳ	41	717.83	569.83	148.00
21	ಕೊಪ್ಪಳ	ಗಂಗಾವತಿ	12	296.00	108.00	188.00
22		ಸಂಡೂರು	18	412.00	344.00	68.00
23		ವಿಜಯನಗರ (ಹೊಸಪೇಟೆ)	9	100.00	91.00	9.00
24		ಬಳ್ಳಾರಿ	23	1506.00	718.70	787.30
25		ಬಳ್ಳಾರಿ (ಗ್ರಾ)	24	240.00	240.00	0.00
26	ಬಳ್ಳಾರಿ	ಸಿರುಗುಪ್ಪ	14	380.00	213.00	167.00
27		ಹರಪ್ಪನಹಳ್ಳಿ	32	679.00	574.25	104.75
28		ಹಡಗಲಿ	19	366.00	183.80	182.20
29		ಹಗರಿಬೊಮ್ಮನಹಳ್ಳಿ	29	482.31	426.51	55.80
30		ಹೊಸಪೇಟೆ	11	592.00	248.60	343.40

31		ಕಂಪ್ಲಿ	7	272.00	158.00	114.00
32		ಕೂಡ್ಲಿಗಿ	28	490.00	439.60	50.40
33	ಬೀದರ್	ಭಾಲ್ಕಿ	43	500.00	382.50	117.50
34		ಬಸವ ಕಲ್ಯಾಣ	7	266.00	232.00	34.00
35		ಬೀದರ್	41	620.00	410.50	209.50
36		ಬೀದರ್ ದಕ್ಷಿಣ	15	163.00	63.00	100.00
37		ಹುಮನಾಬಾದ್	22	405.00	283.00	122.00
38		ಔರಾದ್	15	234.00	130.00	104.00
39	ಯಾದಗಿರಿ	ಸುರಪುರ	11	122.00	93.60	28.40
		ಶಹಾಪುರ	21	222.00	170.00	52.00
40		ಶೋರಾಪುರ	8	120.00	33.00	87.00
41		ಯಾದಗಿರಿ	37	1066.00	822.60	243.40
42		ಗುರುಮಿಠಕಲ್	6	72.00	27.00	45.00
ಒಟ್ಟು			1086	22915.94	16383.69	6532.25

Yamini.N
ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**631**
ಮಾನ್ಯ ಸದಸ್ಯರ ಹೆಸರು	ಶ್ರೀ ಈಶ್ವರ್ ಬಿ ಖಂಡ್ರೆ (ಭಾಲ್ಕಿ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಷ್ಟು ಬಾಲಕಿಯರ ಮತ್ತು ಬಾಲಕರ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ; ಪ್ರಸ್ತುತ ಈ ವಿದ್ಯಾರ್ಥಿನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳು ವಸತಿ ಸೌಲಭ್ಯ ಪಡೆದಿರುತ್ತಾರೆ; (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)	ಕಲ್ಯಾಣ ಕರ್ನಾಟಕ ಭಾಗದಲ್ಲಿ 61 ಮೆಟ್ರಿಕ್ ಪೂರ್ವ ಬಾಲಕಿಯರ, 240 ಮೆಟ್ರಿಕ್ ಪೂರ್ವ ಬಾಲಕರ ಒಟ್ಟು 301 ವಿದ್ಯಾರ್ಥಿನಿಲಯಗಳು ಹಾಗೂ 108 ಮೆಟ್ರಿಕ್ ನಂತರದ ಬಾಲಕರ , 111 ಮೆಟ್ರಿಕ್ ನಂತರದ ಬಾಲಕಿಯರ ಹೀಗೆ ಒಟ್ಟು 520 ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಸದರಿ ವಿದ್ಯಾರ್ಥಿನಿಲಯಗಳಲ್ಲಿ 39668 ವಿದ್ಯಾರ್ಥಿಗಳು ವಸತಿ ಸೌಲಭ್ಯ ಪಡೆದಿರುತ್ತಾರೆ. ವಿಧಾನಸಭಾ ಕ್ಷೇತ್ರವಾರು ವಿದ್ಯಾರ್ಥಿನಿಲಯಗಳ ವಿವರವನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪಲೋಡ್ ಮಾಡಲಾಗಿದೆ.
ಆ)	ಈ ಭಾಗದಲ್ಲಿ ಎಷ್ಟು ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ ಮತ್ತು ಎಷ್ಟು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ; (ವಿವರ ಒದಗಿಸುವುದು)	ಕಲ್ಯಾಣ ಕರ್ನಾಟಕ ಭಾಗದಲ್ಲಿ 110 ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ ಹಾಗೂ 22 ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡಗಳಲ್ಲಿ , 87 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ವಿದ್ಯಾರ್ಥಿನಿಲಯಗಳ ವಿವರವನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪಲೋಡ್ ಮಾಡಲಾಗಿದೆ.

ಇ)	ಕೆಲವು ವಿದ್ಯಾರ್ಥಿನಿಲಯಗಳು ಬಾಡಿಗೆಯನ್ನು ಹಲವು ತಿಂಗಳಿನಿಂದ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ಕಟ್ಟಡದ ಮಾಲೀಕರು ವಸತಿನಿಲಯಗಳನ್ನು ತೆರವು ಮಾಡುವಂತೆ ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ನಿವೇಶನ ಒದಗಿಸಿ, ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)	ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕೆಲವೊಂದು ಕಟ್ಟಡಗಳಿಗೆ ಬಾಡಿಗೆ ನಿಗಧಿ ಸಂಬಂಧ ಅಪೂರ್ಣ ದಾಖಲಾತಿ/ಮಾಹಿತಿಯ ಕಾರಣ ಬಾಡಿಗೆ ನಿಗಧಿ ಮಾಡುವುದು ತಡವಾದ ಕಾರಣ ಬಾಡಿಗೆ ಪಾವತಿ ಮಾಡುವುದು ಬಾಕಿಯಿರುತ್ತದೆ. ಅಂತಹ ಕಟ್ಟಡಗಳನ್ನು ತೆರವುಗೊಳಿಸುವಂತೆ ಒತ್ತಾಯ ಮಾಡುತ್ತಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ. ಮುಂದುವರೆದು ಬಾಡಿಗೆ ಕಟ್ಟಡಗಳಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ನಿವೇಶನ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನುಸಾರ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು.
ಈ)	ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ; ಇವುಗಳಿಗೆ ಪಾವತಿ ಮಾಡುತ್ತಿರುವ ಬಾಡಿಗೆ ಮೊತ್ತವೆಷ್ಟು; ಪಾವತಿಸಿರುವ ಬಾಡಿಗೆ ಎಷ್ಟು; ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು ? (ಕಟ್ಟಡವಾರು ವಿವರ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಬಾಡಿಗೆ ಪಾವತಿ ಮಾಡುತ್ತಿರುವ ಕಟ್ಟಡವಾರು ವಿವರವನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪಲೋಡ್ ಮಾಡಲಾಗಿದೆ.

ಸಂಖ್ಯೆ: ಹಿಂವಕ 529 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 633
ಸದಸ್ಯರ ಹೆಸರು : ಶ್ರೀ ಈಶ್ವರ್ ಬಿ ಖಂಡ್ರೆ (ಭಾಲ್ಕಿ)
ಉತ್ತರಿಸಬೇಕಾದ ದಿನಾಂಕ : 14.09.2022
ಉತ್ತರಿಸುವ ಸಚಿವರು : ಮಾನ್ಯ ಕೃಷಿ ಸಚಿವರು

ಪ್ರಶ್ನೆ

(ಅ) ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ವಿವಿಧ ಖಾಸಗಿ ವಿಮಾ ಕಂಪನಿಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರುಗಳಿಗೆ ಪಾವತಿಸಿರುವ ಕಂತಿನ ಹಣವೆಷ್ಟು; ಈ ವಿಮೆಗೆ ಪ್ರತಿಯಾಗಿ ವಿಮಾ ಕಂಪನಿಗಳು ರೈತರಿಗೆ ಪಾವತಿ ಮಾಡಿರುವ ಪರಿಹಾರವೆಷ್ಟು; (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ಒದಗಿಸುವುದು)

ಉತ್ತರ

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯು 2016-17ನೇ ಸಾಲಿನಿಂದ ಆರಂಭವಾಗಿದ್ದು, 2021-22ನೇ ಸಾಲಿನವರೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರೈತರಿಂದ ವಿಮಾ ಕಂಪನಿಗಳಿಗೆ ಪಾವತಿಸಿರುವ ಒಟ್ಟು ವಿಮಾ ಕಂತಿನ ಮೊತ್ತದ ವಿವರ ಮತ್ತು ಅನುಷ್ಠಾನ ವಿಮಾ ಕಂಪನಿಯವರಿಂದ ರೈತರಿಗೆ ಪಾವತಿ ಮಾಡಿರುವ ಬೆಳೆ ವಿಮೆ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವರ್ಷ	ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ
2016-17	20980.61	58840.07	58840.07	138660.75	185308.71
2017-18	20534.22	76255.48	76255.48	173045.18	62034.31
2018-19	18885.08	66859.59	66859.59	152604.25	259835.04
2019-20	17355.90	81590.44	81590.44	180536.78	86265.35
2020-21	14331.28	70320.02	66473.39	151124.69	62101.95
2021-22	14551.17	68462.05	65352.16	148365.38	75740.96
ಒಟ್ಟು	**106638.25**	**422327.66**	**415371.14**	**944337.03**	**731286.31**

ಜಿಲ್ಲಾವಾರು ಮತ್ತು ವರ್ಷವಾರು ವಿವರಗಳನ್ನು **ಅನುಬಂಧ-1** ರಿಂದ **ಅನುಬಂಧ-3** ರವರೆಗೆ ಒದಗಿಸಿದೆ.

ಪ್ರಶ್ನೆ

(ಆ) ಪ್ರಸ್ತುತ ಚಾಲ್ತಿಯಲ್ಲಿರುವ ಬೆಳೆ ವಿಮಾ ಯೋಜನೆಯು ಸಂಪೂರ್ಣವಾಗಿ ಅವೈಜ್ಞಾನಿಕವಾಗಿದ್ದು, ಈ ಯೋಜನೆಯಿಂದ ರೈತರಿಗಿಂತ ಹೆಚ್ಚಾಗಿ ಖಾಸಗಿ ವಿಮಾ ಕಂಪನಿಗಳಿಗೆ ಕೋಟ್ಯಾಂತರ ರೂಪಾಯಿ ಲಾಭ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉತ್ತರ

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯು ಇಳುವರಿ ಹಾಗೂ ಕ್ಷೇತ್ರ ಆಧಾರಿತ ಯೋಜನೆಯಾಗಿದ್ದು, ರೈತರು ಅರ್ಜಿ ಸಲ್ಲಿಸುವ ಹಂತದಿಂದ ಬೆಳೆ ಕಟಾವು ಪ್ರಯೋಗ ಹಾಗೂ ವಿಮಾ ಪರಿಹಾರ ಮೊತ್ತವು ಅರ್ಹ ರೈತರ ಖಾತೆಗೆ ಜಮೆಯಾಗುವವರೆಗೆ ಪ್ರತಿಯೊಂದನ್ನು ಸಂರಕ್ಷಣೆ ಪೋರ್ಟಲ್ ಮುಖಾಂತರ ಅತ್ಯಂತ ವೈಜ್ಞಾನಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು, ಕಾರ್ಯಕರ್ತರನ್ನು (ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆಗಳ ಅಧಿಕಾರಿಗಳು ಮತ್ತು ಕಾರ್ಯದರ್ಶಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿ) ಆಯ್ಕೆ ಮಾಡುವುದು, ಗ್ರಾಮಾವಾರು ಸರ್ವೆ ನಂಬರ್‌ಗಳ ಹಂಚಿಕೆಯನ್ನು ತಂತ್ರಾಂಶದ ಮೂಲಕವೇ ನಡೆಸಲಾಗುತ್ತಿದೆ. ಇದಲ್ಲದೇ ಬೆಳೆ ಕಟಾವು ಪ್ರಯೋಗಗಳನ್ನು ಮಾಡುವಲ್ಲಿನ ಪ್ರತಿ ಹಂತದ ಮಾಹಿತಿಯನ್ನು ಯಾದೃಚ್ಛಿಕವಾಗಿ (Randomize) ಆಯ್ಕೆಯಾದ ಅನಿಯಮಿತ ಸರ್ವೆ ನಂಬರ್, ಪ್ರದೇಶ, ಬೆಳೆ

	(ಮಿಶ್ರ/ಶುದ್ಧ), ಮೂಲ ಕಾರ್ಯಕರ್ತರು ಹಾಗೂ ರೈತರೊಂದಿಗಿನ ಛಾಯಚಿತ್ರಗಳು, ಕಟಾವು ಮಾಡುವಾಗ ಇಳುವರಿಯ ತೂಕ ಇತ್ಯಾದಿಗಳ ವಿಡಿಯೋವನ್ನು ಸಹ CCE ಮೊಬೈಲ್ ಆಪ್ ಮುಖಾಂತರ ಸಂರಕ್ಷಣೆ ಪೋರ್ಟಲ್‌ಗೆ ಅಪಲೋಡ್ ಮಾಡಬೇಕಾಗಿರುತ್ತದೆ. ಇಲ್ಲಿ ಜಿಪಿಎಸ್ ಪದ್ಧತಿ ಅಳವಡಿಸಿರುವುದರಿಂದ ಯಾವುದೇ ರೀತಿಯ ಬದಲಾವಣೆಗಳನ್ನಾಗಲೀ, ತಿದ್ದುಪಡಿಗಳನ್ನಾಗಲೀ ಮಾಡಲು ಸಾಧ್ಯವಿರುವುದಿಲ್ಲ. ಈ ರೀತಿ ಅತ್ಯಂತ ವೈಜ್ಞಾನಿಕವಾಗಿ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಆಧಾರದ ಮೇಲೆ ಬೆಳೆ ವಿಮೆ ಪರಿಹಾರ ಲೆಕ್ಕ ಹಾಕಲು ಸಂರಕ್ಷಣೆ ತಂತ್ರಾಂಶದಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದಿಸಿದ ವಿನಾಯಿತಿಗಳನ್ನು ಅಳವಡಿಸಿಕೊಂಡು ವಿಮೆಗೆ ನೋಂದಣಿಯಾದ ಪ್ರಸ್ತಾವನೆಗಳ ಬೆಳೆಯೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡಿ, ತಾಳೆಯಾಗುವ ಪ್ರಸ್ತಾವನೆಗಳಿಗೆ ಮಾತ್ರ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು(Actual Yield) ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ (Threshold Yield) ಕಡಿಮೆ ಇದ್ದರೆ, ಇಳುವರಿಯ ಶೇಕಡವಾರು ಕೊರತೆಗೆ ಅನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಲಾಗುತ್ತದೆ. ಈ ಯೋಜನೆಯಡಿ 2016-17ನೇ ಸಾಲಿನಿಂದ 2021-22 ನೇ ಸಾಲಿನವರೆಗೆ ರೈತರಿಂದ ಪಾವತಿಯಾದ ಒಟ್ಟು ವಿಮಾ ಕಂತಿನ ಮೊತ್ತವು ರೂ.106638.25 ಲಕ್ಷಗಳಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರವು ಭರಿಸಿದ ವಿಮಾ ಕಂತಿನ ಮೊತ್ತ ರೂ.837698.80 ಲಕ್ಷಗಳು ಹಾಗೂ ವಿಮಾ ಸಂಸ್ಥೆಗಳಿಂದ ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತವು ರೂ. 731286.31 ಲಕ್ಷಗಳಾಗಿರುತ್ತವೆ. ರೈತರಿಂದ ಪಾವತಿಯಾದ ಒಟ್ಟು ವಿಮಾ ಕಂತಿಗಿಂತ ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತವು ಹೆಚ್ಚಾಗಿರುತ್ತದೆ.
(ಇ) ಹಾಗಿದ್ದಲ್ಲಿ, ಈ ಬೆಳೆ ವಿಮಾ ಯೋಜನೆಯನ್ನು ಸರ್ಕಾರಿ ಸ್ವಾಮ್ಯದ ವಿಮಾ ಸಂಸ್ಥೆಗಳ ಮೂಲಕವೇ ಮುನ್ನಡೆಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ? (ವಿವರ ಒದಗಿಸುವುದು)	ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿಮಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರದಿಂದ ಆಯ್ಕೆಗೊಳಿಸಲಾಗುತ್ತಿದ್ದು, ಈ ಯೋಜನೆಯನ್ನು ಸರ್ಕಾರಿ ಸ್ವಾಮ್ಯದ ವಿಮಾ ಸಂಸ್ಥೆಗಳ ಮೂಲಕವೇ ಮುನ್ನಡೆಸುವ ಕುರಿತು ಕೇಂದ್ರ ಸರ್ಕಾರವು ನಿರ್ಧರಿಸಬೇಕಾಗಿರುತ್ತದೆ.

ಕೃಇ 58 ಕೃಉಇ 2022

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ವಿಧಾನ ಸಭೆಯ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ: 633ಕ್ಕೆ ಅನುಬಂಧ-1

2016-17ನೇ ಸಾಲಿನಲ್ಲಿ ಮತ್ತು 2017-18 ನೇ ಸಾಲಿನಲ್ಲಿ ಅನುಷ್ಠಾನ ವಿಮಾ ಕಂಪನಿಯವರಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರೈತರಿಂದ ಪಾವತಿಸಿರುವ ಒಟ್ಟು ವಿಮಾ ಕಂತಿನ ಮೊತ್ತದ ವಿವರ ಮತ್ತು ಅನುಷ್ಠಾನ ವಿಮಾ ಕಂಪನಿಯವರಿಂದ ರೈತರಿಗೆ ಪಾವತಿ ಮಾಡಿರುವ ಬೆಳೆ ವಿಮೆ ಪರಿಹಾರ ಮೊತ್ತದ ಜಿಲ್ಲಾವಾರು ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆ	2016-17					2017-18				
		ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ	ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ
1	ಬಾಗಲಕೋಟೆ	1288.98	4932.23	4932.23	11153.45	13015.66	454.12	1437.91	1437.91	3329.94	1241.52
2	ಬಳ್ಳಾರಿ	1141.27	1320.27	1320.27	3781.81	1751.82	677.28	1195.55	1195.55	3068.39	214.71
3	ಬೆಳಗಾವಿ	1883.40	6276.64	6276.64	14436.67	13956.60	515.88	1272.93	1272.93	3061.74	354.44
4	ಬೆಂಗಳೂರು ಗ್ರಾ.	8.11	13.59	13.59	35.28	172.59	47.68	74.83	74.83	197.35	27.18
5	ಬೆಂಗಳೂರು ನಗರ	5.23	1.72	1.72	8.67	40.79	4.08	8.07	8.07	20.22	36.25
6	ಬೀದರ್	1379.26	5617.12	5617.12	12613.50	15806.26	1431.47	8631.79	8631.79	18695.06	85.11
7	ಚಾಮರಾಜನಗರ	317.82	724.13	724.13	1766.08	4074.19	333.60	778.84	778.84	1891.28	1096.55
8	ಚಿಕ್ಕಬಳ್ಳಾಪುರ	92.75	149.09	149.09	390.93	962.49	270.67	769.16	769.16	1808.99	24.30
9	ಚಿಕ್ಕಮಗಳೂರು	110.42	101.70	101.70	313.81	289.46	89.81	81.65	81.65	253.11	265.51
10	ಚಿತ್ರದುರ್ಗ	381.20	457.92	457.92	1297.04	7114.43	1345.65	4980.03	4980.03	11305.71	2253.28
11	ದಕ್ಷಿಣ ಕನ್ನಡ	1.85	0.00	0.00	1.85	0.93	1.15	0.85	0.85	2.85	2.70
12	ದಾವಣಗೆರೆ	408.95	656.92	656.92	1722.79	5238.07	1188.33	2941.78	2941.78	7071.90	1232.92
13	ಧಾರವಾಡ	2860.56	5990.71	5990.71	14841.98	26640.36	3154.24	9401.00	9401.00	21956.25	16815.44
14	ಗದಗ	2376.44	7565.81	7565.81	17508.05	24076.64	1736.15	6191.11	6191.11	14118.37	5304.67
15	ಹಾಸನ	197.37	302.61	302.61	802.59	1177.76	427.68	1182.30	1182.30	2792.28	1793.23
16	ಹಾವೇರಿ	1663.57	4948.18	4948.18	11559.93	23229.64	2745.35	13402.92	13402.92	29551.19	3121.78
17	ಕಲಬುರ್ಗಿ	1273.01	4667.19	4667.19	10607.38	714.75	880.77	3164.82	3164.82	7210.40	3.80
18	ಕೊಡಗು	17.64	0.10	0.10	17.83	34.81	16.41	2.06	2.06	20.53	36.78
19	ಕೋಲಾರ	107.28	85.05	85.05	277.38	2379.72	200.49	655.10	655.10	1510.69	4.50
20	ಕೊಪ್ಪಳ	1009.14	4089.77	4089.77	9188.68	13174.77	1067.85	5083.83	5083.83	11235.50	1214.38
21	ಮಂಡ್ಯ	121.30	203.04	203.04	527.39	3264.58	119.97	362.00	362.00	843.97	1138.38
22	ಮೈಸೂರು	210.14	395.53	395.53	1001.20	2206.24	54.26	98.51	98.51	251.28	210.66
23	ರಾಯಚೂರು	1314.28	3333.30	3333.30	7980.87	5584.29	587.59	622.21	622.21	1832.01	2879.67
24	ರಾಮನಗರ	14.70	11.58	11.58	37.86	347.57	85.65	136.50	136.50	358.66	40.17
25	ಶಿವಮೊಗ್ಗ	228.02	58.79	58.79	345.60	5409.91	407.81	818.82	818.82	2045.46	4030.63
26	ತುಮಕೂರು	277.85	1304.70	1304.70	2887.26	2330.24	671.66	3219.79	3219.79	7111.25	7709.60
27	ಉಡುಪಿ	5.15	0.13	0.13	5.41	5.74	5.33	0.54	0.54	6.42	1.13
28	ಉತ್ತರ ಕನ್ನಡ	386.02	395.85	395.85	1177.73	6364.40	430.36	2991.12	2991.12	6412.61	3151.61
29	ವಿಜಯಪುರ	1037.34	3742.22	3742.22	8521.78	4158.27	1128.65	5948.07	5948.07	13024.79	7708.09
30	ಯಾದಗಿರಿ	861.57	1494.18	1494.18	3849.94	1785.74	454.25	801.38	801.38	2057.00	35.32
	ಒಟ್ಟು	**20980.61**	**58840.06**	**58840.06**	**138660.74**	**185308.71**	**20534.22**	**76255.48**	**76255.48**	**173045.19**	**62034.31**

ವಿಧಾನ ಸಭೆಯ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ: 633ಕ್ಕೆ ಅನುಬಂಧ-2

2017-18ನೇ ಸಾಲಿನಲ್ಲಿ ಮತ್ತು 2018-19 ನೇ ಸಾಲಿನಲ್ಲಿ ಅನುಷ್ಠಾನ ವಿಮಾ ಕಂಪನಿಯವರಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರೈತರಿಂದ ಪಾವತಿಸಿರುವ ಒಟ್ಟು ವಿಮಾ ಕಂತಿನ ಮೊತ್ತದ ವಿವರ ಮತ್ತು ಅನುಷ್ಠಾನ ವಿಮಾ ಕಂಪನಿಯವರಿಂದ ರೈತರಿಗೆ ಪಾವತಿ ಮಾಡಿರುವ ಬೆಳೆ ವಿಮೆ ಪರಿಹಾರ ಮೊತ್ತದ ಜಿಲ್ಲಾವಾರು ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂ.	ಜಿಲ್ಲೆ	2018-19					2019-20				
		ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ	ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ
1	ಬಾಗಲಕೋಟೆ	1601.39	4294.94	4294.94	10191.27	11616.72	696.57	4658.59	4658.59	10013.74	2488.48
2	ಬಳ್ಳಾರಿ	458.94	503.51	503.51	1465.95	1981.84	496.84	451.62	451.62	1400.08	379.08
3	ಬೆಳಗಾವಿ	913.41	3803.09	3803.09	8519.47	3005.12	515.10	2021.23	2021.23	4557.57	2117.93
4	ಬೆಂಗಳೂರು ಗ್ರಾ.	19.21	40.29	40.29	99.79	237.70	20.38	29.51	29.51	79.39	33.93
5	ಬೆಂಗಳೂರು ನಗರ	2.82	8.40	8.40	19.63	22.05	3.68	3.65	3.65	10.97	6.52
6	ಬೀದರ್	1046.79	6448.72	6448.72	13944.24	16128.12	1310.04	8652.33	8652.33	18614.70	2471.77
7	ಚಾಮರಾಜನಗರ	158.93	1276.45	1276.45	2711.82	798.52	194.33	1342.11	1342.11	2878.55	596.26
8	ಚಿಕ್ಕಬಳ್ಳಾಪುರ	151.77	596.87	596.87	1345.51	3805.91	92.37	240.35	240.35	573.08	79.31
9	ಚಿಕ್ಕಮಗಳೂರು	74.31	30.03	30.03	134.36	28.90	97.49	218.16	218.16	533.81	301.32
10	ಚಿತ್ರದುರ್ಗ	799.61	2262.19	2262.19	5323.98	14887.47	1118.68	5295.48	5295.48	11709.63	7537.28
11	ದಕ್ಷಿಣ ಕನ್ನಡ	2.09	0.00	0.00	2.09	1.45	2.64	0.00	0.00	2.64	3.17
12	ದಾವಣಗೆರೆ	183.83	438.61	438.61	1061.04	1013.82	380.13	282.78	282.78	945.68	2078.16
13	ಧಾರವಾಡ	2339.56	7641.79	7641.79	17623.15	26863.06	2472.16	9628.02	9628.02	21728.20	5250.70
14	ಗದಗ	2441.58	12482.68	12482.68	27406.93	54737.48	2211.17	10421.41	10421.41	23053.99	2609.51
15	ಹಾಸನ	379.02	782.27	782.27	1943.56	5642.69	68.88	335.13	335.13	739.15	451.91
16	ಹಾವೇರಿ	1380.36	3863.33	3863.33	9107.03	17222.81	1499.06	6975.09	6975.09	15449.23	23736.10
17	ಕಲಬುರ್ಗಿ	508.96	2007.19	2007.19	4523.35	2089.06	416.53	1348.60	1348.60	3113.72	1613.13
18	ಕೊಡಗು	6.48	0.14	0.14	6.76	4.75	3.91	0.00	0.00	3.91	7.33
19	ಕೋಲಾರ	98.04	360.21	360.21	818.47	2137.93	103.03	424.00	424.00	951.03	197.09
20	ಕೊಪ್ಪಳ	1135.57	4306.06	4306.06	9747.70	23670.09	795.88	4582.04	4582.04	9959.96	7740.96
21	ಮಂಡ್ಯ	106.97	246.84	246.84	600.65	869.75	88.91	375.07	375.07	839.05	1360.01
22	ಮೈಸೂರು	29.12	49.42	49.42	127.96	210.94	55.02	11.19	11.19	77.39	574.18
23	ರಾಯಚೂರು	1612.06	2641.18	2641.18	6894.41	21721.48	2023.60	8349.70	8349.70	18722.99	6927.20
24	ರಾಮನಗರ	7.35	13.07	13.07	23.91	53.07	24.11	19.78	19.78	63.68	92.16
25	ಶಿವಮೊಗ್ಗ	215.86	427.84	427.84	1071.53	2955.96	316.88	1155.19	1155.19	2627.27	1548.94
26	ತುಮಕೂರು	591.37	3184.46	3184.46	6960.30	5378.28	715.41	4313.83	4313.83	9343.07	6852.48
27	ಉಡುಪಿ	6.77	0.36	0.36	7.49	0.49	6.26	2.32	2.32	10.89	2.71
28	ಉತ್ತರ ಕನ್ನಡ	419.99	1897.15	1897.15	4224.22	2039.60	435.78	4509.56	4509.56	9454.90	499.46
29	ವಿಜಯಪುರ	1817.25	6316.65	6316.65	14450.54	39077.88	840.03	4470.71	4470.71	9781.45	8343.48
30	ಯಾದಗಿರಿ	375.67	935.84	935.84	2247.14	1632.10	351.05	1473.00	1473.00	3297.04	364.79
	ಒಟ್ಟು	**18885.07**	**66859.59**	**66859.59**	**152604.25**	**259835.04**	**17355.90**	**81590.43**	**81590.43**	**180536.77**	**86265.35**

ವಿಧಾನ ಸಭೆಯ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ: 633ಕ್ಕೆ ಅನುಬಂಧ-3

2020-21ನೇ ಸಾಲಿನಲ್ಲಿ ಮತ್ತು 2021-22 ನೇ ಸಾಲಿನಲ್ಲಿ ಅನುಷ್ಠಾನ ವಿಮಾ ಕಂಪನಿಯವರಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರೈತರಿಂದ ಪಾವತಿಸಿರುವ ಒಟ್ಟು ವಿಮಾ ಕಂತಿನ ಮೊತ್ತದ ವಿವರ ಮತ್ತು ಅನುಷ್ಠಾನ ವಿಮಾ ಕಂಪನಿಯವರಿಂದ ರೈತರಿಗೆ ಪಾವತಿ ಮಾಡಿರುವ ಬೆಳೆ ವಿಮೆ ಪರಿಹಾರ ಮೊತ್ತದ ಜಿಲ್ಲಾವಾರು ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂ.	ಜಿಲ್ಲೆ	2020-21					2021-22				
		ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ	ರೈತರ ವಿಮಾ ಕಂತು	ರಾಜ್ಯದ ವಿಮಾ ಕಂತು	ಕೇಂದ್ರದ ವಿಮಾ ಕಂತು	ಒಟ್ಟು ವಿಮಾ ಕಂತು	ಅರ್ಹ ರೈತ ಫಲಾನುಭವಿಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ
1	ಬಾಗಲಕೋಟೆ	322.14	1524.26	1307.83	3154.22	1898.11	314.32	1320.62	1179.55	2814.49	1812.54
2	ಬಳ್ಳಾರಿ	241.26	819.75	819.75	1880.76	456.96	210.30	746.96	746.96	1704.22	851.25
3	ಬೆಳಗಾವಿ	267.47	994.62	715.40	1977.49	506.58	317.86	1211.32	926.47	2455.64	583.34
4	ಬೆಂಗಳೂರು ಗ್ರಾ	6.30	17.74	17.74	41.77	9.12	6.24	18.77	18.77	43.78	42.16
5	ಬೆಂಗಳೂರು ನಗರ	0.91	3.40	3.40	7.71	0.79	0.92	3.58	3.47	7.97	3.61
6	ಬೀದರ್	1001.76	5996.40	5996.40	12994.56	6089.95	1155.43	6643.82	6643.82	14443.07	5475.51
7	ಚಾಮರಾಜನಗರ	83.65	365.00	362.13	810.78	192.98	68.47	338.47	331.26	738.21	312.08
8	ಚಿಕ್ಕಬಳ್ಳಾಪುರ	143.25	940.95	895.65	1979.86	189.08	61.73	413.25	389.70	864.69	721.78
9	ಚಿಕ್ಕಮಗಳೂರು	36.72	49.37	49.37	135.46	77.78	18.39	39.15	39.15	96.69	41.44
10	ಚಿತ್ರದುರ್ಗ	1292.85	7248.08	7220.38	15761.32	1597.14	973.00	5542.78	5510.22	12025.99	9510.90
11	ದಕ್ಷಿಣ ಕನ್ನಡ	1.55	1.16	1.16	3.87	7.44	1.34	0.97	0.97	3.29	1.71
12	ದಾವಣಗೆರೆ	200.87	183.83	183.83	568.52	538.88	214.42	242.54	242.54	699.49	812.86
13	ಧಾರವಾಡ	1788.51	7300.14	6415.13	15503.78	7555.36	2185.17	8909.29	8210.92	19305.39	8694.42
14	ಗದಗ	2094.80	10873.81	10363.91	23332.51	14423.68	2212.48	10156.24	9847.68	22216.41	9706.02
15	ಹಾಸನ	158.45	964.55	753.76	1876.76	1906.37	104.39	658.35	562.01	1324.75	2387.44
16	ಹಾವೇರಿ	1435.25	6841.96	6137.27	14414.48	3681.06	1612.02	7098.53	6734.97	15445.51	7080.28
17	ಕಲಬುರ್ಗಿ	429.82	1506.96	1506.96	3443.75	2157.88	711.40	2396.95	2396.95	5505.31	5397.18
18	ಕೊಡಗು	4.82	33.71	33.71	72.24	19.83	1.10	7.49	7.49	16.09	2.26
19	ಕೋಲಾರ	26.29	63.69	63.69	153.67	18.91	32.15	73.81	73.81	179.77	205.14
20	ಕೊಪ್ಪಳ	1125.97	6380.91	6374.38	13881.25	2718.24	991.21	5669.05	5562.14	12222.39	2940.17
21	ಮಂಡ್ಯ	10.84	94.29	47.87	153.00	213.41	29.77	234.49	131.97	396.24	485.29
22	ಮೈಸೂರು	21.63	97.93	97.93	217.48	57.08	53.42	333.83	326.19	713.44	120.76
23	ರಾಯಚೂರು	1095.15	3836.76	3635.87	8567.77	2406.72	894.65	3675.54	3328.40	7898.59	3504.20
24	ರಾಮನಗರ	2.71	5.32	5.32	13.35	5.91	6.31	9.56	9.56	25.44	67.00
25	ಶಿವಮೊಗ್ಗ	175.68	466.79	465.09	1107.57	294.96	161.63	452.61	450.02	1064.27	691.07
26	ತುಮಕೂರು	614.57	3719.21	3612.86	7946.65	331.40	488.24	3364.26	3004.43	6856.93	3279.93
27	ಉಡುಪಿ	3.32	23.28	23.28	49.87	6.90	1.63	11.43	11.43	24.50	0.65
28	ಉತ್ತರ ಕನ್ನಡ	391.88	1412.31	1412.31	3216.49	1304.13	350.29	1109.52	1109.52	2569.34	1032.00
29	ವಿಜಯಪುರ	1130.91	7852.33	7290.76	16274.00	13082.83	1187.38	7097.30	6930.72	15215.40	9731.76
30	ಯಾದಗಿರಿ	221.95	701.52	660.28	1583.75	352.47	185.48	681.56	621.05	1488.09	246.21
	ಒಟ್ಟು	14331.28	70320.02	66473.39	151124.69	62101.95	14551.17	68462.05	65352.16	148365.39	75740.96

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 634

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ. ಶೇಖರ್(ಹೊಸದುರ್ಗ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 14.09.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿನ ತೋಟಗಾರಿಕೆ ಇಲಾಖೆಗೆ ವಾರ್ಷಿಕವಾರು ಹಂಚಿಕೆಯಾದ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; ಖರ್ಚಾಗದೇ ವಾಪಸ್ ಅಭ್ಯರ್ಪಣೆ ಮಾಡಿದ ಅನುದಾನವೆಷ್ಟು; ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ.	ಕಳೆದ 3 ವರ್ಷಗಳಿಂದ ಅಂದರೆ 2019-20, 2020-21 ಮತ್ತು 2021-22 ನೇ ವಾರ್ಷಿಕವಾರು ಇಲಾಖೆಗೆ ಹಂಚಿಕೆಯಾದ, ಬಿಡುಗಡೆಯಾದ, ವೆಚ್ಚವಾದ ಮತ್ತು ಅಭ್ಯರ್ಪಣೆ ಮಾಡಲಾದ ಅನುದಾನ ವಿವರ ಈ ಕೆಳಕಂಡಂತಿದೆ. (ರೂ. ಕೋಟಿಗಳಲ್ಲಿ) [ಕೆಳಗಿನ ಕೋಷ್ಟಕ] ಯೋಜನಾವಾರು ಮಾಡಲಾದ ಖರ್ಚಿನ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ತೋಟಗಾರಿಕೆ ರೈತರಿಗೆ ಪ್ಯಾಕ್‌ಹೌಸ್, ಈರುಳ್ಳಿ ಘಟಕ ಇತ್ಯಾದಿಗಳನ್ನು ಎಷ್ಟು ಜನರಿಗೆ ಮಂಜೂರು ಮಾಡಲಾಗಿದೆ; ಕ್ಷೇತ್ರವಾರು ಹಂಚಿಕೆ ಮಾಡಿದ ವಿವರವೇನು; ಇದಕ್ಕೆ ಒದಗಿಸಿದ ಅನುದಾನವೆಷ್ಟು; ಖರ್ಚಾದ ಅನುದಾನವೆಷ್ಟು; ಖರ್ಚಾಗದೇ ಅಭ್ಯರ್ಪಣೆ ಮಾಡಲಾದ ಅನುದಾನವೆಷ್ಟು? (ವಿವರ ಒದಗಿಸುವುದು)	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ಪ್ಯಾಕ್ ಹೌಸ್, ಈರುಳ್ಳಿ ಶೇಖರಣಾ ಘಟಕಗಳನ್ನು ಮಂಜೂರು ಮಾಡಲಾದ, ಕ್ಷೇತ್ರವಾರು ಹಂಚಿಕೆ ಮಾಡಲಾದ, ಖರ್ಚಾದ ಮತ್ತು ಅಭ್ಯರ್ಪಣೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.

(ರೂ. ಕೋಟಿಗಳಲ್ಲಿ)

ವರ್ಷ	ಹಂಚಿಕೆ	ಬಿಡುಗಡೆ	ವೆಚ್ಚ	ಅಭ್ಯರ್ಪಣೆ
2019-20	924.31	870.40	849.06	4.41
2020-21	979.06	836.83	833.90	0.66
2021-22	803.91	745.03	533.01	1.09
ಒಟ್ಟು	2707.28	2452.25	2215.97	6.16

		(ರೂ. ಕೋಟಿಗಳಲ್ಲಿ)					
		ವರ್ಷ	ಮಂಜೂರಾತಿ ನೀಡಲಾದ ಕ್ರಿಯಾ ಯೋಜನೆ ಮೊತ್ತ	ಕ್ಷೇತ್ರವಾರು ಹಂಚಿಕೆ ಮಾಡಲಾದ ವಿವರ	ಬಿಡುಗಡೆಯಾದ ಅನುದಾನ	ಸಾಧನೆ	ಅಧ್ಯರ್ಪಣೆ ಮಾಡಲಾದ ಅನುದಾನ
		2019-20	28.63	28.86	31.46	31.36	0
		2020-21	43.17	43.96	48.80	48.63	0
		2021-22	22.96	22.59	22.56	22.03	0
		ಒಟ್ಟಾರೆ	94.76	95.41	102.82	102.02	0

No.HORTI 419 HGM 2022

(ಮಣಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**635**
ಸದಸ್ಯರ ಹೆಸರು	:	**ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)**
ಉತ್ತರಿಸುವ ದಿನಾಂಕ	:	**14-09-2022**
ಉತ್ತರಿಸುವ ಸಚಿವರು	:	**ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ನಗರ ಗ್ರಾಮಗಳಲ್ಲಿ ಇನ್ನೂ "ಅಸ್ಪೃಷ್ಯತೆ" ಪದ್ಧತಿ ಜೀವಂತವಾಗಿದೆ; ಚಿತ್ರದುರ್ಗ, ತುಮಕೂರು, ದಾವಣಗೆರೆ, ರಾಯಚೂರು ಜಿಲ್ಲೆಯಲ್ಲಿ ಯಾವ ಯಾವ ಗ್ರಾಮಗಳಲ್ಲಿ :ಅಸ್ಪೃಷ್ಯತೆ" ಜೀವಂತವಾಗಿದೆ	**ಚಿತ್ರದುರ್ಗ ಜಿಲ್ಲೆ:** 1. ದಿನಾಂಕ:24-12-2020 ರಂದು ದುಮ್ಮಿ ಗೊಲ್ಲರಹಟ್ಟಿ ಗ್ರಾಮದಲ್ಲಿ ಮೂಢನಂಬಿಕೆಗಳು ಮೌಢ್ಯ ಕಂದಾಚಾರದ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಹೋದ ಸಂದರ್ಭದಲ್ಲಿ ತಿಮ್ಮಪ್ಪ ದೇವಸ್ಥಾನದ ಬಳಿ ಹೋದಾಗ ಆರೋಪಿಗಳು ಹೊಳಲ್ಕೆರೆ ತಾಲ್ಲೂಕು, ಕಾಲ್ಕೆರೆ ಗ್ರಾಮದ ಶ್ರೀ ಪ್ರಕಾಶ್.ಕೆ ಬಿನ್ ಕೆಂಚಪ್ಪ ಮಾದಿಗ ಜನಾಂಗ, 38 ವರ್ಷ ಇವರನ್ನು ತಡೆದು ಅಡ್ಡಗಟ್ಟಿ ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಾಡಿ, ಪ್ರಾಣ ಬೆದರಿಕೆ ಹಾಕಿ ದೇವರಿಗೆ ಮೈಲಿಗೆಯಾದ ಕಾರಣ ಶುದ್ಧಿಕರಣ ಮಾಡಲು ರೂ.50,000/- ಗಳನ್ನು ದಂಡ ಕಟ್ಟಿ ಹೋಗು ಅಂತ ಗಲಾಟೆ ಮಾಡಿರುವ ಪ್ರಕರಣವು ಹೊಳಲ್ಕೆರೆ ಪೊಲೀಸ್ ಠಾಣೆ ಮೊ.ನಂ:242/2019 ದಿನಾಂಕ:25-12-2020 4.00 ಗಂಟೆಗೆ ದಾಖಲಾಗಿರುತ್ತದೆ. 2. ದಿನಾಂಕ:12-10-2021 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಫಿರ್ಯಾದಿ ದುರ್ಗೇಶಪ್ಪ ರವರು ಸಿದ್ದಾಪುರ ಗ್ರಾಮದ ಕೆರೆಯ ಬಳಿ ಇರುವ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೋಗಿ ವಾಪಸ್ ಬರುವಾಗ ಅದೇ ಗ್ರಾಮದ ಪ್ರಸನ್ನ, ಮನೋಜ್ ಮುತ್ತುರವರುಗಳು ಸೇರಿಕೊಂಡು ಫಿರ್ಯಾದಿಗೆ ನೀನು ಕೀಳು ಜಾತಿಯವನು ನಮ್ಮ ದೇವಸ್ಥಾನಕ್ಕೆ ಬಂದು ನಮ್ಮ ದೇವರನ್ನು ಅಪಮಾನಗೊಳಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ.ನಂ:401/2021 ದಿನಾಂಕ:12-10-2020 ರಂದು ಪ್ರಕರಣ ದಾಖಲಾಗಿರುತ್ತದೆ.

		ತುಮಕೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ. **<u>ರಾಯಚೂರು:</u>** ರಾಯಚೂರು ಜಿಲ್ಲೆ ರಾಯಚೂರು ತಾಲ್ಲೂಕಿನ ಜಂಬಲದಿನ್ನಿ ಗ್ರಾಮದಲ್ಲಿ, ಸಿಂಧನೂರು ತಾಲ್ಲೂಕಿನ ಗೋನ್ವಾರ ಗ್ರಾಮದಲ್ಲಿ, ಲಿಂಗಸುಗೂರು ತಾಲ್ಲೂಕಿನ ರಾಮಾತ್ನಳಾ, ಯಲಗಟ್ಟಾ, ರೋಡಲಬಂಡಾ ತವಗ, ಜೂಲಗುಡ್ಡ, ಮೇದಿನಾಪೂರು ಗ್ರಾಮಗಳಲ್ಲಿ ಅಸ್ಪೃಶ್ಯತೆ ಆಚರಣೆ ಇದ್ದು, ಸಹಾಯಕ ಆಯುಕ್ತರು, ತಾಲ್ಲೂಕಿನ ತಹಶೀಲ್ದಾರರು ಮತ್ತು ಸಹಾಯಕ ನಿರ್ದೇಶಕರುಗಳೊಂದಿಗೆ ಭೇಟಿ ನೀಡಿ, ಶಾಂತಿ ಸಭೆಯನ್ನು ಮಾಡಿ ಸಮಸ್ಯೆಯನ್ನು ಬಗೆಹರಿಸಲಾಗಿರುತ್ತದೆ.
ಆ)	ರಾಜ್ಯದಲ್ಲಿ ಯಾವ ಜಿಲ್ಲೆ, ಯಾವ ತಾಲ್ಲೂಕು, ಯಾವ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಜನರನ್ನು ಪರಿಶಿಷ್ಟ ಜಾತಿಯ ಸರ್ಕಾರಿ ಅಧಿಕಾರಿಗಳು ಗ್ರಾಮಗಳಿಗೆ ಪ್ರವೇಶ ನೀಡಲು ನಿರಾಕರಿಸಲಾಗುತ್ತಿದೆ; ಅಂತಹ ಹಳ್ಳಿಗಳು ಯಾವುವು; "ಅಸ್ಪೃಶ್ಯತೆ" ಪದ್ಧತಿಯಿಂದ ಹಳ್ಳಿಗಳಿಗೆ ಪ್ರವೇಶ ನಿರಾಕರಿಸುವವರ ವಿರುದ್ಧ ಸರ್ಕಾರ ಹಿಂದೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?	ಚಿತ್ರದುರ್ಗ, ತುಮಕೂರು, ದಾವಣಗೆರೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ. ಆದಾಗ್ಯೂ ಸಹ ರಾಜ್ಯದ ಕೆಲವೊಂದು ಗ್ರಾಮಗಳಲ್ಲ ದೇವಸ್ಥಾನಗಳಗೆ ಪ್ರವೇಶ ನಿರಾಕರಿಸುವುದು, ಕುಡಿಯುವ ನೀರಿಗೆ, ಪಡಿತರ ಅಂಗಡಿಗಳಗೆ ತೆರಳುವ, ಅಂಗನವಾಡಿ ಇತ್ಯಾದಿ ಸ್ಥಳಗಳಲ್ಲ ಅಡ್ಡಿಪಡಿಸುತ್ತಿರುವ ಪ್ರಕರಣಗಳು ಕಂಡು ಬರುತ್ತಿದ್ದು, ಅಂತಹ ಪ್ರಕರಣಗಳಲ್ಲ ಕಾನೂನಿನಂತೆ ಕ್ರಮವಹಿಸಲಾಗುತ್ತಿದೆ ಹಾಗೂ ವಿನಯ ಸಾಮರಸ್ಯ ದಂತಹ ಹೊಸ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಂಡು ಸಾರ್ವಜನಿಕರಲ್ಲ ಅರಿವು ಮೂಡಿಸಲಾಗುತ್ತಿದೆ.

ಸಕಇ 577 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	636
ಮಾನ್ಯ ಸದಸ್ಯರ ಹೆಸರು	ಶ್ರೀ ವೀರಭದ್ರಯ್ಯ ಎಂ.ವಿ, (ಮಧುಗಿರಿ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಧುಗಿರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಾಗಿ ಗೊಲ್ಲರಟ್ಟಿಗಳಿದ್ದು, ಈ ಗೊಲ್ಲರಹಟ್ಟಿಗಳಲ್ಲಿ ಸರಿಯಾದ ಮೂಲಭೂತ ಸೌಲಭ್ಯಗಳಿಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಿ, ಗೊಲ್ಲರಹಟ್ಟಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿಸಂಖ್ಯೆ. ಆಇ 01 ವೆಚ್ಚ 03/2022, ದಿನಾಂಕ: 05.04.2022ರಲ್ಲಿ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ಯೋಜನೆಯಡಿ ಮೂಲಭೂತ ಸೌಕರ್ಯ ಕಾರ್ಯಕ್ರಮಗಳನ್ನು ಕೈಬಿಡುವುದು ಎಂದು ಸೂಚಿಸಿದ್ದು ಸದರಿ ಟಿಪ್ಪಣಿಯಂತೆ ಕ್ರಮವಹಿಸಲು ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸರ್ಕಾರದ ಪತ್ರಸಂಖ್ಯೆ:ಹಿಂವಕ 331 ಬಿಎಂಎಸ್ 2021 ದಿನಾಂಕ:22.04.2022 ರಲ್ಲಿ ತಿಳಿಸಲಾಗಿರುತ್ತದೆ. ಮುಂದುವರೆದು, ಮೂಲಭೂತ ಸೌಕರ್ಯ ಕಾರ್ಯಕ್ರಮವನ್ನೊಳಗೊಂಡಂತೆ ಕೈಬಿಡಲಾಗಿರುವ ಅಲೆಮಾರಿ/ ಅರೆ ಅಲೆಮಾರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರೆಸಲು ಅನುದಾನದ ಲಭ್ಯತೆಯನುಸಾರವಾಗಿ ಪರಿಶೀಲಿಸಲಾಗುವುದು.

ಸಂಖ್ಯೆ: ಬಿಸಿಡಬ್ಲ್ಯೂ 520 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

/890696

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 637
ಸದಸ್ಯರ ಹೆಸರು : ಶ್ರೀ ಲಿಂಗೇಶ್ ಕೆ. ಎಸ್.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 14.09.2022

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಮುಷ್ಕರದ ವೇಳೆ ಲಿಖಿತವಾಗಿ ನೀಡಿದ ಭರವಸೆಗಳಿಗೆ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಮುಷ್ಕರ ನಿರತ ಸಿಬ್ಬಂದಿಗಳಿಗೆ ನೀಡಿದ ಒಟ್ಟು 9 ಲಿಖಿತ ಬೇಡಿಕೆಗಳಲ್ಲಿ ಆಗಿರುವ ಕ್ರಮದ ವಿವರಗಳನ್ನು **ಅನುಬಂಧ-ಅ** ರಲ್ಲಿ ನೀಡಲಾಗಿದೆ.
ಆ.	ಈ ನೌಕರರಿಗೆ 6ನೇ ವೇತನ ಆಯೋಗ ಜಾರಿಯ ಬಗ್ಗೆ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ನಾಲ್ಕೂ ಸಾರಿಗೆ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡ ಸಮಿತಿಯು ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
ಇ.	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ನೌಕರರಿಗೆ 6ನೇ ವೇತನ ಜಾರಿಗೊಳಿಸಲಾಗುವುದು ;	
ಈ.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಏಕ ವ್ಯಕ್ತಿ ಸಮಿತಿ ಶ್ರೀನಿವಾಸಮೂರ್ತಿರವರ ವರದಿ ಸಲ್ಲಿಕೆಯ ನಂತರ ಈ ನಿಗಮದ ನೌಕರರ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವುದಾಗಿ ತಿಳಿಸಿದ್ದು, ವರದಿ ಸಲ್ಲಿಕೆಯ ನಂತರ ನೌಕರರ ಭರವಸೆಗಳನ್ನು ಬಗೆಹರಿಸುವಲ್ಲಿ ತೆಗೆದುಕೊಂಡು ಕ್ರಮಗಳೇನು? (ಮಾಹಿತಿ ಒದಗಿಸುವುದು)	ಸಾರಿಗೆ ಸಂಸ್ಥೆಗಳ ಪುನ:ಶ್ಚೇತನ, ಆರ್ಥಿಕ ಸ್ವಾವಲಂಬನೆ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಲು ಶ್ರೀ ಎಂ.ಆರ್.ಶ್ರೀನಿವಾಸ ಮೂರ್ತಿ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಏಕ ಸದಸ್ಯ ಸಮಿತಿಯು ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಪ್ರಾರಂಭಿಕವಾಗಿ ನಾಲ್ಕೂ ಸಾರಿಗೆ ಸಂಸ್ಥೆಗಳಿಗೆ ಒಟ್ಟು ರೂ. 1200.00 ಕೋಟಿಗಳ ಸಹಾಯವನ್ನು (ಕ.ರಾ.ರ.ಸಾ.ನಿಗಮ - ರೂ.330.00 ಕೋಟಿ, ಬೆಂ.ಮ.ಸಾ.ಸಂಸ್ಥೆ - ರೂ.420.00 ಕೋಟಿ, ವಾ.ಕ.ರ.ಸಾ.ಸಂಸ್ಥೆ - ರೂ.320.00 ಮತ್ತು ಕ.ಕ.ರ.ಸಾ.ನಿಗಮ - ರೂ.130.00) ಸರ್ಕಾರದಿಂದ ಮಂಜೂರು ಮಾಡಿದ್ದು, ಸದರಿ ಅನುದಾನವನ್ನು ಇಂಧನ ವೆಚ್ಚ ಹಾಗೂ ಭವಿಷ್ಯ ನಿಧಿ ಬಾಕಿ ಪಾವತಿಗಾಗಿ ಒದಗಿಸಲಾಗಿದೆ.

ಸಂಖ್ಯೆ: ಟಿಡಿ 194 ಟಿಸಿಕ್ಯೂ 2022

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	638
ಮಾನ್ಯ ಸದಸ್ಯರ ಹೆಸರು	ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	14.09.2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣ ಯೋಜನಾನುಷ್ಠಾನಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರು ಮಾಡಿರುವ ಅನುದಾನವೆಷ್ಟು; ಸಲ್ಲಿಕೆಯಾದ ಒಟ್ಟು ಮನವಿಗಳೆಷ್ಟು; (ವಿವರ ನೀಡುವುದು)	ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣ ಯೋಜನಾನುಷ್ಠಾನಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರು ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ. ಕ್ರ. ಸಂ | ಆರ್ಥಿಕ ವರ್ಷ | ಸಂಸ್ಥೆಗಳ ಸಂಖ್ಯೆ | ಮಂಜೂರು ಮಾಡಿದ ಮೊತ್ತ. (ರೂ.ಲಕ್ಷಗಳಲ್ಲಿ) 1 | 2020-21 | 13 | 340.00 2 | 2021-22 | 12 | 960.00 ಸಂಘ-ಸಂಸ್ಥೆ ಹಾಗೂ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಸಮುದಾಯ ಭವನ/ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡುವಂತೆ ಕೋರಿ ವಿವಿಧ ಸಂಘ-ಸಂಸ್ಥೆಗಳಿಂದ ಕಳೆದ ಎರಡು ವರ್ಷಗಳಲ್ಲಿ ಒಟ್ಟು ನಾಲ್ಕು ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಆ)	ಅತೀ ಹಿಂದುಳಿದ ಹಾಗೂ ಕಡಿಮೆ ಸಂಖ್ಯೆಯಲ್ಲಿರುವ ಜಾತಿ/ಜನಾಂಗಗಳಿಗೆ ಆದ್ಯತೆ ನೀಡುವ ಕುರಿತು ಅನುಸರಿಸುತ್ತಿರುವ ಮಾನದಂಡಗಳೇನು;	ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ವಿವಿಧ ಸಂಘ-ಸಂಸ್ಥೆಗಳಿಗೆ / ಟ್ರಸ್ಟ್‌ಗಳಿಗೆ ಸಮುದಾಯ ಭವನ/ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 695 ಬಿಎಂಎಸ್ 2014(ಭಾ-2) ದಿನಾಂಕ: 05.11.2014 ಮತ್ತು ಸರ್ಕಾರದ ಆದೇಶ ಸಂಖ್ಯೆ: ಹಿಂವಕ 1133 ಬಿಎಂಎಸ್ 2017 ದಿನಾಂಕ: 29.11.2017 ರಲ್ಲಿನ ಮಾರ್ಗಸೂಚಿಗಳನ್ವಯ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಮಾರ್ಗ ಸೂಚಿಗಳ ಆದೇಶಗಳ ಪ್ರತಿಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಇ)	ದಕ್ಷಿಣ ಕನ್ನಡ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಈಗಾಗಲೇ ಅನುದಾನ ಮಂಜೂರು ಮಾಡಿದ್ದರೂ ಸಮುದಾಯದ ಫಲಾನುಭವಿಗಳು ವಿವಿಧ ಕಾರಣಗಳಿಗಾಗಿ ಅನುದಾನ ಪಡೆಯಲು ಸಾಧ್ಯವಾಗಿಲ್ಲ ಎಂದು ಪರಿಗಣಿತವಾದ ಎಷ್ಟು ಪ್ರಕರಣಗಳು ಬಾಕಿ ಉಳಿದಿವೆ; ಜಿಲ್ಲಾವಾರು ಅನುದಾನದ ಮೊತ್ತವೆಷ್ಟು; ಆ ಕುರಿತು ಸರ್ಕಾರದ ಮುಂದಿನ ಕ್ರಮಗಳೇನು?	ದಕ್ಷಿಣಕನ್ನಡ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಈಗಾಗಲೇ ಸರ್ಕಾರದಿಂದ ಅನುದಾನ ಮಂಜೂರು ಮಾಡಿದ್ದರೂ ಸಹ 69 ಸಂಘ-ಸಂಸ್ಥೆಯವರು ವಿವಿಧ ಕಾರಣಗಳಿಂದಾಗಿ ಅನುದಾನ ಪಡೆಯಲು ಸಾಧ್ಯವಾಗಿರುವುದಿಲ್ಲ. ಜಿಲ್ಲಾವಾರು ಸಂಘ-ಸಂಸ್ಥೆಗಳ ಸಂಖ್ಯೆ ಮತ್ತು ಮೊತ್ತದ ವಿವರವನ್ನು ಅನುಬಂಧ-4ರಲ್ಲಿ ನೀಡಲಾಗಿದೆ.. ಸರ್ಕಾರದ ವಿವಿಧ ಆದೇಶಗಳಲ್ಲಿ ಸಂಘ-ಸಂಸ್ಥೆಗಳಿಗೆ ಸಹಾಯಧನ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. ಸಂಬಂಧಪಟ್ಟ ಸಂಘ-ಸಂಸ್ಥೆಗಳು ಸರ್ಕಾರದ ಮಾರ್ಗಸೂಚಿಗಳನ್ವಯ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ, ಸದರಿ ಯೋಜನೆಯಡಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಬಿಸಿಡಬ್ಲ್ಯೂ 510 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಉಮಾನಾಥ ಕೋಟ್ಯಾನ(ಮೂಡಬಿದ್ರೆ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:638ರ ಪೂರಕ ಟಿಪ್ಪಣಿ.

*****

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿವಿಧ ಜಾತಿ ಜನಾಂಗಗಳ ಸಮುದಾಯ ಚಟುವಟಿಕೆಗಳನ್ನು ಹಾಗೂ ವಿದ್ಯಾರ್ಥಿನಿಲಯಗಳನ್ನು ನಡೆಸಲು ವಿವಿಧ ಹಿಂದುಳಿದ ವರ್ಗಗಳ ಜಾತಿಗಳಿಗೆ ಸೇರಿದ ಸಂಘ-ಸಂಸ್ಥೆಗಳಿಗೆ ಸಮುದಾಯ/ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರು ಮಾಡಲಾಗುತ್ತಿದೆ. ಅನುದಾನ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 695 ಬಿಎಂಎಸ್ 2014(ಭಾ-2), ದಿನಾಂಕ:05.11.2014 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 1133 ಬಿಎಂಎಸ್ 2017, ದಿನಾಂಕ:29.11.2017ರಲ್ಲಿ ಆದೇಶ ಹೊರಡಿಸಿದ್ದು, ಪ್ರಸ್ತುತ ಜಾರಿಯಲ್ಲಿರುತ್ತದೆ.

